ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 33 ಆಗಸ್ಟ್ 16, 1981 ಬೆಲೆ : 60 ಪೈಸೆ

ಸ್ವಾತಂತ್ರ್ಯ ದಿನದ ಮಹತ್ವ

ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರೆತು 34 ವರ್ಷಗಳಾಗಿ 35ಕ್ಕೆ ನಾವೀಗ ಕಾಲಿಡುತ್ತಿದ್ದೇವೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಶತಮಾನಗಳ ದಾಸ್ಯವನ್ನು ಕೊನೆಗಾಣಿಸಿ ನಾವು 1947, ಆಗಸ್ಟ್ 15ರಂದು ಸ್ವತಂತ್ರರಾದೆವು. ಅದರ ನಂತರ ನಮ್ಮ ಜನತೆಯ ಹೋರಾಟದ ಸ್ವರೂಪವೇ ಬೇರೆ.

ಬ್ರಿಟಿಷ್ ಆಡಳಿತೆಯ ವಿರುದ್ಧ ನಮ್ಮ ಜನ ನಡೆಸಿದ ಹೋರಾಟ ಅತ್ಯಂತ ಸ್ಫೂರ್ತಿದಾಯಕವಾಗಿದೆ. ಅದನ್ನೆಲ್ಲರೂ ತಿಳಿಯುವುದಗತ್ಯ. 1857ರ ಪ್ರಥಮ ಬಂಡಾಯದಿಂದ ಆರಂಭವಾದ ಸ್ವಾತಂತ್ರ್ಯ ಹೋರಾಟ ಎಡೆಬಿಡದೆ ಮುಂದುವರೆಯಿತು. ಬ್ರಿಟಿಷರ ಪೈಶಾಚಿಕ ದಬ್ಬಾಳಿಕೆಯನ್ನೆದುರಿಸಿ ನಮ್ಮ ಜನತೆ ಕೆಚ್ಚೆದೆಯಿಂದ ಹೋರಾಡಿತು. ಲಕ್ಷಾಂತರ ಜನ ಜೈಲುವಾಸವನ್ನನುಭವಿಸಿದರು. ಸಹಸ್ರಾರು ಜನ ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಅಸಂಖ್ಯಾತ ಜನ ತಮ್ಮ ಸರ್ವಸ್ವವನ್ನೂ ಕಳಕೊಂಡು ನಿರ್ಗತಿಕರಾದರು. ಆದರೆ ಭಾರತದ ವೀರಜನತೆ, ಕಾರ್ಮಿಕರೂ, ರೈತರೂ, ವಿದ್ಯಾರ್ಥಿಗಳೂ, ಮಧ್ಯಮವರ್ಗದವರೂ, ಎಲ್ಲ ರಾಷ್ಟ್ರಪ್ರೇಮಿಗಳೂ ಯಾವ ದಬ್ಬಾಳಿಕೆಗೂ ಮಣಿಯದೆ ನಡೆಸಿದ ಹೋರಾಟ 1947ರಲ್ಲಿ ಸಫಲವಾಯಿತು. ಬ್ರಿಟಿಷ್ ಧ್ವಜ ಕೆಳಗಿಳಿಯಿತು. ಭಾರತದ ಧ್ವಜ ಮೇಲೇರಿತು. ವಿದೇಶೀಯರ ಗುಲಾಮಗಿರಿ ಅಂತ್ಯಗೊಂಡಿತು.

ಈ ಸ್ವಾತಂತ್ರ್ಯ ಹೋರಾಟ ಕಾಂಗ್ರೆಸ್ಸಿನ ಗುತ್ತಿಗೆಯೆಂದು ಪ್ರಚಾರ ಮಾಡುವವರು ಕೆಲವರಿದ್ದಾರೆ. ಇದು ನಿಜವಲ್ಲ. ಇದೊಂದು ಇಡೀ ಜನತೆಯ ಹೋರಾಟ. ಆರಂಭದಿಂದಲೂ ಕಮ್ಯುನಿಸ್ಟರು ಈ ಚಳುವಳಿಯಲ್ಲಿ ಭಾಗವಹಿಸಿದ್ದಲ್ಲದೆ, ಆ ಹೋರಾಟವು ಪರಿಣಾಮಕಾರಿಯಾಗಿ ನಡೆಯುವಂತೆ ಮಾಡಲು ತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸಿದರು. ಕಾಂಗ್ರೆಸ್ ನಾಯಕರು ಬ್ರಿಟಿಷರ ಜೊತೆಗೆ ಸಂಧಾನ ನಡೆಸಲು ಪ್ರಯತ್ನಿಸಿದಾಗಲೆಲ್ಲ ಅದರ ವಿರುದ್ಧ ತೀವ್ರ ಹೋರಾಟ ನಡೆಸಿದ ಹೆಮ್ಮೆ ಕಮ್ಯುನಿಸ್ಟರಿಗಿದೆ. ಆರಂಭದಲ್ಲಿ ಕಾಂಗ್ರೆಸ್ ನಾಯಕರು ನಮ್ಮ ಗುರಿ, 'ಸ್ವಾತಂತ್ರ್ಯ'ವೆಂದು ಹೇಳಲಿಕ್ಕೂ ಹಿಂದೇಟು ಹಾಕುತ್ತಿದ್ದಾಗ 'ಸಂಪೂರ್ಣ ಸ್ವಾತಂತ್ರ್ಯ'ವೇ ನಮ್ಮ ಗುರಿಯೆಂಬುದಕ್ಕೆ ಹೋರಾಡಿದವರು ಕಮ್ಯುನಿಸ್ಟರು. ಕಾನ್‌ಪೂರ್ ಪಿತೂರಿ ಮೀರತ್ ಪಿತೂರಿ ಮುಂತಾದ ಖಟ್ಲೆಗಳಲ್ಲಿ ಬ್ರಿಟಿಷರ ಪಿತೂರಿಗಳನ್ನು ಬಯಲಿಗೆಳೆದು ದೇಶದ ಯುವಕರಿಗೆ ಸರಿಯಾದ ಮಾರ್ಗದರ್ಶನವನ್ನು ನೀಡಿದರು. ಕಮ್ಯುನಿಸ್ಟ್ ಪಾರ್ಟಿಯು ಕಾಂಗ್ರೆಸ್ಸಿನ ಒಳಗೂ, ಹೊರಗೂ ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟದ ಫಲವಾಗಿ ಸ್ವಾತಂತ್ರ್ಯ ಚಳುವಳಿಯ ವಿವಿಧ ವಿಭಾಗಗಳ ಉತ್ತಮ ಕಾರ್ಯಕರ್ತರು ಕಮ್ಯುನಿಸ್ಟ್ ಪಾರ್ಟಿಗೆ ಬಂದು ಸೇರಿಕೊಂಡರು. ಭಗತ್‌ಸಿಂಗ್‌ರವರ ಅನುಯಾಯಿಗಳೂ, ಬಂಗಾಳದ ಕ್ರಾಂತಿಕಾರಿಗಳೂ ಕಮ್ಯುನಿಸ್ಟ್ ಪಾರ್ಟಿಯಲ್ಲಿ ಬಂದರು. ಎರಡನೇ ಜಾಗತಿಕ ಯುದ್ಧದ ಕಾಲದಲ್ಲೂ, ಅದರ ನಂತರವೂ ನಮ್ಮ ಪಾರ್ಟಿ ಅನುಸರಿಸಿದ ಧೋರಣೆಯ ಪರಿಣಾಮವಾಗಿ ಹೋರಾಟವು ತೀವ್ರಗೊಂಡು ಯುದ್ಧ ನಿಂತ ಮೇಲೆ ಹೋರಾಟವು ಬಂಡಾಯ ಸ್ವರೂಪ ತಾಳಿತು. ನಾವಿಕರ ಬಂಡಾಯ ನಡೆಯಿತು. ಬೆಂಬಲವಾಗಿ ದೇಶದಾದ್ಯಂತ ಕಾರ್ಮಿಕರ ಮುಷ್ಕರಗಳೂ ನಡೆದವು. ಕಾಡ್ಗಿಚ್ಚಿನಂತೆ ಹೋರಾಟ ಹರಡಿತು. ಇದನ್ನು ಕಂಡು ಬ್ರಿಟಿಷರು ಕಾಲ್ತೆಗೆಯಬೇಕಾಯಿತು. ಅಧಿಕಾರದ ವರ್ಗಾವಣೆಯಾಯಿತು.

ಈ ಚಳುವಳಿಯಲ್ಲಿ ಭಾಗವಹಿಸಿದ ಜನತೆಯ ಆಶೋತ್ತರಗಳು ಈಡೇರಲಿಲ್ಲ. ಅಧಿಕಾರ ನಮ್ಮ ಜನತೆಯ ಕೈಯಲ್ಲಿ ಬಂದರೂ ಸಹ ಅಧಿಕಾರದ ಉಪಯೋಗ ಬಂಡವಾಳಶಾಹಿಗಳಿಗಾಗಿದೆಯೇ ಹೊರತು ಸಾಮಾನ್ಯ ಜನತೆಗೆ ಆಗಿಲ್ಲ.

ಕೇಂದ್ರದಲ್ಲಿ ಇಂದಿರಾಕಾಂಗ್ರೆಸ್ ಈಗ ಅಧಿಕಾರದಲ್ಲಿದೆ. 1977ರಿಂದ 1980ರ ವರೆಗೆ ಜನತಾ ಸರಕಾರವಿದ್ದರೂ, 1947ರಿಂದ ಈ ವರೆಗೆ ಕಾಂಗ್ರೆಸ್ ಆಡಳಿತೆ ಇತ್ತೆಂದೆನ್ನಬಹುದು. ಈ ಆಡಳಿತೆಯ ಪರಿಣಾಮವಾಗಿ ಹಣದುಬ್ಬರ, ಬೆಲೆಯೇರಿಕೆ, ನಿರುದ್ಯೋಗ ನಮ್ಮ ದೇಶದಲ್ಲಿ ತಾಂಡವವಾಡ್ತುತ್ತಿದೆ. ಭ್ರಷ್ಟಾಚಾರ ಜನತೆಯನ್ನು ಪೀಡಿಸುತ್ತಿದೆ. ಇವುಗಳ ವಿರುದ್ಧ, ತಮ್ಮ ನ್ಯಾಯವಾದ ಬೇಡಿಕೆಗಳಿಗೆ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಇತರ ಜನವಿಭಾಗದವರು ಹೋರಾಟ ನಡೆಸಿದರೆ ಅಮಾನುಷ ದಬ್ಬಾಳಿಕೆಯನ್ನೆದುರಿಸಬೇಕಾಗುತ್ತದೆ. ತುರ್ತುಪರಿಸ್ಥಿತಿಯ ಅನುಭವ, ಎಲ್ಲ ನಾಗರಿಕ ಹಕ್ಕುಗಳನ್ನು ಮೊಟಕುಮಾಡಿದ ಈ ಸರಕಾರ ಈಗ ಪುನಃ ತನ್ನ ನಿಜ ಬಣ್ಣವನ್ನು ತೋರಿಸಲು ಮುಂದೆ ಬಂದಿದೆ. ರಾಷ್ಟ್ರ ಸಂರಕ್ಷಣಾ ಕಾನೂನನ್ನು ತಂದಿದೆ. ಅವಶ್ಯ ಸೇವಾ ವಸೂದೆಯೆಂಬ ತುರ್ತು ಆಜ್ಞೆಯನ್ನು ಹೊರಡಿಸಿದೆ. ಕಾರ್ಮಿಕರ ಮೇಲೆ ದಾಳಿ, ರಾಜ್ಯಗಳ ಹಕ್ಕುಗಳ ಮೇಲೆ ದಾಳಿ, ರಾಜ್ಯಪಾಲರುಗಳನ್ನು ಮುನ್ಸೂಚನೆ ಇಲ್ಲದೆಯೆ ವಜಾಮಾಡುವುದು ಮುಂತಾದ ಕ್ರಮಗಳಿಂದ ಪ್ರಜಾಪ್ರಭುತ್ವಕ್ಕೆ ಧಕ್ಕೆ ತಂದಿದೆ. ಸರ್ವಾಧಿಕಾರದ ಅಪಾಯ ಬರುತ್ತಿದೆ.

ಇದರ ವಿರುದ್ಧ ಕೇರಳ, ಪಶ್ಚಿಮ ಬಂಗಾಲ ಮತ್ತು ತ್ರಿಪುರಾಗಳ ಸರಕಾರಗಳು ಹೋರಾಡುತ್ತಿವೆ. ನಮ್ಮ ದೇಶದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೂ, ಸಂಘಟನೆಗಳೂ, ಜನತೆಯೂ ಒಂದುಗೂಡಿ ಸಾಮ್ರಾಜ್ಯಶಾಹಿ ಪಿತೂರಿಗಳನ್ನೆದುರಿಸಿ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಲಿಕ್ಕೂ, ರೈತ-ಕಾರ್ಮಿಕರ ಹೋರಾಟವನ್ನು ಬೆಳೆಸಲಿಕ್ಕೂ, ಸಮಾಜದಲ್ಲಿ ನಡೆಯುತ್ತಿರುವ ಸುಲಿಗೆ-ಶೋಷಣೆಯನ್ನು ಕೊನೆಗಾಣಿಸಲಿಕ್ಕೂ ಪ್ರಜಾಪ್ರಭುತ್ವವನ್ನು ರಕ್ಷಿಸಲಿಕ್ಕೂ ಹೋರಾಡಲು ಈ ಸ್ವಾತಂತ್ರ್ಯದಿನದಂದು ಪ್ರತಿಜ್ಞೆ ಮಾಡಲೆಂದು ನಮ್ಮ ಅಭಿಲಾಷೆ. ●

ಇದರ ವಿರುದ್ಧದ ಹೋರಾಟದಲ್ಲಿ ಸಹಕರಿಸಲು ಎಲ್ಲರಿಗೂ ಕರೆ ನೀಡಿದರು. ಆದರೆ ಅವರನ್ನು ಸಾಮ್ರಾಜ್ಯವಾದದ ಏಜಂಟರೆಂದು ಕರೆದರು. 1947ರ ಅಧಿಕಾರ ಹಸ್ತಾಂತರವನ್ನು ಮತ್ತು ತದನಂತರದ ಮೂವತ್ತು ವರ್ಷಗಳ ಕಾಂಗ್ರೆಸ್ ಆಳ್ವಿಕೆಯ ಸಂಗತಿಗಳನ್ನು ಅರಿತುಕೊಳ್ಳಬಲ್ಲ ಪ್ರತಿಯೊಬ್ಬನಿಗೂ ಈ ಆಳುವವರ್ಗವೇ ಸಾಮ್ರಾಜ್ಯವಾದದ ಏಜಂಟನಾಗಿದೆಯಲ್ಲದೆ ಕಮ್ಯುನಿಸ್ಟರು ಅವಿರತ ಸಾಮ್ರಾಜ್ಯಶಾಹೀ ವಿರೋಧಿಗಳಾಗಿದ್ದಾರೆಂದು ಧೃಡಪಡಿಸುತ್ತದೆ. ದ್ವಿತೀಯ ಯುದ್ಧದ ಯಶಸ್ವಿ ಮುಕ್ತಾಯದ ನಂತರವೇ ಭಾರತವು ಸ್ವಾತಂತ್ರ್ಯ ಪಡೆಯಿತೆಂಬ ಸಂಗತಿಯೇ ಕಮ್ಯುನಿಸ್ಟರ ತಿಳುವಳಿಕೆ ಸರಿಯಾಗಿತ್ತೆಂದು ಸಿದ್ಧಮಾಡುತ್ತದೆ. ದ್ವಿತೀಯ ಯುದ್ಧದಲ್ಲಿ ಸೋವಿಯೆತ್

ಕೊರಿಯಾ, ವಿಯತ್‌ನಾಮ್ ಮತ್ತಿತರ ಕಡೆಗಳಲ್ಲಿ ಕಾರ್ಮಿಕವರ್ಗದ ನಾಯಕತ್ವದಲ್ಲಿ ನಡೆದ ರಾಷ್ಟ್ರೀಯ ವಿಮೋಚನಾ ಚಳುವಳಿಗಳು ವಸಾಹತುವಾದದ ಸಂಕೋಲೆಗಳನ್ನು ಸಂಪೂರ್ಣ ಹರಿದೊಗೆದವು. 34 ವರ್ಷಗಳಷ್ಟು ಹಿಂದೇ ಬ್ರಿಟೀಷರ ನೇರ ಆಡಳಿತ ಕೊನೆಗೊಂಡಿದ್ದರೂ ಸಾಮ್ರಾಜ್ಯವಾದ, ಗುತ್ತೇದಾರಿ ಬಂಡವಾಳ ಮತ್ತು ಭೂಮಾಲಕರು ಜನರ ಸುಲಿಗೆಯನ್ನು ಮುಂದುವರಿಸುತ್ತಿದ್ದಾರೆ. ವ್ಯಂಗ್ಯವೆಂದರೆ ವ್ಯರಿಯನ್ನು ನೇರವಾಗಿ ಗುರುತಿಸಿ ರಾಷ್ಟ್ರೀಯ ಚಳುವಳಿಯ ಕಾಲಕ್ಕೆ ಮಾಡಿದಂತೆ ಹೋರಾಟ ನಡೆಸುವುದಕ್ಕೆ ಸಾಧ್ಯವಾಗುತ್ತಿಲ್ಲ.

ಆದೇವಿದ್ದರೂ ಭಾರತದ ರಾಜಕೀಯ ಪರಿಸ್ಥಿತಿಯು ಯಾವ ಹಂತವನ್ನು ಮುಟ್ಟಿದೆ ಎಂದರೆ ಸಾಮ್ರಾಜ್ಯವಾದಿಗಳ ಹಸ್ತವನ್ನು ಗುರುತಿಸಬಹುದು. ಸಾಮ್ರಾಜ್ಯವಾದಿಗಳು

ರನ್ನು ಮೇಲೆತ್ತುವ ಉದ್ದೇಶವನ್ನೂ ಇವು ಹೊಂದಿರಲಿಲ್ಲ, ಬದಲಾಗಿ ಜನತೆಯನ್ನು ಒಡೆಯುವ ಉದ್ದೇಶವನ್ನು ಹೊಂದಿದ್ದವು. ಸಾಮ್ರಾಜ್ಯವಾದಿಗಳು ಈ ಎಲ್ಲ ವಿಚ್ಛಿದ್ರಕಾರಿ ಶಕ್ತಿಗಳನ್ನೂ ಈಗ ಅನೇಕ ಪಟ್ಟು ಪ್ರಬಲಗೊಳಿಸಿದ್ದಾರೆ.

ವಿಶಾಲವಾದ ಈ ದೇಶದ ವಿವಿಧ ರಾಷ್ಟ್ರೀಯತೆಗಳಲ್ಲಿ ಕೈಹಾಕಲು ಸಾಮ್ರಾಜ್ಯಶಾಹಿ ಸಮರ್ಥವಾಗಿದೆ. ಈ ದೇಶವು ವಿವಿಧ ರಾಷ್ಟ್ರೀಯತೆಗಳ ಒಕ್ಕೂಟವೆಂದು ಕಮ್ಯುನಿಸ್ಟರು ಹೇಳುತ್ತಾ ಬರೆದಿದ್ದಾರೆ. ಈ ದೇಶವನ್ನು ವಿಭಜಿಸಿದ ದ್ವಿರಾಷ್ಟ್ರ ನೀತಿಯನ್ನು ಅವರು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಆದ್ದರಿಂದ ಭಾಷಾವಾರು ಪ್ರಾಂತರಚನೆಗಾಗಿ ಮತ್ತು ಈ ಒಂದೇ ರಾಷ್ಟ್ರೀಯತೆಯಡಿಯಲ್ಲಿ ಬರುವ ವಿವಿಧ ಭಾಷಾವಾರು ರಾಜ್ಯಗಳ ಸಮಾನ ಬೆಳವಣಿಗೆಗಾಗಿ ಪ್ರಚಾರ ಮಾಡಿದಾರೆ.

ಬಿಳಿದೊಗಲ ಸುಲಿಗೆಗಾರರನ್ನು ಕಡಲಾಚೆಗೆ ಎಸೆದ ಮಹಾಸಮರದಲ್ಲಿ ಹುತಾತ್ಮರಾದವರ ಸಂಖ್ಯೆ ಸಹಸ್ರಸಹಸ್ರ. ಆ ವೀರಯೋಧರು ಬಸಿದ ರಕ್ತ ವೀಗ ಹೆಪ್ಪುಗಟ್ಟಿದ ಕೆಂಪು ಮಡುವು. ಅಳೆಯಲಾಗದ ವಿಸ್ತಾರ ಅದರದು. ಆ ತಟಾಕದ ಆಳದಿಂದ ಹುತಾತ್ಮರ ಚೇತನ ಹುಯಿಲಿಡುತ್ತಿದೆ :

"ನಾವೆಲ್ಲ ಕನಸುಕಂಡ ಹೊಸಬದುಕು ಕೈಗೂಡಿತೆ? ಉಳುವವನು ಹೊಲದೊಡೆಯನಾದನೆ? ತಾನು ಸೃಷ್ಟಿಸುವ ಸಂಪತ್ತಿನ ಒಡೆತನ ಶ್ರಮಜೀವಿ ವರ್ಗದ ಕೈಗೆ ಬಂತೆ? ದಲಿತರು, ಜೀತಗಾರರು, ಕೊಳೆಗೇರಿಯ ಬಡಪಾಯಿಗಳು, ಒಪ್ಪೊತ್ತಿನ ಊಟದಿಂದಲೂ ವಂಚಿತರು ಈಗಿಲ್ಲವೆ? ಗುತ್ತಿಗೆ ಬಂಡವಾಳಗಾರರ, ನವಸಾಮ್ರಾಜ್ಯವಾದಿಗಳ ಕಂಟಕದಿಂದ ದೇಶ ಮುಕ್ತವೆ? ನಿರ್ಭಯವಾಗಿ ಮಾತನಾಡುವ, ಬರೆಯುವ, ಒಗ್ಗೂಡಿ ವಾದಿಸುವ, ನ್ಯಾಯಸಮ್ಮತ ಹಕ್ಕುಗಳಿಗಾಗಿ ಹೋರಾಡುವ ಸ್ವಾತಂತ್ರ್ಯ ನಿಮಗಿದೆಯೆ? ಇಲ್ಲ-ಎನ್ನುತ್ತೀರಾ? ಇಲ್ಲ, ಯಾಕೆ? ಯಾಕೆ?"

ಹೊಸಪೇಟೆಯಲ್ಲಿ ಪೋಲೀಸ್ ದೌರ್ಜನ್ಯ

ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಪೋಲೀಸ್ ಪಾಳೆಯಗಾರಿಕೆ ನಡೆದಿದೆ. ಚಳುವಳಿಕಾರರನ್ನು ಬಂಧಿಸಿ ಪೋಲೀಸ್ ಸ್ಟೇಷನ್‌ನಲ್ಲಿ ಥಳಿಸಲಾಗುತ್ತಿದೆ. ಈ ಮೂಲಕ ಜನತೆಯ ಪ್ರತಿಭಟನೆಯ ಕೂಗನ್ನೇ ಹತ್ತಿಕ್ಕುವ ವ್ಯವಸ್ಥಿತ ಸಂಚು ನಡೆದಿದೆ.

ಅಲ್ಲಿನ ವಿಜಯನಗರ ಕಾಲೇಜಿನಲ್ಲಿ ಎಸ್. ಎಸ್. ಹಿರೇಮಠ್ ಮತ್ತಿತರ ಅಧ್ಯಾಪಕರ ದುರುದ್ದೇಶಿತ ವರ್ಗಾವಣೆಯ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟಿಸಬಹುದೆಂಬ ಮುನ್ಸೂ[illegible] ವಸ್ತುಪ್ರದರ್ಶನವೊಂದನ್ನು ಏರ್ಪಡಿಸಿದ್ದರು. ಸೋಮವಾರ (3-8-81) ದಿಂದ ಗುರುವಾರ (6-8-81)ದ ವರೆಗೆ ನಡೆದ ಕಾರ್ಯಕ್ರಮ ಉದ್ಬೋಧಕವಾಗಿತ್ತು.

3-8-81ರಂದು ಸಂಜೆ 5-30 ಘಂಟೆಗೆ ಪ್ರಾರಂಭವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಯುವಜನ ಮಂತ್ರಿ ಶ್ರೀ ಗಂಗಾಧರಗೌಡರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಸಿ. ಪಿ. ಐ.ಯ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎಂ. ಮಾಡಲು ಸಾಕಷ್ಟು ಸಂಚು ನಡೆಸಿದ್ದಾರೆ. ಪ್ರವೇಶ ನಿರಾಕರಿಸುವುದು, ಪೋಲೀಸರಿಗೆ ದೂರು ನೀಡಿ ಬಡಿಸುವುದು ದಿನನಿತ್ಯದ ಘಟನೆಗಳಾಗಿವೆ. ಹಿಂದೊಮ್ಮೆ ಎಸ್. ಎಫ್. ಐ. ಮುಖಂಡರೊಬ್ಬರು ಸ್ಥಳೀಯ ಪತ್ರಿಕೆಗಳಿಗೆ ಒಂದು ಹೇಳಿಕೆ ನೀಡಿದ್ದಕ್ಕೆ ಅವರಿಗೆ ಸಾಕಷ್ಟು ಎಚ್ಚರಿಕೆ ನೀಡಲಾಯಿತು. ಈ ಹಿನ್ನೆಲೆಯಲ್ಲಿ ಆಗಸ್ಟ್ 3 ರಂದು ನಡೆದ ಪೋಲೀಸ್ ದೌರ್ಜನ್ಯವನ್ನು ಪ್ರತಿಭಟಿಸಿ, ಪ್ರಿನ್ಸಿಪಾಲರ ರಾಜೀನಾಮೆಗೆ ಒತ್ತಾಯಿಸಿ, ವಿದ್ಯಾರ್ಥಿ ಸಂಘದ ರಚನೆಗೆ ಒತ್ತಾ[illegible]

ನಂತರ "[illegible]" ಮತ್ತು ಸತ್ಯಜಿತ್‌ರಾಯರ ಹೀರಾಕ್ ರಾಜಾರ್ ದೇಶ್ ಎಂಬ ಕಿರು ಚಿತ್ರಗಳನ್ನು ಪ್ರದರ್ಶಿಸಲಾಯಿತು.

4-8-81ರಂದು ಭಾರತ ದೇಶಕ್ಕೊಂದು ಪರ್ಯಾಯ ಎಂಬ ವಿಷಯದ ಮೇಲೆ ನಡೆದ ವಿಚಾರಸಂಕಿರಣದ ಅಧ್ಯಕ್ಷತೆಯನ್ನು ಕಾಂ. ವಿ. ಜೆ. ಕೆ. ನಾಯರ್ ವಹಿಸಿದ್ದರು. ವಿಚಾರ ಸಂಕಿರಣದಲ್ಲಿ ಖ್ಯಾತ ಶಿಕ್ಷಣತಜ್ಞ ಶ್ರೀ ರಾಮಕೃಷ್ಣ, ಕನ್ನಡಪ್ರಭ ಪತ್ರಿಕೆಯ ಸಂಪಾದಕ ಶ್ರೀ ಖಾದ್ರಿಶಾಮಣ್ಣ, ಚದುರಿಸಿ ಎಸ್.ಎಫ್.ಐ.ನ ರಾಜ್ಯ ಶಾಖೆ ಪ್ರಧಾನಕಾರ್ಯದರ್ಶಿ ಎಸ್. ಆರ್. ಆರಾಧ್ಯರವರನ್ನೊಳಗೊಂಡಂತೆ ಐದು ಮಂದಿ ಮುಖಂಡರನ್ನು ಬಂಧಿಸಲಾಯಿತು. ಪೋಲೀಸ್‌ಠಾಣೆಯಲ್ಲಿ ಅಪ್ರಾಪ್ತ ವಯಸ್ಸಿನವಳೆಂಬ ಕಾರಣಕ್ಕಾಗಿ ಶಾಂತಕುಮಾರಿಯವರನ್ನು ಬಿಟ್ಟು ಉಳಿದವರೆಲ್ಲರಿಗೂ ಡಿ.ವೈ. ಎಸ್.ಪಿ., ಇನ್‌ಸ್ಪೆಕ್ಟರ್‌ಗಳು, ಕಾನ್‌ಸ್ಟೇಬಲ್‌ಗಳು ಲಾಠಿ, ಬೂಟುಗಳಿಂದ ಹೊಡೆದು ಬೇಟೆಯಾಡಿದರು. ಅವಾಚ್ಯ ಶಬ್ದಗಳಿಂದ ನಿಂದಿಸಿದರು. ನಂತರ ರಾತ್ರಿ 10 ಘಂಟೆಗೆ ಬಲಾತ್ಕಾ[illegible]

5-8-81ರಂದು ಶ್ಯಾಮಾ ಎಂಬ ನೃತ್ಯನಾಟಕ ಮತ್ತು 6-8-81ರಂದು ಜಾನಪದ ನೃತ್ಯಗಳನ್ನು ಏರ್ಪಡಿಸಿತ್ತು.

ನಾಲ್ಕು ದಿನಗಳ ಕಾರ್ಯಕ್ರಮದಲ್ಲಿ ಬೆಂಗಳೂರು ಜನತೆ ಟೌನ್‌ಹಾಲ್‌ನಲ್ಲಿ ಕಿಕ್ಕಿರಿದು ನೆರೆದಿದ್ದು ಎಡರಂಗ ಸರಕಾರದ ಸಾಧನೆಗಳನ್ನು ಕುರಿತಿದ್ದ ವಸ್ತುಪ್ರದರ್ಶನ ವೀಕ್ಷಿಸಿದರು. ಎಡರಂಗ ಸರಕಾರ ಉಳಿದು, ಬೆಳೆಯಲಿ ಎಂದು ಆಶಿಸಿದರು.

●

"ಪ್ರಜಾಶಕ್ತಿ" ದೈನಿಕದ ಉದ್ಘಾಟನೆ

"ಪ್ರಜಾಶಕ್ತಿ" ವಾರಪತ್ರಿಕೆಯು ಕಳೆದ 16 ವರ್ಷಗಳಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಂಧ್ರ ಪ್ರದೇಶ ರಾಜ್ಯಸಮಿತಿಯ ಮುಖಪತ್ರವಾಗಿ ಪ್ರಕಟವಾಗುತ್ತಿತ್ತು. ವಾಚಕರ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾದುದನ್ನು ಗಮನಿಸಿ ಪ್ರಜಾಶಕ್ತಿಯನ್ನು ದೈನಿಕವಾಗಿ ಹೊರತರಲು ಆಂಧ್ರ ರಾಜ್ಯಸಮಿತಿ ತೀರ್ಮಾನಿಸಿತ್ತು.

ಆಗಸ್ಟ್ 1ರಂದು ವಿಜಯವಾಡಾದಲ್ಲಿ ಪ್ರಜಾಶಕ್ತಿಯ ದೈನಿಕದ ಬಿಡುಗಡೆ ಕಾರ್ಯಕ್ರಮಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಂ. ಎಸ್. ನಂಬೂದಿರಿಪಾಡ್‌ರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

ಪಕ್ಷದ ಕರ್ನಾಟಕ ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರು ಪ್ರಜಾಶಕ್ತಿ ದೈನಿಕಕ್ಕೆ ಶುಭ ಕೋರಿ ಸಂದೇಶ ಕಳಿಸಿದ್ದಾರೆ.

●

ಹೊಸ ಕಛೇರಿ ಉದ್ಘಾಟನೆ

ಸುಳ್ಯ ಗಾಂಧಿನಗರದಲ್ಲಿ 1973 ರಿಂದಲೇ ಪಾರ್ಟಿಯ ಆಫೀಸು ತೆರೆದಿದ್ದು ಕೆಲಸಮಾಡುತ್ತಿದೆ. ಸುಳ್ಯದ ಹಳೆಗೇಟು ಎಂಬ ಸ್ಥಳದಲ್ಲಿ ತಾ. 16-7-81ರಂದು ಸಿ. ಪಿ. ಐ. (ಎಂ) ಮತ್ತು ಕೃಷಿಕೂಲಿಗಾರರ ಸಂಘದ ಆಫೀಸು ಕಾಂ. ಮಹಮ್ಮದ್‌ರವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲ್ಪಟ್ಟಿತು. ಸಭೆಯನ್ನುದ್ದೇಶಿಸಿ ತಾಲ್ಲೂಕು ಕಾರ್ಯದರ್ಶಿ ಕಾಂ. ಸೂರ್ಯನಾರಾಯಣ ಭಟ್, ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಮೋನಪ್ಪಗೌಡ, ಡಿ.ವೈ. ಎಫ್.ಐ. ಅಧ್ಯಕ್ಷ ಕಾಂ.ಪಿ.ಕೆ.ಮೂಸ, ತೋಟ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಕಾತ್ತಮುತ್ತು, ಬೀಡಿ ಅಂಡ್ ಜನರಲ್ ಲೇಬರ್ ಯೂನಿಯನ್ ಕಾರ್ಯದರ್ಶಿ ಕಾಂ. ಸರಸ್ವತಿ, ಮತ್ತು ಎಸ್. ಎಫ್. ಐ. ಅಧ್ಯಕ್ಷ ಕಾಂ. ಮಹಮದ್ ಕುಂಞ ಮಾತಾಡಿದರು.

●

ಸುಗ್ರೀವಾಜ್ಞೆಯ ಖಂಡನೆ

"ಕಾರ್ಮಿಕ ಹೋರಾಟಗಳನ್ನು ಅಮಾನುಷವಾಗಿ ತುಳಿದುಹಾಕಲು ಈ ಕರಾಳ ಸುಗ್ರೀವಾಜ್ಞೆಯನ್ನು ತರಲಾಗಿದೆ"...ಎಂದು ರಾಷ್ಟ್ರಪತಿಯವರು ಹೊರಡಿಸಿದ ಸುಗ್ರೀವಾಜ್ಞೆ ಕುರಿತು ಸಿ. ಐ. ಟಿ. ಯು. ರಾಜ್ಯ ಸಮಿತಿಯ ಉಪಾಧ್ಯಕ್ಷ ಕಾಂ. ಆರ್. ಜಿ. ಸ್ಥಳೇಕರರು ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಈ ಕುರಿತು ದಾಂಡೇಲಿಯಿಂದ ಪತ್ರಿಕಾ ಹೇಳಿಕೆಯೊಂದನ್ನು ಹೊರಡಿಸಿದ ಕಾಂ. ಸ್ಥಳೇಕರರು, "ಈ ಸುಗ್ರೀವಾಜ್ಞೆ ಕಾರ್ಮಿಕವರ್ಗಕ್ಕೊಂದು ಸವಾಲಾಗಿದೆ! ದೇಶದಾದ್ಯಂತ ಬೆಳೆದು ಬರುತ್ತಿರುವ ಹೋರಾಟದ ಪ್ರವಾಹಗಳನ್ನು ಎದುರಿಸಲು ಸರಕಾರ ಕೈಗೊಂಡ ಮೂರ್ಖಕ್ರಮವಿದಾಗಿದೆ. ಈ ಸವಾಲನ್ನು ಎದುರಿಸಿ ತೀವ್ರ ಹೋರಾಟಗಳನ್ನು ಕೂಡಲೇ ಪ್ರಾರಂಭಿಸಬೇಕು" ಎಂದು ಕರೆ ನೀಡಿದ್ದಾರೆ.

○

ಪ್ರತಿಸ್ಪರ್ಧಿ ಎ.ಐ.ಸಿ.ಸಿ.ಗೆ ರಾಮ್ ಅಧ್ಯಕ್ಷ

(1ನೇ ಪುಟದಿಂದ)

ಕರ್ನಾಟಕ, ಕೇರಳ, ಮಹಾರಾಷ್ಟ್ರ [illegible]

ಮುಷ್ಕರ ಪ್ರತಿಬಂಧಕಾಜ್ಞೆಗೆ ವಿರೋಧ

ಬಿಜಾಪುರ ನಗರಸಭೆ, ಜೀವ ವಿಮೆ, ಬ್ಯಾಂಕ್, ಕೆ. ಇ. ಬಿ., ಕೆ.ಎಸ್.ಆರ್.ಟಿ.ಸಿ., ನೂಲಿನ ಗಿರಣಿ ಮೊದಲಾದ 19 ಕಾರ್ಮಿಕ ಸಂಘಗಳ ಹಾಗೂ ಸಿ. ಪಿ. ಎಂ., ಸಿ.ಪಿ.ಐ., [illegible] ಕರ್ಣಿ ಮೊದಲಾದವರು ಸುಗ್ರೀವಾಜ್ಞೆಯನ್ನು ವಿರೋಧಿಸಿ ಮಾತನಾಡಿದರು.

ಶಾಸಕ ಐ. ಪಿ. ಡಿ. ಸಾಲಪ್ಪನವ[illegible] ಮೇಲೆ ಎಫ್. ಎಂ. ಖಾನ್ ಬೆಂಬ[illegible]

[illegible]

ನಮ್ಮ ರಾಜ್ಯದಲ್ಲಿ ಅಡಿಕೆತೋಟದಲ್ಲಿ ಕೆಲಸಮಾಡುವ ಕಾರ್ಮಿಕರಿಗೆ (ಕೃಷಿಕೂಲಿ) ಯಾವುದೇ ರೀತಿಯ ಕಾನೂನು ಅಥವಾ ಭದ್ರತೆಯಿಲ್ಲ. ಇತರ ಪ್ಲಾಂಟೇಶನ್ ಬೆಳೆಗಳಂತೆ ಇದನ್ನು ಪ್ಲಾಂಟೇಶನ್ ಲೇಬರ್ ಆಕ್ಟ್‌ನಲ್ಲಿ ಸೇರಿಸಲಾಗಿಲ್ಲ.

ದ. ಕ. ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಸಿ. ಐ. ಟಿ. ಯು.ನಾಯಕತ್ವದ ತೋಟಕೆಲಸಗಾರರ ಸಂಘದಡಿಯಲ್ಲಿ ಅಡಿಕೆತೋಟ ಕಾರ್ಮಿಕರ ಸಂಘಟನೆಯ ಕೆಲಸ ನಡೆಯುತ್ತಲಿದೆ. ಬೇಡಿಕೆಗಳ ಈಡೇರಿಕೆಗಾಗಿ ಹೋರಾಡಿ ಸಫಲರಾಗುತ್ತಿದ್ದಾರೆ. ಇದಕ್ಕೆ ನಿದರ್ಶನ ಸುಳ್ಯ ತಾಲ್ಲೂಕಿನ ಸಂಪಾಜೆ ಗ್ರಾಮದ 'ಸಂಪಾಜೆ ಅರೆಕಾ ಪ್ಲಾಂಟೇಷನ್' ಎಂಬ ತೋಟದ ಕಾರ್ಮಿಕರು.

11-7-81ರಂದು ಮಂಗಳೂರು ಅಸಿಸ್ಟೆಂಟ್ ಲೇಬರ್ ಕಮೀಷನರ್ ಆಫೀಸಿನಲ್ಲಿ ವೇತನ ಏರಿಕೆ ಮೊದಲಾದ ಸೌಲಭ್ಯಗಳ ಕುರಿತು ನಡೆದ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಒಪ್ಪಂದದ ರೀತ್ಯ ವೇತನದಲ್ಲಿ ಹೆಚ್ಚಳ (ಮೊದಲು ಗಂಡಸರಿಗೆ 5 ರೂ. 10 ಪೈಸೆ ಮತ್ತು ಹೆಂಗಸರಿಗೆ 4 ರೂ. 50 ಪೈಸೆ ಕೂಲಿ ಇತ್ತು. ಈ ಒಪ್ಪಂದದ ಅನುಗುಣವಾಗಿ ಗಂಡಸರಿಗೆ 7 ರೂ. 50 ಪೈಸೆ ಮತ್ತು ಹೆಂಗಸರಿಗೆ 6 ರೂ. 25 ಪೈಸೆಯಷ್ಟು ಹೆಚ್ಚಳವಾಗಿದೆ), ಪ್ರಾವಿಡೆಂಟ್ ಫಂಡ್ ಸೌಲಭ್ಯ, ಹಬ್ಬದ ಮತ್ತು ರಾಷ್ಟ್ರೀಯ ರಜೆ ಮತ್ತು ವೇತನ, ಸಿಕ್ ರಜೆ, ವಾರ್ಷಿಕ ರಜೆ ಮುಂತಾದ ರಜಾ ಸೌಲಭ್ಯ, ಕೆಲಸಗಾರರಿಗೆ ಉಚಿತ ಔಷಧಿ, 1980-81ನೇ ಇಸ್ವಿಗೆ ಶೇಕಡ 20ರಷ್ಟು ಬೋನಸ್, ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜೆ, ಬಟ್ಟೆ ಮುಂತಾದ ಸೌಲಭ್ಯಗಳು ದೊರೆತಿವೆ.

ಈ ಒಪ್ಪಂದ 1-6-81ರಿಂದ ಜಾರಿಗೆ ಬರುತ್ತದೆ. ಪ್ರಾಯಶಃ ಅಡಿಕೆತೋಟ ಕಾರ್ಮಿಕರ ವೇತನ ಮುಂತಾದ ಸೌಲಭ್ಯಗಳ ಕುರಿತು ನಡೆದ ಒಪ್ಪಂದ ರಾಜ್ಯದಲ್ಲೇ ಪ್ರಥಮ.

ಈ ಒಪ್ಪಂದಕ್ಕೆ ತೋಟಕೆಲಸಗಾರರ ಸಂಘ ಸುಳ್ಯ ಇದರ ಅಧ್ಯಕ್ಷ ಕಾಂ. ಕೆ. ಸೂರ್ಯನಾರಾಯಣಭಟ್, ಸಿ. ಐ. ಟಿ. ಯು. ದ. ಕ. ಜಿಲ್ಲಾ ಕಾರ್ಯದರ್ಶಿ ಕಾಂ. ಕೆ. ಮೂಸಬ್ಬ ಮತ್ತು ತೋಟ ಸಮಿತಿಯ ಕಾರ್ಯದರ್ಶಿ ಕಾಂ. ಕುಂಞಕಣ್ಣ ಮಣಿಯಾಣಿ ಹಾಗೂ ಮಾಲೀಕರ ಪರವಾಗಿ ಶ್ರೀ ಸಿ. ವಿ. ಸದಾಶಿವ ಅಂಕಿತ ಹಾಕಿರುವರು.

○

ಸಿ.ಐ.ಟಿ.ಯು.ಗೆ ಪ್ರಾತಿನಿಧ್ಯ

ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಪ್ರಧಾನಕಾರ್ಯದರ್ಶಿ ಸಿ. ನಂಜುಂಡಪ್ಪನವರನ್ನು ಕೇಂದ್ರಸರ್ಕಾರದ ವಾಣಿಜ್ಯ ಸಚಿವಾಲಯವು ಕಾಫಿಬೋರ್ಡಿನ ಸದಸ್ಯರನ್ನಾಗಿ ನೇಮಿಸಿದೆ. ಈ ಮೂಲಕ ಮೊದಲ ಬಾರಿಗೆ ಕಾಫಿಬೋರ್ಡಿನಲ್ಲಿ ಸಿ. ಐ. ಟಿ. ಯು.ಗೆ ಪ್ರಾತಿನಿಧ್ಯ ಸಿಕ್ಕಿದೆ.

●

ವಿಸ್ತೃತ ಸಭೆ

2-8-81ರಂದು ಡಿ.ವೈ.ಎಫ್.ಐ.ನ ಬೆಂಗಳೂರು ಜಿಲ್ಲಾಸಮಿತಿಯ ವಿಸ್ತೃತ ಸಭೆ ಸೇರಿಸಲಾಗಿತ್ತು. ಜುಲೈ 26 ಮತ್ತು 27ರಂದು ಮಂಗಳೂರಿನಲ್ಲಿ ನಡೆದ ರಾಜ್ಯಸಮಿತಿಯ ತೀರ್ಮಾನಗಳನ್ನು ಜಿಲ್ಲಾ ಸಂಚಾಲಕ ಕಾಂ. ಶಿವರಾಂ ಸಭೆಗೆ ವಿವರಿಸಿದರು.

ಸೆಪ್ಟೆಂಬರ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಡಿ.ವೈ.ಎಫ್.ಐ.ನ ಪ್ರಥಮ ರಾಜ್ಯಸಮ್ಮೇಳನವನ್ನು ಯಶಸ್ವಿಗೊಳಿಸಲು ಶ್ರಮಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಪಾರ್ಲಿಮೆಂಟ್ ಚಲೋ ಕಾರ್ಯಕ್ರಮದ ಅಂಗವಾಗಿ ಬೆಂಗಳೂರು ಜಿಲ್ಲೆಯಾದ್ಯಂತ ಸುಮಾರು 20 ಸಾವಿರ ಸಹಿಸಂಗ್ರಹದ ಗುರಿಯನ್ನು ಪೂರ್ಣಗೊಳಿಸುವಂತೆ ಕರೆ ನೀಡಲಾಯಿತು.

○

ಸಂಘಟನಾ ಸಮಿತಿ ಸಭೆ

2-8-81ರಂದು ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ದ. ಕ. ಜಿಲ್ಲಾಸಮಿತಿಯ ಸಭೆಯು ಮಂಗಳೂರಿನಲ್ಲಿ ಕಾಂ. ಕೆ. ಶಂಕರ್‌ರ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲಾ ಸಂಚಾಲಕ ಕಾಂ. ಬಿ. ಉಮಾನಾಥರು ಚಟುವಟಿಕೆಗಳ ವರದಿ ನೀಡಿದರು. ರಾಜ್ಯ ಸಂಚಾಲಕ ಕಾಂ. ಜಿ. ವಿ. ಶ್ರೀರಾಮ್ ರೆಡ್ಡಿ ಸಭೆಯಲ್ಲಿ ಹಾಜರಿದ್ದರು. ಬೆಂಗಳೂರಿನಲ್ಲಿ ನಡೆಯಲಿರುವ ಪ್ರಥಮ ಸಮ್ಮೇಳನದ ಪೂರ್ವಭಾವಿಯಾಗಿ 28-8-81ರಂದು ಮಂಗಳೂರಿನಲ್ಲಿ ದ. ಕ. ಜಿಲ್ಲಾ ಸಮ್ಮೇಳನ ನಡೆಸಲು ತೀರ್ಮಾನಿಸಲಾಯಿತು.

ಸೆಪ್ಟೆಂಬರ್ ತಿಂಗಳಲ್ಲಿ ನಡೆಯುವ "ವಿಧಾನ ಸೌಧ ಚಲೋ" ಹಾಗೂ ಅಕ್ಟೋಬರ್ ಮೊದಲವಾರದಲ್ಲಿ ನಡೆಯಲಿರುವ "ಪಾರ್ಲಿಮೆಂಟ್ ಚಲೋ" ಈ ಎರಡೂ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳು ಭಾಗವಹಿಸುವಂತೆ ಕಾರ್ಯಪ್ರವೃತ್ತರಾಗಲು ತೀರ್ಮಾನಿಸಲಾಯಿತು.

○

ಸಾಮ್ರಾಜ್ಯವಾದಿಗಳ ಕುತಂತ್ರಗಳು ; ಆಳುವ ವರ್ಗದ ಮೋಸಗಳು

ವಿ. ಜೆ. ಕೆ. ನಾಯರ್

ಆಗಸ್ಟ್ 15 ನಮ್ಮ ಸ್ವಾತಂತ್ರ್ಯದ ದಿನ. ಭಾರತೀಯರಾದ ನಾವು ಪ್ರತಿವರುಷವೂ ಇದನ್ನು ಆಚರಿಸುತ್ತ ಬಂದಿದ್ದೇವೆ. ಪ್ರಥಮ ಪ್ರಧಾನಮಂತ್ರಿ ಜವಾಹರಲಾಲ ನೆಹರು ತ್ರಿವರ್ಣ ಧ್ವಜವನ್ನು ಅಂದು ಹಾರಿಸಿದರು. ಭಾರತವು ಭವಿಷ್ಯದೊಂದಿಗೆ ಸೆಣಸಾಟಕ್ಕಿಳಿದಿದೆ ಎಂದು ಅವರಂದು ಹೇಳಿದರು. ಬಡಜನತೆಯ ಸೇವೆಗಾಗಿ, ಭಾರತೀಯರ ಕಣ್ಣೀರಿನ ಪ್ರತಿಯೊಂದು ಹನಿಯನ್ನೂ ನಿವಾರಿಸುವುದಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡಿರುವುದಾಗಿ ಅವರು ಅಂದು ಹೇಳಿದರು. ಅವರು ಹಾಗೂ ಅವರ ನಂತರದವರು ಈ ದಿಶೆಯಲ್ಲಿ ಎಷ್ಟು ಸಫಲರಾಗಿದ್ದಾರೆಂಬುದನ್ನು ಪ್ರತಿಯೊಬ್ಬರೂ ಇಂದು ನೋಡಬಹುದು.

ಅರ್ಧಕ್ಕಿಂತ ಹೆಚ್ಚು ಜನ ಬಡತನರೇಖೆಗಿಂತ ಕೆಳಗಿನ ಮಟ್ಟದಲ್ಲಿ ಜೀವನ ಮಾಡುತ್ತಿರುವರು. ಪ್ರತಿಯೊಂದು ಪಂಚವಾರ್ಷಿಕ ಯೋಜನೆಯೂ ಈ ಬಡವರ ಸಂಖ್ಯೆಗೆ ಹೆಚ್ಚಿನವರನ್ನು ಸೇರಿಸುತ್ತಿರುವಂತೇ ನಿರುದ್ಯೋಗಿಗಳ ಸಂಖ್ಯೆಗೂ ಹೆಚ್ಚಿನ ಜನರನ್ನು ಸೇರಿಸಿದೆ. ಸ್ವಾತಂತ್ರ್ಯ ಸಿಕ್ಕ ದಿನದಂದೇ ಘಾಸಿಗೊಳಗಾದ ಭಾರತದ ಐಕ್ಯತೆಯು ಇಂದು ಸಾವಿರಾರು ಜನರ ಪ್ರಾಣಹರಣ ಮಾಡಿದೆಯಲ್ಲವೆ; ಹರಿದಿರುವ ಕಣ್ಣೀರಿನ ಬಗ್ಗೆ ಹೇಳುವುದೇ ಬೇಡ. ಒಗ್ಗಟ್ಟು, ಐಕ್ಯತೆಯು ಅಪಾಯದಲ್ಲಿರುವುದರಿಂದ ದೇಶದ ಸ್ವಾತಂತ್ರ್ಯವೇ ಅಪಾಯದಲ್ಲಿದೆ. ಅಸ್ಸಾಂ ಭಾರತಬಿಟ್ಟು ಹೊರಗಿದೆಯೇನೋ ಎನ್ನುವಂತೆ ಅಸ್ಸಾಂನಲ್ಲಿ ಕೆಲವರಾದರೂ ಭಾರತಕ್ಕೆ ಕಚ್ಚಾತೈಲ ಕೊಡುವುದಿಲ್ಲ ಎಂದು ಘೋಷಿಸಿದ್ದಾರೆ. 34 ವರುಷಗಳ ಸ್ವಾತಂತ್ರ್ಯದ ತರುವಾಯ ಮತ್ತು ಗಣರಾಜ್ಯದ ಸಂವಿಧಾನವನ್ನು ಹುಟ್ಟು ಹಾಕಿದ 30 ವರುಷಗಳ ತರುವಾಯ ದೇಶದಲ್ಲಿ ನೀರಿನಿಂದ ತುಂಬಿದ ಕಣ್ಣುಗಳನ್ನು, ಹಸಿದ ನಿರ್ಗತಿಕರನ್ನು, ಅಸ್ಪೃಶ್ಯರನ್ನು ಮತ್ತು ಪಂಚಮರನ್ನು ಮತ್ತು ಚಿತ್ರಹಿಂಸೆಗೊಳಗಾದ ಪುರೋಗಾಮಿ ರಾಜಕೀಯ ಕಾರ್ಯಕರ್ತರನ್ನು ನಾವು ಕಾಣುತ್ತಿದ್ದೇವೆ.

ಬಡತನ ಮತ್ತು ಜನತೆಯ ಕಷ್ಟಗಳು ಹೆಚ್ಚುತ್ತಿರುವುದರಿಂದ ನಮ್ಮನ್ನಾಳಲು ಹಕ್ಕಿಲ್ಲವೆಂದು ಪರಿಣಾಮಕಾರಿಯಾಗಿ ಬ್ರಿಟಿಷರಿಗೆ ಹೇಳಲಾಯಿತು. ಆದರೆ ಕಾಂಗ್ರೆಸ್ ಅಧಿಕಾರ ಕಬಳಿಸಿದ ತರುವಾಯ ಬಡತನವು ಅನೇಕ ಪಟ್ಟು ಹೆಚ್ಚಾಗಿದೆ. ಆದಾಗ್ಯೂ ಕೂಡ ಕಾಂಗ್ರೆಸ್‌ನವರಿಗೂ ನಮ್ಮನ್ನಾಳುವ ಹಕ್ಕನ್ನು ನೀವು ಕಳೆದುಕೊಂಡಿದ್ದೀರೆಂದು ಪರಿಣಾಮಕಾರಿಯಾಗಿ ಹೇಳುವಂಥ ಒಂದು ರಾಷ್ಟ್ರೀಯ ಚಳುವಳಿಯನ್ನು ಕಟ್ಟಲು ಅಸಮರ್ಥರಾಗಿದ್ದೇವೆ.

ವಿದೇಶೀಯರನ್ನು ಬೇಗ ಗುರುತಿಸಲು ಜನತೆಗೆ ಸಾಧ್ಯವಾಯಿತು. ಆದ್ದರಿಂದ ಐಕ್ಯದಿಂದ ಅವರ ವಿರುದ್ಧ ಹೋರಾಡಿದರು. ಭಾರತದ ವಿಶಿಷ್ಟ ಪರಿಸ್ಥಿತಿಗಳು ಬಂಡವಾಳಶಾಹಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ನಾಯಕತ್ವ ವಹಿಸುವಂತೆ ಮಾಡಿದವು. ದೇಶೀಯ ಆಳುಗರೊಂದಿಗೂ, ಭೂಮಾಲಕರೊಂದಿಗೂ ಅವರು ಒಪ್ಪಂದವನ್ನು ಸಾಧಿಸಿದ್ದರಿಂದ ಸ್ವತಂತ್ರ ಭಾರತವು ಈ ಬಂಡವಾಳಶಾಹಿ-ಭೂಮಾಲಕರ ಆಳ್ವಿಕೆಗೆ ಒಳಪಟ್ಟಿತು. ರಾಷ್ಟ್ರೀಯ ಚಳುವಳಿಯ ನಾಯಕಸ್ಥಾನದಲ್ಲಿದ್ದ ಗಾಂಧೀಜಿಯವರು ಇಂದಿನ ಸರ್ವೋದಯದವರು ಉಪದೇಶಿಸುತ್ತಿರುವ ರೀತಿಯಲ್ಲಿ ಭಾರತದ ಅರ್ಥ ವ್ಯವಸ್ಥೆಯನ್ನು ರೂಪಿಸುವ ಆದರ್ಶವನ್ನು ಹೊಂದಿದ್ದರೆ ರಾಷ್ಟ್ರೀಯ ಚಳುವಳಿಯ ಅವರ ಹಿಂಬಾಲಕರು ಮತ್ತು ಬಂಡವಾಳಶಾಹಿಗಳು ಭಾರತವನ್ನು ಬಂಡವಾಳಶಾಹಿ ದಾರಿಯಲ್ಲಿ ಬೆಳೆಸಿದರು. ಇದರಲ್ಲಿ ವಿದೇಶಿ ಬಂಡವಾಳಗರೊಂದಿಗೆ ಶಾಮೀಲಾಗಿರುವ ದೊಡ್ಡ ಬಂಡವಾಳಶಾಹಿಯದೇ ನಾಯಕತ್ವ. ಆದ್ದರಿಂದ ನಮ್ಮ ದೇಶದ ಸಾಮ್ರಾಜ್ಯಶಾಹಿ ಹಿಡಿತವನ್ನು ತೊಡೆದುಹಾಕುವುದರ ಬದಲು ಸ್ವತಂತ್ರ ಭಾರತದ ಬಾಗಿಲನ್ನು ಎಲ್ಲಾ ಸಾಮ್ರಾಜ್ಯವಾದಿಗಳಿಗಾಗಿ ವಿಶಾಲವಾಗಿ ತೆರೆದಿಟ್ಟರು. ಭಾರತದ ಜನರು ಹೋರಾಡಿ ಬ್ರಿಟಿಷ್ ಸಾಮ್ರಾಜ್ಯವಾದಿಗಳ ಆಳ್ವಿಕೆಯನ್ನು ಅಂತ್ಯಗೊಳಿಸಿದ್ದಾಗ್ಯೂ, ಭಾರತದ ಆಳುವವರ್ಗದವರು ಸಾಮ್ರಾಜ್ಯವಾದಿ ಹಿತಾಸಕ್ತಿ ಹಾಗೂ ನೇರ ಆಳ್ವಿಕೆಯ ವಿರೋಧಿ ಹೋರಾಟವನ್ನು ಪೂರ್ಣಗೊಳಿಸದೆ ಜನತೆಯ ಕಣ್ಣಿಗೆ ಮಣ್ಣೆರೆಚಿದರು.

ಚೀನ, ಕೊರಿಯಾ, ವಿಯತ್‌ನಾಮ್‌ಗಳಲ್ಲಿನಂತೆ ಹೋರಾಟವೇನಾದರೂ ಕಾರ್ಮಿಕವರ್ಗದ ನೇತೃತ್ವದಲ್ಲಿ ನಡೆದಿದ್ದರೆ ಸಾಮ್ರಾಜ್ಯವಾದದ ಎಂಜಲು ನಾಯಿಗಳೂ ಸೋಲನ್ನೊಪ್ಪಿ ರಾಷ್ಟ್ರೀಯ ವಿಮೋಚನೆ ಸಂಪೂರ್ಣಗೊಳ್ಳಬಹುದಿತ್ತು. ಅಂಥ ಪ್ರಸಂಗದಲ್ಲಿ ಇಂದು ಜನತೆ ಎದುರಿಸುತ್ತಿರುವ ಕಷ್ಟಕೋಟಲೆಗಳು ಎದುರಾಗುತ್ತಿರಲಿಲ್ಲ.

ರಾಷ್ಟ್ರೀಯ ಹೋರಾಟದಲ್ಲಿ ನಾಯಕತ್ವ ಕೊಡುವಂಥ ಸ್ಥಿತಿಯಲ್ಲಿ ಎಡಪಂಥೀಯರಿರಲಿಲ್ಲವೆನ್ನುವುದು ಗೊತ್ತಿರುವ ಸಂಗತಿ. ದೇಶದ ನಾನಾ ಭಾಗಗಳಲ್ಲಿ ಕಮ್ಯುನಿಸ್ಟ್ ಗುಂಪುಗಳು ಕೆಲಸ ಮಾಡುತ್ತಿದ್ದರೂ ಚಟುವಟಿಕೆಗಳನ್ನೂ ನಡೆಸಬಲ್ಲಂಥ ಅಖಿಲ ಭಾರತ ಕೇಂದ್ರ ಒಂದನ್ನು ಸ್ಥಾಪಿಸಲು ಸಾಧ್ಯವಾದದ್ದು 1925ರಲ್ಲಿ. ದ್ವಿತೀಯ ಮಹಾಯುದ್ಧದ ಕಾಲಾವಧಿಯಲ್ಲಿ ಅತೀ ಕಡಿಮೆ ಕಾಲದಲ್ಲೇ ಪಕ್ಷವು ರಾಷ್ಟ್ರೀಯ ಚಳುವಳಿಯ ಸೆಳವಿನ ವಿರುದ್ಧ ಈಸಬೇಕಾದಂಥ ಪರಿಸ್ಥಿತಿ ಬಂತು. ರಾಷ್ಟ್ರೀಯ ಚಳುವಳಿಯ ಬಂಡವಾಳಶಾಹಿ ಆಡಳಿತವಾದಿ ನಾಯಕತ್ವವು ಅಧಿಕಾರ ಹಸ್ತಾಂತರಕ್ಕಾಗಿ ತಹತಹಿಸುತ್ತಿತ್ತು. ಆದ್ದರಿಂದಲೇ 1942ರ ಕ್ವಿಟ್ ಇಂಡಿಯಾ ಚಳುವಳಿಯು ದ್ವಿತೀಯ ಯುದ್ಧದ ಕಾರ್ಮೋಡಗಳ ಮಧ್ಯೆ ಪ್ರಾರಂಭವಾಯಿತು. ಹಿಟ್ಲರ ನಾಯಕತ್ವದ ಫ್ಯಾಸಿಸಂನ್ನು ಪ್ರಾಮುಖ್ಯವೆಂದು ಪರಿಗಣಿಸಿದ್ದ ಕಮ್ಯುನಿಸ್ಟರು ಇದರ ವಿರುದ್ಧದ ಹೋರಾಟದಲ್ಲಿ ಸಹಕರಿಸಲು ಎಲ್ಲರಿಗೂ ಕರೆ ನೀಡಿದರು. ಆದರೆ ಅವರನ್ನು ಸಾಮ್ರಾಜ್ಯವಾದದ ಏಜಂಟರೆಂದು ಕರೆದರು. 1947ರ ಅಧಿಕಾರ ಹಸ್ತಾಂತರವನ್ನು ಮತ್ತು ತದನಂತರದ ಮೂವತ್ತು ವರ್ಷಗಳ ಕಾಂಗ್ರೆಸ್ ಆಳ್ವಿಕೆಯ ಸಂಗತಿಗಳನ್ನು ಅರಿತುಕೊಳ್ಳಬಲ್ಲ ಪ್ರತಿಯೊಬ್ಬನಿಗೂ ಈ ಆಳುವವರ್ಗವೇ ಸಾಮ್ರಾಜ್ಯವಾದದ ಏಜಂಟನಾಗಿದೆಯಲ್ಲದೆ ಕಮ್ಯುನಿಸ್ಟರು ಅವಿರತ ಸಾಮ್ರಾಜ್ಯಶಾಹೀ ವಿರೋಧಿಗಳಾಗಿದ್ದಾರೆಂದು ಧೃಡಪಡಿಸುತ್ತದೆ. ದ್ವಿತೀಯ ಯುದ್ಧದ ಯಶಸ್ವಿ ಮುಕ್ತಾಯದ ನಂತರವೇ ಭಾರತವು ಸ್ವಾತಂತ್ರ್ಯ ಪಡೆಯಿತೆಂಬ ಸಂಗತಿಯೇ ಕಮ್ಯುನಿಸ್ಟರ ತಿಳುವಳಿಕೆ ಸರಿಯಾಗಿತ್ತೆಂದು ಸಿದ್ಧ ಮಾಡುತ್ತದೆ. ದ್ವಿತೀಯ ಯುದ್ಧದಲ್ಲಿ ಸೋವಿಯೆತ್ ನಾಯಕತ್ವದ ಫ್ಯಾಸಿಸ್ಟ್ ವಿರೋಧಿ ಶಕ್ತಿಗಳು ಗೆಲ್ಲದೇ ಹೋಗಿದ್ದರೆ ಸಾಮ್ರಾಜ್ಯವಾದವು ಶಕ್ತಿಗುಂದುತ್ತಿರಲಿಲ್ಲ ಮತ್ತು ವಸಾಹತುಗಳ ವಿಮೋಚನೆ ಪ್ರಾರಂಭವಾಗುತ್ತಿರಲಿಲ್ಲ. ಅಷ್ಟೇ ಅಲ್ಲದೆ, ಯುದ್ಧಾನಂತರವೂ ಕೂಡಾ ಕಮ್ಯುನಿಸ್ಟರ ನೇತೃತ್ವದಲ್ಲಿ ಕೇರಳ, ತೆಲಂಗಾಣ, ಬಂಗಾಲ ಮತ್ತಿತರ ಕಡೆ ನಡೆದ ಹೋರಾಟಗಳಿರದಿದ್ದರೆ, ಅನೇಕ ಕಮ್ಯುನಿಸ್ಟರು ತಮ್ಮ ಪ್ರಾಣ ಬಲಿದಾನಗೈದ ನಾವಿಕ ಬಂಡಾಯವಿರದಿದ್ದರೆ, ಬ್ರಿಟಿಷರು 1947ರಲ್ಲಿ ಇಲ್ಲಿಂದ ಕಾಲ್ತೆಗೆಯುತ್ತಿರಲಿಲ್ಲ. ಆದ್ದರಿಂದ ಗಮನಿಸಬೇಕಾದ ಅಂಶವೆಂದರೆ ಶಕ್ತಿಗುಂದಿದ ಸಾಮ್ರಾಜ್ಯವಾದ ಮತ್ತು ವಸಾಹತುಗಳ ವಿಮೋಚನೆಯು ಭಾರತವೂ ಸೇರಿದಂತೆ ಅನೇಕ ದೇಶಗಳಿಗೆ ಸಹಾಯಕವಾದವು.

ದ್ವಿತೀಯ ಯುದ್ಧಾನಂತರ ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ಇಂಗ್ಲೆಂಡ್ ತನ್ನ ಪ್ರಾಮುಖ್ಯ ಸ್ಥಾನವನ್ನು ಕಳೆದುಕೊಂಡಿತು. ಅಮೇರಿಕೆಯು ಈ ನಾಯಕತ್ವವನ್ನು ವಹಿಸಿಕೊಂಡಿತು. ವಸಾಹತುವಾದವು ಕೊನೆಗೊಂಡಿದ್ದರೂ ಅಮೇರಿಕಾದ ಸಾಮ್ರಾಜ್ಯವು ವಿಸ್ತಾರಗೊಂಡಿತು. ಬಹುರಾಷ್ಟ್ರೀಯ ಕಂಪನಿಗಳು, ಜಾಗತಿಕ ಹಣಕಾಸು ಸಂಸ್ಥೆಗಳು, ಮಿಲಿಟರಿ ಒಪ್ಪಂದಗಳು ಕೊರಿಯಾ, ವಿಯತ್‌ನಾಮ್, ಮಧ್ಯ-ಪೂರ್ವದಲ್ಲಿ ಹಸ್ತಕ್ಷೇಪ ಮುಂತಾದವುಗಳು ಹಿಂದಿನ ವಸಾಹತುಗಳನ್ನು ಅಗೋಚರವಾದ ಮತ್ತು ಅತೀ ಹಿಂಸಾತ್ಮಕವಾದ ನವ ವಸಾಹತುಗಳನ್ನಾಗಿ ಪರಿವರ್ತಿಸುವಂತೆ ಮಾಡಿದವು. ಚೀನಾ, ಕೊರಿಯಾ, ವಿಯತ್‌ನಾಮ್ ಮತ್ತಿತರ ಕಡೆಗಳಲ್ಲಿ ಕಾರ್ಮಿಕವರ್ಗದ ನಾಯಕತ್ವದಲ್ಲಿ ನಡೆದ ರಾಷ್ಟ್ರೀಯ ವಿಮೋಚನಾ ಚಳುವಳಿಗಳು ವಸಾಹತುವಾದದ ಸಂಕೋಲೆಗಳನ್ನು ಸಂಪೂರ್ಣ ಹರಿದೊಗೆದವು. 34 ವರ್ಷಗಳಷ್ಟು ಹಿಂದೆ ಬ್ರಿಟೀಷರ ನೇರ ಆಡಳಿತ ಕೊನೆಗೊಂಡಿದ್ದರೂ ಸಾಮ್ರಾಜ್ಯವಾದ, ಗುತ್ತೇದಾರಿ ಬಂಡವಾಳ ಮತ್ತು ಭೂಮಾಲಕರು ಜನರ ಸುಲಿಗೆಯನ್ನು ಮುಂದುವರಿಸುತ್ತಿದ್ದಾರೆ. ವ್ಯಂಗ್ಯವೆಂದರೆ ವೈರಿಯನ್ನು ನೇರವಾಗಿ ಗುರುತಿಸಿ ರಾಷ್ಟ್ರೀಯ ಚಳುವಳಿಯ ಕಾಲಕ್ಕೆ ಮಾಡಿದಂತೆ ಹೋರಾಟ ನಡೆಸುವುದಕ್ಕೆ ಸಾಧ್ಯವಾಗುತ್ತಿಲ್ಲ.

ಅದೇನಿದ್ದರೂ ಭಾರತದ ರಾಜಕೀಯ ಪರಿಸ್ಥಿತಿಯು ಯಾವ ಹಂತವನ್ನು ಮುಟ್ಟಿದೆ ಎಂದರೆ ಸಾಮ್ರಾಜ್ಯವಾದಿಗಳ ಹಸ್ತವನ್ನು ಗುರುತಿಸಬಹುದು. ಸಾಮ್ರಾಜ್ಯವಾದಿಗಳು ಯಾವಾಗಲೂ ವಿಭಜಿಸಿ ಆಳುವ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ. ಮತದಾರರ ಮತೀಯ ಕ್ಷೇತ್ರಗಳನ್ನು ಬಳಕೆಗೆ ತಂದವರೇ ಬ್ರಿಟೀಷರು. ಅಂತಿಮವಾಗಿ ದೇಶದ ವಿಭಜನೆಯಾಯಿತು ಮತ್ತು ಮತೀಯ ಹತ್ಯಾಕಾಂಡಕ್ಕೆ ಮತ್ತು ಉಪಖಂಡದಲ್ಲಿ ಅಂತರ್ಯುದ್ಧ ಪರಿಸ್ಥಿತಿ ನಿರ್ಮಾಣವಾಯಿತು. ಸಾಮಾಜಿಕವಾಗಿ ಶೋಷಿತರಾದ ಹಿಂದುಳಿದ ಜಾತಿ ಪಂಗಡ ಮುಂತಾದವುಗಳ ಹಿತರಕ್ಷಕನೆಂದು ಸೋಗು ಹಾಕಿದ್ದೂ ಕೂಡ ಬ್ರಿಟೀಷ್ ಸಾಮ್ರಾಜ್ಯವಾದವೇ. "ಆತ್ಮಗೌರವ"ದಂಥ ಚಳುವಳಿಗಳು ಅವರಿಂದಲೇ ಪ್ರಚೋದಿತವಾದವುಗಳು. ಸಾಮಾಜಿಕವಾಗಿ ಶೋಷಿತರನ್ನು ಮೇಲೆತ್ತುವ ಉದ್ದೇಶವನ್ನೂ ಇವು ಹೊಂದಿರಲಿಲ್ಲ, ಬದಲಾಗಿ ಜನತೆಯನ್ನು ಒಡೆಯುವ ಉದ್ದೇಶವನ್ನು ಹೊಂದಿದ್ದವು. ಸಾಮ್ರಾಜ್ಯವಾದಿಗಳು ಈ ಎಲ್ಲ ವಿಚ್ಛಿದ್ರಕಾರಿ ಶಕ್ತಿಗಳನ್ನೂ ಈಗ ಅನೇಕ ಪಟ್ಟು ಪ್ರಬಲಗೊಳಿಸಿದ್ದಾರೆ.

ವಿಶಾಲವಾದ ಈ ದೇಶದ ವಿವಿಧ ರಾಷ್ಟ್ರೀಯತೆಗಳಲ್ಲಿ ಕೈಹಾಕಲು ಸಾಮ್ರಾಜ್ಯಶಾಹಿ ಸಮರ್ಥವಾಗಿದೆ. ಈ ದೇಶವು ವಿವಿಧ ರಾಷ್ಟ್ರೀಯತೆಗಳ ಒಕ್ಕೂಟವೆಂದು ಕಮ್ಯುನಿಸ್ಟರು ಹೇಳುತ್ತಾ ಬರೆದಿದ್ದಾರೆ. ಈ ದೇಶವನ್ನು ವಿಭಜಿಸಿದ ದ್ವಿರಾಷ್ಟ್ರ ನೀತಿಯನ್ನು ಅವರು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಆದ್ದರಿಂದ ಭಾಷಾವಾರು ಪ್ರಾಂತರಚನೆಗಾಗಿ ಮತ್ತು ಈ ಒಂದೇ ರಾಷ್ಟ್ರೀಯತೆಯಡಿಯಲ್ಲಿ ಬರುವ ವಿವಿಧ ಭಾಷಾವಾರು ರಾಜ್ಯಗಳ ಸಮಾನ ಬೆಳವಣಿಗೆಗಾಗಿ ಪ್ರಚಾರ ಮಾಡಿದ್ದಾರೆ.

[ಮುಂದುವರೆಯುವುದು]

ರೈಲ್ವೆಯ ಹೀನಪರಿಸ್ಥಿತಿ : ಸಮರಮುಖರ್ಜಿಯವರ ಪತ್ರ

ರೈಲು ಇಲಾಖೆಯಲ್ಲಿ ಸಂರಕ್ಷಣಾ ನಿಯಮಗಳ ಉಲ್ಲಂಘನೆ ಹಾಗೂ ಮನ್ನಣೆ ಪಡೆಯದ ಕಾರ್ಮಿಕಸಂಘಗಳ ಸದಸ್ಯರಿಗೆ ಕೊಡುತ್ತಿರುವ ಕಿರುಕುಳದ ಬಗ್ಗೆ ಗಮನಸೆಳೆಯಲು ಪ್ರಧಾನಮಂತ್ರಿಯವರಿಗೆ ಪತ್ರವೊಂದನ್ನು ಪಾರ್ಲಿಮೆಂಟಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಗುಂಪಿನ ನಾಯಕ ಕಾಂ. ಸಮರಮುಖರ್ಜಿಯವರು ಬರೆದಿದ್ದಾರೆ. ಗಾರ್ಡುಗಳಿಲ್ಲದೆ, ಸರಿಯಾದ ಬ್ರೇಕುಗಳಿಲ್ಲದೆ ಗಾಡಿಓಡಿಸುವುದು, ಡ್ರೈವರುಗಳಲ್ಲದವರಿಂದ ಗಾಡಿಓಡಿಸುವುದು ನಡೆಯುತ್ತಿದೆ. ಇದಕ್ಕೆ ರೈಲ್ವೇ ಅಧಿಕಾರಿಗಳ ಗುಪ್ತ ಆಶೀರ್ವಾದವಿರುವಂತಿದೆ ಎಂದು ಕಾಂ. ಮುಖರ್ಜಿ ಆಪಾದಿಸಿದ್ದಾರೆ. ಜನರ ಪ್ರಾಣದೊಂದಿಗೆ ನಡೆಯುತ್ತಿರುವ ಈ ಆಟವನ್ನು ನಿಲ್ಲಿಸಲು ಅವರು ಪ್ರಧಾನ ಮಂತ್ರಿಗಳನ್ನು ವಿನಂತಿಸಿದ್ದಾರೆ.

ಜತೆಗೆ ರೈಲು ಕಾರ್ಮಿಕಸಂಘಗಳ ಅನೇಕ ನಾಯಕರುಗಳು ಇನ್ನೂ ರಾಷ್ಟ್ರೀಯ ಭದ್ರತಾ ಕಾನೂನಿನಡಿಯಲ್ಲಿ ವಿಚಾರಣೆ ಇಲ್ಲದೇ ಬಂಧಿಸಲಾಗಿದ್ದನ್ನು ಎತ್ತಿತೋರಿಸಿರುವ ಪತ್ರವು ಮನ್ನಣೆ ಪಡೆಯದ ಕಾರ್ಮಿಕಸಂಘಗಳಿಗೆ ಪ್ರಾಥಮಿಕ ಹಕ್ಕುಗಳೂ ಇಲ್ಲದಿರುವುದರ ಕಡೆಗೆ ಪ್ರಧಾನಿಗಳ ಗಮನ ಸೆಳೆದಿದೆ.

ಈ ಸಂಗತಿಯನ್ನು ರೈಲ್ವೇ ಮಂತ್ರಿ ಪಾಂಡೆಯವರಿಗೆ ವಿವರಿಸಿದಾಗ ಅವರಿಗೆ ಮಾತನಾಡಲು ಬಾಯೇ ಇರಲಿಲ್ಲವೆಂದಿರುವ ಕಾಂ. ಮುಖರ್ಜಿ ಇದನ್ನು ತಕ್ಷಣ ನಿಲ್ಲಿಸುವಂತೆ ಪ್ರಧಾನ ಮಂತ್ರಿಯವರನ್ನು ಒತ್ತಾಯಿಸಿದ್ದಾರೆ.

-ವಿರಾಜ್

ಮೂವತ್ತರ ದಶಕದ ಹೋರಾಟಗಳ ನೆನಪು

[1930ರ ದಶಕದ ಆರಂಭ. ಭಾರತದ ಸ್ವಾತಂತ್ರ್ಯ ಚಳುವಳಿ ಪುನಶ್ಚೇತನಗೊಂಡು ಹೊಸ ಉತ್ಸಾಹದಿಂದ ಮುನ್ನುಗ್ಗುತ್ತಿದ್ದ ಕಾಲ. ಕಾಂಗ್ರೆಸ್ ಬಹಳಷ್ಟು ಹಿಗ್ಗಾಮುಗ್ಗಿ ನಡೆಸಿದ ನಂತರ ಲಾಹೋರ್ ಅಧಿವೇಶನದಲ್ಲಿ ಪೂರ್ಣಸ್ವರಾಜ್ಯ ತನ್ನ ಧ್ಯೇಯ ಎಂದು ಆಗತಾನೇ ಘೋಷಿಸಿತ್ತು. 1930 ಮಾರ್ಚ್ 12ರಂದು ಗಾಂಧೀಜಿ ತಮ್ಮ ದಂಡೀಯಾತ್ರೆ ಆರಂಭಿಸಿದ್ದರು. ಇವೆರಡು ಘಟನೆಗಳೊಂದಿಗೆ ದೇಶದಲ್ಲಿ ವಿದ್ಯುತ್‌ಸಂಚಾರವಾದಂತಾಗಿತ್ತು. ಈ ಎರಡು ಘಟನೆಗಳಿಗೆ ಬ್ರಿಟಿಷ್ ಸರಕಾರವಾಗಲಿ, ರಾಷ್ಟ್ರೀಯ ನಾಯಕತ್ವವಾಗಲಿ ಊಹಿಸಲಾಗದಷ್ಟು ಪ್ರಮಾಣದಲ್ಲಿ ಜನಸಾಮಾನ್ಯರು ಉತ್ಸಾಹಭರಿತ ಪ್ರತಿಕ್ರಿಯೆ ತೋರಿದರು.

ಈ ಹಿನ್ನೆಲೆಯಲ್ಲಿ ಜನಸಮುದಾಯದ ಉತ್ಸಾಹ, ಸಂಭ್ರಮ ತಾರಕ್ಕೇರಿದಾಗ, ಸುಮಾರು 5 ವಾರಗಳ ಅವಧಿಯಲ್ಲಿ ನಡೆದ ಮೂರು ಘಟನೆಗಳು ಸ್ವಾತಂತ್ರ್ಯ ಚಳವಳಿಯ ಪ್ರಮುಖ ಮೈಲಿಗಲ್ಲುಗಳಾಗಿವೆ. ಅವು ಅನುಕ್ರಮವಾಗಿ-ಏಪ್ರಿಲ್ 18ರಂದು ಸೂರ್ಯಸೇನ್ (ಮಾಸ್ಟರ್‌ದಾ) ಮತ್ತು ಅವರ 63 ಸಂಗಾತಿಗಳು ಚಿತ್ತಗಾಂಗ್ ಶಸ್ತ್ರಾಗಾರದ ಮೇಲೆ ಮಿಂಚಿನ ದಾಳಿ ನಡೆಸಿ ವಶಪಡಿಸಿಕೊಂಡು ಮುಂದೆ ನಾಲ್ಕು ವರ್ಷಗಳವರೆಗೆ ನಡೆಸಿದ ಗೆರಿಲ್ಲಾ ಹೋರಾಟ; ಪೇಶಾವರದಲ್ಲಿ ನಡೆದ ಜನತೆಯ ದಂಗೆಯನ್ನು ದಮನಮಾಡಲು ಕಳಿಸಿದ ಘಡವಾಲಿ ರೆಜಿಮೆಂಟಿನ ಸೈನಿಕರು ಅಧಿಕಾರಿಗಳ ಆಜ್ಞೆ ಧಿಕ್ಕರಿಸಿ ಜನರನ್ನು ಕೂಡಿಕೊಂಡು ಜನರ ಹೋರಾಟವನ್ನು ಉನ್ನತಮಟ್ಟಕ್ಕೊಯ್ದ ಘಟನೆ ಮತ್ತು ಕೊನೆಯದಾಗಿ ಸೊಲ್ಲಾಪುರದಲ್ಲಿ ಮೇ 6ರಂದು ಗಿರಣಿ ಕಾರ್ಮಿಕರ ನೇತೃತ್ವದಲ್ಲಿ 5-6 ದಿನಗಳ ಮಟ್ಟಿಗೆ ಬ್ರಿಟಿಷ್ ಸರಕಾರವನ್ನು ಕಿತ್ತೊಗೆದ ಸಾಮಾನ್ಯ ಜನತೆಯ ದಂಗೆ.

ಈ ಮೂರು ಹೋರಾಟಗಳು ಐದು ದಶಕಗಳ ಹಿಂದೆ ನಡೆದದ್ದು ಹಲವು ರೀತಿಯಲ್ಲಿ ಗಮನಾರ್ಹವಾಗಿದೆ. ಈ ಎಲ್ಲಾ ಹೋರಾಟಗಳ ಗಮನಾರ್ಹ ಅಂಶಗಳೆಂದರೆ: ಇವು ಅಹಿಂಸೆಯ ಪರಿಧಿಯನ್ನು ಮೀರಿ ನಿಂತದ್ದು; ಚಳವಳಿಯ ರೀತಿ, ನಾಯಕತ್ವ, ಸ್ವಯಂಸೇವಕರ ವರ್ಗಹಿನ್ನೆಲೆ ಮತ್ತು ಒಂದು ಅರ್ಥದಲ್ಲಿ ಉದ್ದೇಶಗಳಲ್ಲೂ ಗಾಂಧೀಜಿಯ ಮಾದರಿಯನ್ನು ಅನುಸರಿಸಿದ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಧಾರೆಯಿಂದ ಭಿನ್ನವಾದದ್ದು. ಆದರೆ ಈ ಎಲ್ಲಾ ಚಳುವಳಿಗಳು ಗಾಂಧೀಜಿಯ ಅಸಹಕಾರ ಚಳುವಳಿಯ ಹಿನ್ನೆಲೆಯಲ್ಲಿಯೇ ಹುಟ್ಟಿ ಬೆಳೆದು, ಅದರಿಂದ ಪ್ರಭಾವಿತವಾಗಿದ್ದವು. ಆದರೆ ಇವು ಗಾಂಧೀಜಿ ನಾಯಕತ್ವ ಪ್ರತಿನಿಧಿಸಿದ ರಾಷ್ಟ್ರೀಯ ಬೂರ್ಜ್ವಾವರ್ಗದ ಹಿತಾಸಕ್ತಿಗಳನ್ನು ಮೀರಿನಿಂತು ಭಾರತದ ಸ್ವಾತಂತ್ರ್ಯ ಚಳುವಳಿಗೆ ಒಂದು ಹೊಸ ಆಯಾಮ ನೀಡಿದವು. ಆದ್ದರಿಂದಲೇ ಜನಜನಿತವಾಗಿರುವ ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯಲ್ಲಾಗಲೀ, ಅಧಿಕೃತ ಇತಿಹಾಸದಲ್ಲಾಗಲೀ ಈ ಮೂರು ಪ್ರಮುಖ ಘಟನೆಗಳನ್ನು ಕಡೆಗಣಿಸಲಾಗಿದೆ.]

ಚಿತ್ತಗಾಂಗದ ರಣಕಹಳೆ :

ಸ್ವಾತಂತ್ರ್ಯ ಇಲ್ಲವೆ ಮರಣ

1922ರಲ್ಲಿ ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡಂದಿನಿಂದ ಬಂಗಾಳೀ ಕ್ರಾಂತಿಕಾರಿಗಳಿಗೆ ಗಾಂಧೀಜಿಯ ಅಹಿಂಸಾತ್ಮಕ ಅಸಹಕಾರ ಚಳುವಳಿಯ ಸಾಮರ್ಥ್ಯದ ಬಗ್ಗೆ ಪೂರ್ಣ ಭ್ರಮನಿರಸನವಾಗಿತ್ತು. ಗಾಂಧೀಜಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಎಂದಾದರೂ ಸಮರಶೀಲ ಹೋರಾಟದ ಕಾರ್ಯಕ್ರಮ ಹಾಕುವರೆಂಬ ಬಗ್ಗೆ ಕೂಡಾ ಯಾವುದೇ ನಿರೀಕ್ಷೆ ಉಳಿದಿರಲಿಲ್ಲ. ಆದ್ದರಿಂದ ಮಾಸ್ಟರ್ ದಾ ಎಂದು ಹೆಸರಾದ ಸೂರ್ಯಸೇನ್ ಮತ್ತು ಅವರ ಸಂಗಾತಿಗಳು ತಮ್ಮ ಕ್ರಾಂತಿಕಾರಿ ಚಟುವಟಿಕೆಗಳನ್ನು ಮುಂದುವರೆಸಲು ನಿರ್ಧರಿಸಿದರು. ಇದನ್ನು ದಮನಿಸಲು ಕುಖ್ಯಾತ "ಬಂಗಾಳ ಸುಗ್ರೀವಾಜ್ಞೆ" ಜಾರಿಮಾಡಲಾಯಿತು. 1924ರಲ್ಲಿ ಗಣೇಶ್ ಘೋಷ್ ಮತ್ತಿತರರು, 1926ರಲ್ಲಿ ಸೂರ್ಯಸೇನ್ ಮತ್ತಿತರರು ಬಂಧಿತರಾದರು.

1928ರಲ್ಲಿ ಬಿಡುಗಡೆಯಾದಾಗ ಈ ಕ್ರಾಂತಿಕಾರಿಗಳು ಸೂರ್ಯಸೇನ್ ಅವರ ಅಧ್ಯಕ್ಷತೆಯಲ್ಲಿ 'ಇಂಡಿಯನ್ ರಿಪಬ್ಲಿಕನ್ ಆರ್ಮಿ'ಯ ಚಿತ್ತಗಾಂಗ್ ಶಾಖೆ ಸ್ಥಾಪಿಸಿದರು. ಚಿತ್ತಗಾಂಗ್ ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲೂ ಈ ಕ್ರಾಂತಿಕಾರಿಗಳು ಸ್ಪರ್ಧಿಸಿ ಗೆದ್ದರು. ಡಿಸೆಂಬರ್ 1928ರ ಕಾಂಗ್ರೆಸ್‌ನ ಕಲ್ಕತ್ತಾ ಅಧಿವೇಶನದಲ್ಲಿ ಭಾಗವಹಿಸಿದರು. ಅಲ್ಲಿ ಪೂರ್ಣ ಸ್ವರಾಜ್ಯ ಕಾಂಗ್ರೆಸ್‌ನ ಧ್ಯೇಯವಾಗಬೇಕೆಂಬ ನೆಹ್ರೂ, ಸುಭಾಷ್ ಗೊತ್ತುವಳಿಯನ್ನು ಗಾಂಧೀಜಿ ನೇತೃತ್ವದ ಬಲಪಂಥೀಯರು ತಡೆಹಿಡಿದರು. ಬರೀ 'ಆಂತರಿಕ ಸ್ವಯಮಾಧಿಕಾರ' ಅಥವಾ ಡೊಮಿನಿಯನ್ ಸ್ಥಾನಮಾನ ಕೊಡುವಂತೆ ಕೇಳಲಾಯಿತು.

ಈ ಅಧಿವೇಶನದಿಂದ ಹಿಂತಿರುಗಿದ ಕ್ರಾಂತಿಕಾರಿಗಳು ಸಮಾಲೋಚನೆ ನಡೆಸಿ ಗಾಂಧೀಜಿ ಏನಾದರೂ ತೀವ್ರ ಕಾರ್ಯಕ್ರಮ ಹಾಕಿಕೊಳ್ಳುವಂತೆ ಅವರ ಮೇಲೆ ಒತ್ತಾಯ ತರುವ ಒಂದು ತೀವ್ರ ಕಾರ್ಯಾಚರಣೆ ನಡೆಸಬೇಕೆಂದು ತೀರ್ಮಾನಿಸಿದರು. ಇಲ್ಲದಿದ್ದರೆ ಜನರ ಉತ್ಸಾಹ ಭಂಗವಾಗುವ ಸಾಧ್ಯತೆಯಿದೆ ಹಾಗೂ ಹೀಗಾಗಲು ಬಿಡುವುದು ಕ್ರಾಂತಿಕಾರಿಗಳ ಮಟ್ಟಿಗಂತೂ ದೇಶದ್ರೋಹವೆಸಗಿದಂತೆ ಎಂದೂ ನಿಶ್ಚಯಿಸಿದರು.

"ಮರಣ ಕಾರ್ಯಕ್ರಮ"

ಅವರು "ಮರಣ ಕಾರ್ಯಕ್ರಮ" ಎಂಬ ಕಾರ್ಯಕ್ರಮವೊಂದನ್ನು ಸಿದ್ಧಪಡಿಸಿದರು. ಈ ಕಾರ್ಯಕ್ರಮದ ತಿರುಳೆಂದರೆ ದೇಶದ ಯಾವುದಾದರೊಂದು ಸಣ್ಣ ಭಾಗವನ್ನು ಸಶಸ್ತ್ರವಾಗಿ ವಿಮೋಚನೆಗೊಳಿಸಿ ರಕ್ತದ ಕೊನೆಯ ಬಿಂದುವಿನವರೆಗೂ ಅದನ್ನು ರಕ್ಷಿಸುವುದು. ಈ ಸಾಧ್ಯತೆಯೇ ದೇಶದ ಜನರಲ್ಲಿ, ಅದರಲ್ಲೂ ರಾಷ್ಟ್ರೀಯ ಚಳುವಳಿಯ ಮುಂಚೂಣಿಯಲ್ಲಿರುವ ಯುವಕ ಕಾರ್ಯಕರ್ತರಲ್ಲಿ ಅಮಿತ ಆತ್ಮವಿಶ್ವಾಸ ಮೂಡಿಸಿ, ಇಂತಹ ಕೆಲಸವನ್ನು ದೇಶದ ಎಲ್ಲೆಡೆ ಕಾರ್ಯಗತ ಮಾಡಲು ಪ್ರೇರೇಪಿಸುತ್ತದೆ. ಇದು ಸಾಧ್ಯವಾದರೆ ಯಾವುದೇ ನಾಯಕರೂ-ಗಾಂಧೀಜಿ ಸಹ–ದೇಶದ ಸಂಪೂರ್ಣ ಸ್ವಾತಂತ್ರ್ಯಕ್ಕೆ ಸಮರಶೀಲ ಹೋರಾಟವನ್ನು ತಡೆಯಲು ಸಾಧ್ಯವಾಗುವುದಿಲ್ಲ.

ಚಿತ್ತಗಾಂಗನ್ನು ಈ ಕಾರ್ಯಕ್ರಮಕ್ಕೆ ಆಯ್ದುಕೊಳ್ಳಲಾಯಿತು. ಕಾರ್ಯಕ್ರಮದ ವಿವರಗಳನ್ನು ಗೋಪ್ಯವಾಗಿಡಲಾಯಿತು. ಚಿತ್ತಗಾಂಗ್ ಕ್ರಾಂತಿಕಾರಿ ಗುಂಪಿನ 5ಜನರ-ಸೂರ್ಯಸೇನ್, ಅಂಬಿಕಾ ಚಕ್ರವರ್ತಿ, ಅನಂತಲಾಲ್ ಸಿಂಗ್, ನಿರ್ಮಲಸೇನ್ ಮತ್ತು ಗಣೇಶ್‌ಘೋಷ್ ಇವರ ಹೈಕಮಾಂಡ್‌ಗೆ ಮಾತ್ರ ಇದು ಗೊತ್ತಿತ್ತು. ಇತರ ಕ್ರಾಂತಿಕಾರಿಗಳಿಗೆ "ಮರಣ ಕಾರ್ಯಕ್ರಮ"ವೆಂದರೆ ದೇಶದ ವಿಮೋಚನೆಗಾಗಿ ಸಾಯಲೂ ಸಿದ್ಧವಾಗಿರುವ ಕಾರ್ಯಾಚರಣೆ ಎಂದು ತಿಳಿಸಲಾಯಿತು. ಚಿತ್ತಗಾಂಗ್‌ನಲ್ಲಿ ಬ್ರಿಟಿಷ್ ಆಡಳಿತದ ಶಕ್ತಿಯ ಮೂಲವಿರುವುದು ಅಲ್ಲಿನ ಶಸ್ತ್ರಾಗಾರದಲ್ಲಿ. ಆದ್ದರಿಂದ ಅದರ ಮೇಲೇನೇ ನೇರವಾಗಿ ದಾಳಿಯಿಡುವುದು, ಸಾಧ್ಯವಾದಷ್ಟು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುವುದು ಈ ಕಾರ್ಯಕ್ರಮದ ಮುಖ್ಯ ಅಂಗವಾಯಿತು. ಹಾಗೂ ಚಿತ್ತಗಾಂಗನ್ನು ವಶಪಡಿಸಿಕೊಳ್ಳಲು ಸುಲಭವಾಗುವಂತೆ ಅಲ್ಲಿನ 3000 ಸಶಸ್ತ್ರ ಬ್ರಿಟಿಷರಿಗೆ ಜಗತ್ತಿನ ಕೆಲವು ದಿನಗಳ ಮಟ್ಟಿಗಾದರೂ ಸಂಪರ್ಕ ಕಡಿದುಹಾಕಲು 2-3 ಸ್ಥಳಗಳಲ್ಲಿ ರೈಲ್ವೇ ಲೈನನ್ನು ಕಡಿದು ಹಾಕುವುದು, ಟೆಲಿಫೋನ್, ಟೆಲಿಗ್ರಾಫ್ ಸಂಪರ್ಕಗಳನ್ನು ಕಡಿದುಹಾಕುವುದು ಇವು ಕಾರ್ಯಕ್ರಮದ ಉಳಿದ ಮುಖ್ಯ ಭಾಗಗಳು. ಇವೆಲ್ಲವನ್ನೂ ಅತೀ ಸಣ್ಣ ವಿವರವೂ ಸೇರಿದಂತೆ ಮುಂತುವರ್ಜಿಯಿಂದ ಮೊದಲೇ ಯೋಜಿಸಲಾಗಿತ್ತು. ಇವೆಲ್ಲವನ್ನೂ ಸುಮಾರು 60–65 ಎಚ್ಚರಿಕೆಯಿಂದ ಆಯ್ದ ಕಂಕಣಬದ್ಧ ಕ್ರಾಂತಿಕಾರಿಗಳು ಕಾರ್ಯಗತಗೊಳಿಸಬೇಕಿತ್ತು. ಇದಕ್ಕೆ ಬೇಕಾದ ಹಣ ಮತ್ತು ಸ್ವಲ್ಪ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲಾಯ್ತು. ಕಾರ್ಯಕ್ರಮಕ್ಕೆ 1930ರ ಏಪ್ರಿಲ್ 18ನೇ ದಿನಾಂಕವನ್ನು ಗೊತ್ತುಪಡಿಸಲಾಯ್ತು. ಆದಿನ ಗುಡ್‌ಫ್ರೈಡೇ. ಇದೇ ದಿನ ಐರಿಷ್ ಕ್ರಾಂತಿಕಾರಿಗಳು ನಡೆಸಿದ ಈಸ್ಟರ್ ದಂಗೆಗಳ ನೆನಪಿಗಾಗಿ ಈ ದಿನವನ್ನು ಆಯ್ದುಕೊಳ್ಳಲಾಗಿತ್ತು. ಈ ದಿನ ಮೇಲೆ ಹೇಳಿದ ಎಲ್ಲಾ ಕಾರ್ಯಾಚರಣೆಗಳು ಒಂದೇ ಸಮಯದಲ್ಲಿ ಆಗಬೇಕಿತ್ತು. ಇದಕ್ಕಾಗಿ ಕ್ರಾಂತಿಕಾರಿಗಳು 5-6 ಸ್ಕ್ವಾಡ್‌ಗಳಾಗಿ ಒಬ್ಬೊಬ್ಬರ ನಾಯಕತ್ವದಲ್ಲಿ ಕಾರ್ಯಾಚರಣೆ ನಡೆಸುವ ಏರ್ಪಾಡಾಗಿತ್ತು.

ನಿರ್ಣಾಯಕ ದಾಳಿ

ಮೊದಲೇ ನಿರ್ಧರಿಸಿದ ದಿನ ರಾತ್ರಿ 10-10ಕ್ಕೆ ಚಿತ್ತಗಾಂಗ್ ಶಸ್ತ್ರಾಗಾರದ ಮೇಲೆ, ಸಹಾಯಕ ಸೈನ್ಯದ ಶಸ್ತ್ರಾಗಾರದ ಮೇಲೆ, ಟೆಲಿಫೋನ್, ಟೆಲಿಗ್ರಾಫ್ ಆಫೀಸುಗಳ ಮೇಲೆ, ಪೋಲೀಸ್ ಮುಖ್ಯ ಕಚೇರಿಯ ಮೇಲೆ ಮಿಂಚಿನದಾಳಿ ನಡೆಸಿದರು. ಮುಖ್ಯ ಕಾರ್ಯಾಗಾರದಲ್ಲಿ ಗಣೇಶ್ ಘೋಷ್ ಮತ್ತು ಅನಂತಲಾಲ್ ಕಾವಲುಗಾರರನ್ನು ಕೊಂದು "ಭಾಗ್‌ಜಾವೋ, ಗಾಂಧಿ ಕಾ ರಾಜ್ ಹೋ ಗಯಾ" ಎಂದು ಕೂಗಿದರು. ಇಷ್ಟಕ್ಕೆ ಶಸ್ತ್ರಾಗಾರ ಕಾಯುತ್ತಿದ್ದ ಸುಮಾರು 500 ಜನ ಪೋಲೀಸರು ಪರಾರಿಯಾದರು. ಸುಮಾರು 5 ನಿಮಿಷಗಳಲ್ಲೇ ಶಸ್ತ್ರಾಗಾರ ಕ್ರಾಂತಿಕಾರಿಗಳ ಕೈಯಲ್ಲಿತ್ತು. ಸಾಧ್ಯವಿದ್ದಷ್ಟು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡು ಉಳಿದ ಶಸ್ತ್ರಾಸ್ತ್ರಗಳನ್ನು ಬೆಂಕಿ ಇಟ್ಟು ನಾಶಪಡಿಸಲಾಯ್ತು. ಎಲ್ಲಾ ಯೋಜಿತ ಕಾರ್ಯಾಚರಣೆಗಳನ್ನು ಯಶಸ್ವಿಯಾಗಿ ನಡೆಸಲಾಯಿತು. ಮತ್ತು ಯಾವುದೇ ಸಾವು ನೋವುಗಳಿಲ್ಲದೆ (ಕ್ರಾಂತಿಕಾರಿಗಳ ಕಡೆಯಿಂದ). ಆದರೆ ಕೊನೇ ಹಂತದಲ್ಲಿ ಶಸ್ತ್ರಾಸ್ತ್ರಗಳನ್ನು ನಾಶಪಡಿಸುವ ಕಾರ್ಯದಲ್ಲಿ ಒಬ್ಬ ಸಾವಿಗೀಡಾದ.

ಈ ವೇಳೆಗೆ ಮ್ಯಾಜಿಸ್ಟ್ರೇಟ್‌ಗೆ ಈ ಎಲ್ಲಾ ಸಮಾಚಾರ ತಿಳಿದು, ಆತ ಯುರೋಪಿಯನ್ ಕುಟುಂಬಗಳಿಗೆ ಅಪಾಯ ಸೂಚನೆ ತಿಳಿಸಿದ್ದಲ್ಲದೆ ಚಿತ್ತಗಾಂಗ್ ಬಂದರಿಗೆ ಹೋಗಿ ಕಲ್ಕತ್ತೆಗೆ ದಂಗೆಯ ಸಮಾಚಾರವನ್ನು ರೇಡಿಯೋ ಸಂದೇಶದ ಮೂಲಕ ತಿಳಿಸಿದ. ಅಪಾಯ ಸೂಚನೆ ಕಂಡ ಚಿತ್ತಗಾಂಗ್ ಕ್ರಾಂತಿಕಾರಿಗಳು ಜಲಾಲ್‌ಬಾದ್ ಬೆಟ್ಟಗಳಲ್ಲಿ ಮರೆಯಾಗಲು ನಿರ್ಧರಿಸಿದರು. ಆದರೆ ಏಪ್ರಿಲ್ 22ರಂದು ಅಲ್ಲಿಗೆ ಈಸ್ಟರ್ನ್ ಫ್ರಾಂಟಿಯರ್ ರೈಫಲ್ಸ್, ಗೋರ್ಖಾ ಪಡೆ ಮತ್ತು ಬ್ರಿಟಿಷ್ ಪಡೆಗಳು ಆಗಮಿಸಿದವು. ಅವು ಜಲಾಲ್‌ಬಾದ್ ಬೆಟ್ಟದ ಎದುರಿನ ಬೆಟ್ಟದಿಂದ ಕದನ ಆರಂಭಿಸಿದವು. ಭೀಕರ ಕದನ ನಡೆಯಿತು. ಕ್ರಾಂತಿಕಾರಿಗಳು ವೀರಾವೇಶದಿಂದ ಹೋರಾಡಿದರು. ಕ್ರಾಂತಿಕಾರಿಗಳ ಕಡೆ 11 ಹಾಗೂ ವೈರಿಗಳಲ್ಲಿ 82ಜನ ಮರಣ ಹೊಂದಿದರು. ಬ್ರಿಟಿಷ್ ಪಡೆಗಳಿಗೆ ಜಲಾಲ್‌ಬಾದ್ ಬೆಟ್ಟವೇರಲು ಸಾಧ್ಯವಾಗದೆ ಹಿಮ್ಮೆಟ್ಟಬೇಕಾಯಿತು. ಕ್ರಾಂತಿಕಾರಿಗಳ ಕಡೆ 14 ವರ್ಷದ ಬಾಲಕ ತೇಗ್ರಾನ ಬಲಿ ಮೊದಲನೆಯದಾಗಿತ್ತು. ಅದೇ ರಾತ್ರಿ ಮಾಸ್ಟರ್ ದಾರ ಆಜ್ಞೆಯಂತೆ ಉಳಿದ ಕ್ರಾಂತಿಕಾರಿಗಳೆಲ್ಲ ಭೂಗತರಾಗಿ ಮರುದಿನದ ಕಾರ್ಯಕ್ರಮಗಳಿಗೆ ಅಣಿಯಾಗಲು ಹಳ್ಳಿಗಳಿಗೆ ತಪ್ಪಿಸಿಕೊಂಡು ಹೋದರು.

ಮರುದಿನ ಬ್ರಿಟಿಷ್ ಪಡೆಗಳು ಹೆಚ್ಚಿನ ಸಂಖ್ಯೆಯಲ್ಲಿ ಜಲಾಲ್‌ಬಾದ್ ಬೆಟ್ಟವೇರಿದಾಗ ಅವರಿಗೆ ದಕ್ಕಿದ್ದು 11 ಜನ ಹುತಾತ್ಮರ ಹೆಣಗಳು ಮಾತ್ರ. ಜಲಾಲ್‌ಬಾದ್ ಕದನದ ನಂತರ ಚಿತ್ತಗಾಂಗ್ ಪಟ್ಟಣ ವಶಪಡಿಸಿಕೊಳ್ಳುವ ಯೋಜನೆಯನ್ನು ಕೈಬಿಡಲಾಯಿತು.

ನಾಲ್ಕು ವರ್ಷಗಳ ಗೆರಿಲ್ಲಾ ಹೋರಾಟ

ಹಳ್ಳಿಗಳಿಗೆ ತೆರಳಿದ ಕ್ರಾಂತಿಕಾರಿ ಸ್ಕ್ವಾಡ್‌ಗಳು ಈ ಹಳ್ಳಿಗಳನ್ನು ರಕ್ಷಣೆಗಾಗಿ ಮತ್ತು ಭವಿಷ್ಯದ ನೆಲೆಗಳಾಗಿ ಪರಿವರ್ತಿಸಿಕೊಂಡವು. ಮುಂದಿನ ನಾಲ್ಕು ವರ್ಷಗಳು ಈ ಕ್ರಾಂತಿಕಾರಿಗಳ ಗೆರಿಲ್ಲಾ ಕಾರ್ಯಾಚರಣೆಗಳಿಂದ ಬ್ರಿಟಿಷರಿಗೆ ನಿದ್ದೆಯಿಲ್ಲವಾಯಿತು. ಚಿತ್ತಗಾಂಗ್ ಪಟ್ಟಣ ವಸ್ತುಶಃ ಒಂದು ದೊಡ್ಡ ಮಿಲಿಟರಿ ಕ್ಯಾಂಪು ಆಗಿ ಪರಿವರ್ತಿತವಾಯಿತು. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸಹ ಹಲವು ಕ್ಯಾಂಪುಗಳನ್ನು ಸ್ಥಾಪಿಸಲಾಯಿತು. ಎಲ್ಲಾ ನಾಗರಿಕರು ಗುರುತಿನ ಪತ್ರಗಳನ್ನು ಪಡೆದು ಒಯ್ಯಬೇಕಾಗಿತ್ತು. ಕ್ರಾಂತಿಕಾರಿಗಳನ್ನು ಹಿಡಿಯಲು ಹಳ್ಳಿಗಳ ಮೇಲೆ ದಾಳಿ, ಮನೆಮನೆಗಳ ಶೋಧನೆ, ಅವರಿಗೆ ರಕ್ಷಣೆ ನೀಡುವವರಿಗೆ ಕಿರುಕುಳ ಇವೆಲ್ಲಾ ಮುಂದುವರೆದವು. ಆದರೂ ಗೆರಿಲ್ಲಾ ಕಾರ್ಯಾಚರಣೆಗಳು ಮುಂದುವರೆದವು. ಕಾರ್ಯಕರ್ತರು ಸಿಕ್ಕಿಬೀಳಲಿಲ್ಲ.

ಮೇ. 6ರಂದು ಯುರೋಪಿಯನ್ ಕ್ವಾರ್ಟರ್ಸ್ ಮೇಲೆ ದಾಳಿ ಮಾಡಲು ಹೋಗುತ್ತಿದ್ದ ಸ್ಕ್ವಾಡ್‌ಗೆ ಬ್ರಿಟಿಷ್ ಪಡೆಗಳು ಎದುರಾಗಿ ತೀವ್ರ ಕಾಳಗ ನಡೆಯಿತು. ಡಿಸೆಂಬರ್ 30ರಂದು ಇಬ್ಬರು ಕ್ರಾಂತಿಕಾರಿಗಳು

ಚಾಂದ್‌ಪುರದ ಪೋಲೀಸ್ ಇನ್‌ಸ್ಪೆಕ್ಟರನ್ನು ಬ್ರಿಟಿಷ್ ಐ.ಜಿ.ಪಿ. ಎಂದು ತಪ್ಪಾಗಿ ಭಾವಿಸಿ ಗುಂಡಿಕ್ಕಿ ಕೊಂದರು. ಜೂನ್ 1931ರಲ್ಲಿ ಚಿತ್ತಗಾಂಗ್ ಪಟ್ಟಣದಲ್ಲೇ ಕೆಲವು ಸ್ಥಳಗಳಲ್ಲಿ ಡೈನಾಮೈಟ್ ಸಿಡಿಸಿ ಜೈಲಿನಲ್ಲಿದ್ದ ಕೆಲವು ಕ್ರಾಂತಿಕಾರಿಗಳನ್ನು ಬಿಡುಗಡೆ ಮಾಡುವ ಭಾರಿ ಕಾರ್ಯಕ್ರಮವೊಂದನ್ನು ಸೂರ್ಯಸೇನ್ ರೂಪಿಸಿದರು. ಆದರೆ ಯೋಜಿತ ದಿನಕ್ಕಿಂತ ಒಂದು ದಿನ ಮೊದಲು ಇದು ಬಯಲಾಗಿ ಕಾರ್ಯಗತ ಮಾಡುವುದು ಸಾಧ್ಯವಾಗಲಿಲ್ಲ. ಆಗಸ್ಟ್‌ನಲ್ಲಿ 14 ವರ್ಷದ ಒಬ್ಬ ಕ್ರಾಂತಿಕಾರಿ, ಅಸನುಲ್ಲಾ ಎಂಬ ಕುಖ್ಯಾತ ಪೋಲೀಸ್ ಇನ್‌ಸ್ಪೆಕ್ಟರನನ್ನು ಗುಂಡಿಕ್ಕಿ ಕೊಂದ. 1932 ಸೆಪ್ಟೆಂಬರ್‌ನಲ್ಲಿ ಪಾಹರ್‌ತಾಲಿ ರೈಲ್ವೆ ಕ್ಲಬ್ ಮೇಲೆ ದಾಳಿ ನಡೆಸಲಾಯಿತು. ಇದನ್ನು ಪ್ರೀತಿ ವಾಡೆದಾರ್ ಎಂಬ ಮಹಿಳಾ ಕ್ರಾಂತಿಕಾರಿ ನಡೆಸಿದಳು. (ಈ ದಾಳಿಯಿಂದ ಹಿಂದಿರುಗುವಾಗ ಈಕೆ ಆತ್ಮಹತ್ಯೆ ಮಾಡಿಕೊಂಡಳು.)

ಈ ಎಲ್ಲಾ ಕಾರ್ಯಾಚರಣೆಗಳು ಹಳ್ಳಿಯ ರೈತರ, ಮಧ್ಯಮವರ್ಗದವರ ಸಕ್ರಿಯ ಸಹಕಾರವಿಲ್ಲದೆ ಸಾಧ್ಯವಿರಲಿಲ್ಲ. ಜಲಾಲ್‌ಬಾದ್ ಕದನದ ನಂತರ ಚಿತ್ತಗಾಂಗ್‌ನ ಮಧ್ಯಮವರ್ಗ ಕ್ರಾಂತಿಕಾರಿಗಳನ್ನು ಮೆಚ್ಚಿಕೊಂಡಿತ್ತು. ಮತ್ತು ಸಾಧ್ಯವಾದ ಎಲ್ಲಾ ಸಹಾಯಮಾಡಿತು. ಹಳಿಗಳಲ್ಲಿ ಗೆರಿಲ್ಲಾ ತರಬೇತಿ ಪಡೆದ ಸುಮಾರು 500 ಜನ ಸ್ವಯಂಸೇವಕರು ಎಂತಹ ಸಂದರ್ಭದಲ್ಲೂ ಹಿಂದೆಗೆಯದೆ ಕ್ರಾಂತಿಕಾರಿಗಳಿಗೆ ರಕ್ಷಣೆ, ಅನ್ನ ವಸತಿಗಳ ಏರ್ಪಾಡು, ಸುದ್ದಿಗಳನ್ನು ತರುವುದು–ಕಳಿಸುವುದರಲ್ಲಿ ಸಹಾಯ ಮಾಡಿದರು.

ಗೆರಿಲ್ಲಾ ಕಾರ್ಯಕ್ರಮದ ಹಂತದಲ್ಲಿ ಹಲವು ಮಹಿಳಾ ಕ್ರಾಂತಿಕಾರಿಗಳು ಭಾಗವಹಿಸಿದರು. ಕಲ್ಕತ್ತೆಯಿಂದ ಶಸ್ತ್ರಾಸ್ತ್ರ, ಸಿಡಿಮದ್ದು ಇತ್ಯಾದಿಗಳನ್ನು ತರುವುದು, ಸುದ್ದಿಗಳನ್ನು ಮುಟ್ಟಿಸುವುದು ಇಂತಹ ಕೆಲಸಗಳನ್ನು ವಿಶೇಷವಾಗಿ ಮಹಿಳಾ ಕಾರ್ಯಕರ್ತರಿಗೆ ವಹಿಸಲಾಗುತ್ತಿತ್ತು. ಏಕೆಂದರೆ ಆಗಿನ ಪೋಲೀಸು, ಮಿಲಿಟರಿ ಅಧಿಕಾರಿಗಳು ಮಹಿಳೆಯರು ಇಂತಹ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗವಹಿಸಬಹುದು ಎಂದು ಊಹಿಸಲು ಸಹ ಅಶಕ್ತರಾಗಿದ್ದರು. ಹಲವು ಪ್ರಮುಖ ಮಹಿಳಾ ಕಾರ್ಯಕರ್ತೆಯರು ದಾಳಿಗಳಲ್ಲಿ ಸಹ ಭಾಗವಹಿಸುತ್ತಿದ್ದರು. ಇವರಲ್ಲಿ ಪ್ರಮುಖರು ಕಲ್ಪನಾದತ್, ಪ್ರೀತಿಲತಾ ವಾಡೇದಾರ್, ಸರೋಜಿನಿಪಾಲ್.

ಪೋಲೀಸು, ಮಿಲಿಟರಿ ಪಡೆಗಳ ಸತತ ಕಾರ್ಯಾಚರಣೆ, ನಾಗರಿಕರಿಗೆ ಕಿರುಕಳ ಇತ್ಯಾದಿಗಳಿಂದ ಅಲ್ಲಲ್ಲಿ ಕೆಲವು ಕ್ರಾಂತಿಕಾರಿಗಳ ಸುಳಿವು ಗೊತ್ತಾಗುತ್ತಿತ್ತು. ಹಲವು ದಾಳಿಗಳಲ್ಲಿ ಕ್ರಾಂತಿಕಾರಿಗಳು ಮಡಿದರು, ಸೆರೆಯಾದರು.

ಫೆಬ್ರವರಿ 1933ರಲ್ಲಿ ಸೂರ್ಯಸೇನ್ ಕೆಲವರ ಘಾತಕತನದಿಂದ ಸೆರೆಯಾದರು. ಕಲ್ಪನಾದತ್ ಮತ್ತು ತಾರಕೇಶ್ವರ ದಸ್ತಿದಾರ್ ಮೇ ತಿಂಗಳಲ್ಲಿ ಸಿಕ್ಕಿಬಿದ್ದರು. ಅಂಬಿಕಾ ಚಕ್ರವರ್ತಿ ಜಲಾಲಾಬಾದ್ ಕದನದಲ್ಲಿ ತೀವ್ರ ಗಾಯಗೊಂಡಿದ್ದು ಅವರ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಗೆ ಬದಲಿಸಲಾಯಿತು. ಕಲ್ಪನಾದತ್‌ಗೆ ಸಹಾ ಮಹಿಳೆ ಹಾಗೂ ಅಲ್ಪಪ್ರಾಯ ಎಂಬ ಕಾರಣದಿಂದಾಗಿ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಇವರು ಮೂವರನ್ನು ಅಂಡಮಾನ್ ಸೆರೆಮನೆಗೆ ಸಾಗಿಸಲಾಯಿತು. ಅವರು ತಮ್ಮ ಜೀವನದ ಅತ್ಯುತ್ತಮ ವರ್ಷಗಳನ್ನು ಕುಖ್ಯಾತ ಜೈಲಿನ ಗವಿಗಳಲ್ಲಿ ಕಳೆದರು. ಈ ಸಮಯದಲ್ಲಿ ತಮ್ಮ ಕಾರ್ಯಾಚರಣೆಗಳ ಪುನಃವಿಮರ್ಶೆ ಮಾಡತೊಡಗಿದರು. ಕೆಲವು ವ್ಯಕ್ತಿಗಳ ಅಥವಾ ಕ್ರಾಂತಿಕಾರಿ ಗುಂಪುಗಳ ದಿಟ್ಟ ಕಾರ್ಯಾಚರಣೆಗಳೇ ಸ್ವಾತಂತ್ರ್ಯ ಗಳಿಸುವುದಕ್ಕೆ ಸಾಲದು, ಈ ಗುರಿ ಸಾಧಿಸಲು ಕಾರ್ಮಿಕವರ್ಗ, ರೈತಾಪಿ ಜನ, ಮಧ್ಯಮವರ್ಗ ಹಾಗೂ ಬುದ್ಧಿಜೀವಿಗಳ ಸಮರಶೀಲ ಸುವ್ಯವಸ್ಥಿತ ಸಂಘಟನೆಗಳನ್ನು ಕಟ್ಟುವುದು ಮುಖ್ಯವೆಂದು ಮನಗಂಡರು, ಅವರು ಜೈಲಿನಲ್ಲಿ ಕಮ್ಯುನಿಸ್ಟರೊಂದಿಗೆ ಬೆರೆತು ಮಾರ್ಕ್ಸ್‌ವಾದ ಲೆನಿನ್‌ವಾದವನ್ನು ಅಭ್ಯಸಿಸಿ ಕಮ್ಯುನಿಸ್ಟರಾದರು. ಸ್ವಾತಂತ್ರ್ಯಾನಂತರ ಬಿಡುಗಡೆಯಾದಾಗ ಕಮ್ಯುನಿಸ್ಟ್ ಚಳುವಳಿಯನ್ನು ಸೇರಿದರು.

ಸೂರ್ಯಸೇನ್ ಮತ್ತು ತಾರಕೇಶ್ವರ ದಾಸ್ತಿದಾರ್ ಇವರನ್ನು ಜನವರಿ 12, 1934ರಂದು ಗಲ್ಲಿಗೇರಿಸಲಾಯಿತು. ಇವರು ತಮ್ಮ ಕೊನೆಯ ಸಂದೇಶದಲ್ಲಿ ಸಂಗಾತಿಗಳಿಗೆ ಸ್ವಾತಂತ್ರ್ಯಕ್ಕಾಗಿ ಹೋರಾಟ ಮುಂದುವರೆಸುವಂತೆ ಕರೆ ನೀಡಿದರು.

ಚಿತ್ತಗಾಂಗ್‌ರಣಕಹಳೆಯ ಪ್ರಭಾವ ಈ ಸರಕಾರೀ ಪತ್ರವೊಂದರಲ್ಲಿ ಸ್ಪಷ್ಟವಾಗಿ ತಿಳಿದುಬರುತ್ತದೆ. "ಬಂಗಾಲದ ಭಯೋತ್ಪಾದಕ ಅಪರಾಧಗಳ ಚರಿತ್ರೆಯಲ್ಲಿ ಕಂಡುಕೇಳರಿಯದ ರೀತಿಯಲ್ಲಿ ನಡೆಸಲ್ಪಟ್ಟ ಈ ದಂಗೆಯನ್ನು ಪ್ರಾಂತ್ಯದ ತುಂಬಾ ಎಲ್ಲಾ ಕ್ರಾಂತಿಕಾರಿಗಳು ಹರ್ಷದಿಂದ ಸ್ವಾಗತಿಸಿದರು. ಪರಿಣಾಮ ವಿದ್ಯುತ್ತಿನಂತಿತ್ತು. ಬಂಗಾಲದ ಕ್ರಾಂತಿಕಾರಿಗಳ ಧೋರಣೆಯನ್ನೇ ಈ ದಂಗೆ ಪರಿವರ್ತಿಸಿತು. ತಮ್ಮ ನಾಯಕರಿಂದ ತಡೆಯಲ್ಪಟ್ಟಿದ್ದ, ಆದರೆ ಬ್ರಿಟಿಷರನ್ನು ಹೇಗಾದರೂ ಹೊಡೆದೋಡಿಸಬೇಕೆಂದು ಛಲತೊಟ್ಟಿದ್ದ ಎಲ್ಲಾ ಪಕ್ಷಗಳ ಯುವಸದಸ್ಯರಿಗೆ ಇದು ಆಹ್ವಾನವಾಯಿತು. ಎಲ್ಲಾ ಭಯೋತ್ಪಾದಕ ಗುಂಪುಗಳಿಗೆ ಯುವಕರು ದೊಡ್ಡ ಸಂಖ್ಯೆಯಲ್ಲಿ ಸೇರತೊಡಗಿದರು".

ಗೆರಿಲ್ಲಾ ತಂತ್ರದ ಬಳಕೆ ಸಹ ಭಾರತದ ಸ್ವಾತಂತ್ರ್ಯ ಚಳುವಳಿಗೆ ಚಿತ್ತಗಾಂಗ್ ದಂಗೆಯ ವಿಶಿಷ್ಟ ಕೊಡುಗೆ.

[ಚಿತ್ತಗಾಂಗ್ ದಂಗೆಯಲ್ಲಿ ಭಾಗವಹಿಸಿ ಆಮೇಲೆ ಕಮ್ಯುನಿಸ್ಟ್ ಚಳುವಳಿಗೆ ಸೇರಿದ ಹಲವರು ಈಗಲೂ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಕಲ್ಪನಾದತ್-ಇವರು ಇತ್ತೀಚಿಗೆ ನಿಧನಹೊಂದಿದ ಕಾಂ. ಪಿ. ಸಿ. ಜೋಶಿಯವರ ಪತ್ನಿಕೂಡಾ-ಮತ್ತುಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾದ ಗಣೇಶ್ ಘೋಷ್ ಇವರಲ್ಲಿ ಪ್ರಮುಖರು.]

ಘಡವಾಲೀ ಸೈನಿಕರ ಬಂಡಾಯ

ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್‌ರವರ ನೇತೃತ್ವದಲ್ಲಿ ವಾಯುವ್ಯ ಪ್ರಾಂತ್ಯದಲ್ಲಿ ಅಸಹಕಾರ ಚಳವಳಿ ಆರಂಭವಾಗಿತ್ತು. ಅವರ ಶಿಸ್ತಿನ ಸ್ವಯಂಸೇವಕ ಪಡೆಯಾದ ಖುದಾಯಿ ಖಿದ್ ಮತ್ ಗಾರರು ಬ್ರಿಟಿಷ್ ವಸ್ತುಗಳು ಹಾಗೂ ಅವುಗಳನ್ನು ಮಾರುವ ಅಂಗಡಿಗಳ ಎದುರು ಪ್ರದರ್ಶನ ನಡೆಸುವುದು ಈ ಸತ್ಯಾಗ್ರಹದ ವಿಧಾನವಾಗಿತ್ತು. ಚಿತ್ತಗಾಂಗ್‌ನ ಘಟನೆಯ 5 ದಿನಗಳ ನಂತರ ಅಂದರೆ 1930ರ ಏ. 18 ರಂದು ಪೇಶಾವರದಲ್ಲಿ ಒಂದು ಭಾರೀ ಮತಪ್ರದರ್ಶನವನ್ನು ಯೋಜಿಸಲಾಗಿತ್ತು. ಅದನ್ನು ಮುರಿಯುವುದಕ್ಕಾಗಿ ಬ್ರಿಟಿಷ್ ಸರಕಾರ ಗಫಾರ್ ಖಾನ್‌ರನ್ನು ಬಂಧಿಸಿತು.

ಈ ಮತಪ್ರದರ್ಶನವನ್ನು ತಡೆಯಲು ಸರಕಾರ ಬೇರೆ ತಯಾರಿಯನ್ನೂ ನಡೆಸಿತ್ತು. ಅದನ್ನು ಮುರಿಯಲು ಅತ್ಯಂತ ಹೆಚ್ಚಿನ ರಾಜನಿಷ್ಠೆಯುಳ್ಳ ಸೈನಿಕಪಡೆ ಅದಕ್ಕೆ ಬೇಕಾಗಿತ್ತು. 'ರಾಯಲ್ ಘಡ್‌ವಾಲ್ ರೈಫಲ್ಸ್' ಪಡೆಯನ್ನು ಇದಕ್ಕಾಗಿ ಆರಿಸಿ ಅವರಿಗೆ ಮುಸ್ಲಿಂ ಲೂಟಿಗಾರರ ವಿರುದ್ಧ ಪೇಶಾವರದಲ್ಲಿ ಕಾರ್ಯಾಚರಣೆ ಇದೆಯೆಂದು ಸುಳ್ಳು ಹೇಳಲಾಯಿತು. ಘಡವಾಲ್ ರೈಫಲ್ಸ್ ಸಂಪೂರ್ಣ ಹಿಂದೂಗಳ ಪಡೆ. ಆದರೆ ಆ ಪಡೆಯ ಕೆಲವರಿಗೆ ಬ್ರಿಟಿಷರು ಸುಳ್ಳು ಹೇಳಿದ್ದಾರೆಂದು ಮನವರಿಕೆಯಾಯಿತು. ಅವರಲ್ಲಿ ಆರುಜನ ಗುಪ್ತವಾಗಿ ಠಾಕೂರ್ ಚಂದ್ರಸಿಂಗ್ (ಅಥವಾ ಚಂದ್ರ ಸಿಂಗ್ ಘಡ್‌ವಾಲೀ)ರ ಕೋಣೆಯಲ್ಲಿ ಸಭೆ ಸೇರಿದರು. ಇತರ ಐವರೆಂದರೆ ಠಾಕೂರ್ ನಾರಾಯಣಸಿಂಗ್ ಗೋಸಾಯಿ, ಠಾಕೂರ್ ಕೇದಾರ್ ಸಿಂಗ್ ಚೌಧಾನ್, ಠಾಕೂರ್ ದೌಲತ್ ಸಿಂಗ್, ಠಾಕೂರ್ ಶೇರ್‌ಸಿಂಗ್ ಬತುಲಾ ಹಾಗೂ ಠಾಕೂರ್ ರಾಮಕೃಷ್ಣ ಸಿಂಗ್. ಪ್ರತಿಯೊಂದು ಪ್ಲೆಟೂನಿನಲ್ಲಿ ಬ್ರಿಟಿಷರ ಅಪಪ್ರಚಾರವನ್ನು ಬಯಲಿಗೆಳೆದು ತಮ್ಮ ಸೋದರರ ಮೇಲೆ ಅವರು ಗುಂಡುಹಾರಿಸದಂತೆ ಮಾಡಬೇಕೆಂದು ಅವರು ನಿರ್ಧರಿಸಿದರು.

ಮರುದಿನ ಅಂದರೆ ಫೆ. 24ರಂದು ಗಡಿನಾಡ ಗಾಂಧಿಯ ಬಂಧನವನ್ನು ವಿರೋಧಿಸಿ ಅವರನ್ನು ಬಂಧನದಲ್ಲಿಟ್ಟಜಾಗದ ಸುತ್ತ ಜನ ಘೇರಾಯಿಸಿದರು. ತ್ರಿವರ್ಣ ಧ್ವಜಹಿಡಿದುಕೊಂಡ ಪಠಾಣ್ ಜನತೆ ಉರ್ದು ಹಾಗೂ ಪುಶ್ತೋ ಭಾಷೆಯಲ್ಲಿ ಘೋಷಣೆ ಕೂಗುತ್ತಿದ್ದರು. ಹೆಚ್ಚುತ್ತಿದ್ದ ಜನಪ್ರವಾಹದಿಂದ ಭೀತನಾದ ಬ್ರಿಟಿಷ್ ಕ್ಯಾಪ್ಟನ್ ಜನರಿಗೆ ಚದುರುವಂತೆ ಆಜ್ಞೆ ಮಾಡಿದ. ಯಾರೂ ಕೇಳಲಿಲ್ಲ. ಮತ್ತೊಮ್ಮೆ ಆತ ಒದರಿದಾಗಲೂ ಯಾರೂ ಅದನ್ನು ಗಮನಕ್ಕೇ ತೆಗೆದುಕೊಳ್ಳಲಿಲ್ಲ. ಘಡ್‌ವಾಲೀ ಸೈನಿಕರು ಬಂದೂಕುಧಾರಿಗಳಾಗಿ ಜನತೆಯ ಸುತ್ತ ನಿಂತಿದ್ದರು. ಕ್ಯಾಪ್ಟನ್ ಮತ್ತೊಮ್ಮೆ ಒದರಿದ–"ಘರ್‌ವಾಲೀಸ್, ಫೈರ್ ತ್ರೀ ರೌಂಡ್ಸ್". ಅವರು ಗುಂಡುಹಾರಿಸುವಷ್ಟರಲ್ಲಿ ಮತ್ತೊಮ್ಮೆ ಜೋರಾದ ಆಜ್ಞೆ ಕೇಳಿಸಿತು - "ಘಡ್‌ವಾಲಿಗಳೇ, ಗುಂಡುಹಾರಿಸಬೇಡಿ". ಹೀಗೆ ಹೇಳಿದವರು ಯಾರು ಎಂದು ಬೇರೆ ಹೇಳಬೇಕಾಗಿಲ್ಲ. ಪ್ಲೆಟೂನ್ ಒಂದು ಮತ್ತು ಎರಡರ ಸೈನಿಕರು ತಮ್ಮ ಬಂದೂಕುಗಳನ್ನು ನೆಲದಮೇಲೆ ಇಟ್ಟುಬಿಟ್ಟರು. ಒಬ್ಬ ಸೈನಿಕ, ಉದಯಸಿಂಗ್, ತನ್ನ ಬಂದೂಕನ್ನು ಒಬ್ಬ ಪಠಾಣನಿಗೆ ಕೊಟ್ಟು "ತಗೋ ತಮ್ಮ, ನನ್ನ ಮೇಲೆ ಗುಂಡುಹಾರಿಸು" ಅಂದ. ಪ್ಲೆಟೂನ್ ನಂಬರ್ ಮೂರರ ಸುಭೇದಾರ್ ಹಾಗೂ ಮತ್ತಿಬ್ಬರು ಮುಂದೆ ಬಂದು ತಮ್ಮ ರಿವಾಲ್ವರುಗಳಿಂದ ಮೂರು ಸಲ ಗುಂಡು ಹಾರಿಸಿದರು. ಆದರೆ ಆ ಪ್ಲೆಟೂನಿನ ಇತರರು ನಿಂತಲ್ಲಿಂದ ಕದಲಲಿಲ್ಲ. "ನಿರಾಯುಧರ ಮೇಲೆ ಹೇಗೆ ಗುಂಡು ಹಾರಿಸುವುದು?" ಎಂದು ಕೇಳಿದರು ಚಂದ್ರಸಿಂಗ್. ಘಡ್‌ವಾಲಿಗಳು ಇನ್ನು ಗುಂಡುಹಾರಿಸುವುದಿಲ್ಲವೆಂದು ತಿಳಿದಾಗ ಎರಡು ಸಶಸ್ತ್ರ ಬ್ರಿಟಿಷ್ ವಾಹನಗಳನ್ನು ತಂದು ಗುಂಡುಹಾರಿಸುತ್ತಾ ಜನರ ಮೇಲೆ ಹರಿಯಬಿಡಲಾಯ್ತು. ಕೆಲವರು ಅದರಡಿಯಲ್ಲಿ ಸಿಕ್ಕು ಜಜ್ಜಿಹೋದರು. ಒಂದು ಸಶಸ್ತ್ರಸಜ್ಜಿತ ವಾಹನವನ್ನು ಸುಟ್ಟುಹಾಕಲಾಯಿತು. ನಂತರ ಎಲ್ಲಾ ಮಿಲಿಟರಿ ಹಾಗೂ ಪೋಲೀಸನ್ನು ವಾಪಾಸು ಪಡೆಯಲಾಯಿತು. ಏಪ್ರಿಲ್ 25ರಿಂದ ಮೇ 4ರವರೆಗೆ ಪೇಶಾವರ ನಗರ ಖುದಾಯಿ ಖಿದ್‌ಮತ್‌ಗಾರರ ಕೈಯಲ್ಲಿತ್ತು. ನಂತರ ಬ್ರಿಟಿಷರು ತಮ್ಮ ವಿಮಾನ ಹಾಗೂ ಭೂಸೈನ್ಯ ಪ್ರಯೋಗಿಸಿ ಅದನ್ನು ಮತ್ತೆ 'ವಶಪಡಿಸಿ'ಕೊಂಡರು. ಇದರಲ್ಲಿ ಸುಮಾರು 200-300 ಜನ ಸತ್ತಿರಬಹುದೆಂದು ಊಹಿಸಲಾಗಿದೆ.

ಈ ನಡುವೆ 67 ಘಡ್‌ವಾಲೀ ಸೈನಿಕರನ್ನು ಬಂಧಿಸಿ ಸೈನಿಕ ನ್ಯಾಯಾಲಯದೆದುರು ವಿಚಾರಣೆಯ ನಾಟಕವಾಯಿತು. ಎಲ್ಲರಿಗೂ ದೀರ್ಘಾವಧಿ ಶಿಕ್ಷೆ ವಿಧಿಸಲಾಯಿತು. ಚಂದ್ರಸಿಂಗ್ ಘಡ್‌ವಾಲಿಯವರಿಗೆ ಮರಣದಂಡನೆಯಾಯಿತು. ಆದರೆ ದೇಶಾದ್ಯಂತದಿಂದ ಬಂದ ವಿರೋಧದಿಂದಾಗಿ ಅದನ್ನು ಆಜೀವನ ಗಡಿಪಾರು ಶಿಕ್ಷೆಯಾಗಿ ಬದಲಿಸಲಾಯಿತು. ಅವರು ಹಲವು ವರ್ಷಗಳವರೆಗೆ ಬೇರೆಬೇರೆ ಜೈಲುಗಳಲ್ಲಿ ಸಾಮಾನ್ಯ ಕೈದಿಯಾಗಿ ನರಳಬೇಕಾಯಿತು. ಜೈಲಿನಲ್ಲಿ ಕಮ್ಯುನಿಸ್ಟರ ಸಂಪರ್ಕಕ್ಕೆ ಬಂದ ಚಂದ್ರಸಿಂಗರು ಜೈಲಿನಿಂದ ಬಿಡುಗಡೆ ಹೊಂದಿದ ಮೇಲೆ ಕಮ್ಯುನಿಸ್ಟ್ ಪಕ್ಷ ಸೇರಿದರು. 1948-49ರಲ್ಲಿ ಅವರನ್ನು ಮತ್ತೊಮ್ಮೆ ಸ್ವತಂತ್ರ ಭಾರತದ ಸರಕಾರ ಬಂಧಿಸಿತು. 1979ರ ಅಕ್ಟೋಬರ್ 1ರಂದು ಅವರು ನಿಧನರಾದರು. ಅವರು ಸಿ. ಪಿ. ಐ.(ಎಂ)ನ ಸದಸ್ಯರಾಗಿದ್ದರು.

ದೇಶಾದ್ಯಂತ ಮೆಚ್ಚುಗೆ ಗಳಿಸಿದ ಸೈನಿಕರ ಈ ಕೆಚ್ಚೆದೆಯ ಕೆಲಸಕ್ಕೆ ಗಾಂಧೀಜಿಯ ಪ್ರತಿಕ್ರಿಯೆ ಬೇರೆಯೇ ಆಗಿತ್ತು ಎಂಬುದು ಗಮನಾರ್ಹ. 1931ರಲ್ಲಿ ಗಾಂಧಿ–ಇರ್ವಿನ್ ಒಪ್ಪಂದವಾದಾಗ ಚಂದ್ರಸಿಂಗ್ ಘಡ್‌ವಾಲಿಯವರ ಬಿಡುಗಡೆ ಬಗ್ಗೆ ಕೇಳಲು ಗಾಂಧೀಜಿ ನಿರಾಕರಿಸಿದರು. ಫ್ರೆಂಚ್ ಪತ್ರಿಕೆ 'ಲೆ ಮಾಂಡ್'ನ ಪತ್ರಕರ್ತರೊಬ್ಬರು ಈ ಬಗ್ಗೆ ಕೇಳಿದಾಗ ಅವರ ಉತ್ತರ ಹೀಗಿತ್ತು. "ಗುಂಡು ಹಾರಿಸಬೇಕೆನ್ನುವ ಆಜ್ಞೆಯನ್ನು ಉಲ್ಲಂಘಿಸುವ ಸೈನಿಕ ಅವಜ್ಞೆಯ ಅಪರಾಧ ಮಾಡಿದಂತಾಗುತ್ತದೆ. ನಾನು ಸರಕಾರೀ ನೌಕರರನ್ನು ಹಾಗೂ ಸೈನಿಕರನ್ನು ಆಜ್ಞೆ ಉಲ್ಲಂಘಿಸಲು ಹೇಳಲಾರೆ. ಯಾಕೆಂದರೆ ನಾನು ಅಧಿಕಾರದಲ್ಲಿರುವಾಗ ಅದೇ ನೌಕರರನ್ನು ಹಾಗೂ ಸೈನಿಕರನ್ನು ಉಪಯೋಗಿಸುವ ಸಂಭವವಿದೆ. ಆಜ್ಞೆ ಉಲ್ಲಂಘಿಸಲು ಅವರಿಗೆ ಕಲಿಸಿದರೆ ನಾನು ಅಧಿಕಾರದಲ್ಲಿರುವಾಗಲೂ ಅವರು ಅದನ್ನೇ ಮಾಡಬಹುದೆಂಬ ಭಯ ನನಗಿದೆ" ಸ್ವಾತಂತ್ರ್ಯವೆಂದರೆ ಬ್ರಿಟಿಷರ ಬದಲು ಅವರ ಸ್ಥಾನದಲ್ಲಿ ಕಾಂಗ್ರೆಸ್ ಪಕ್ಷ ಕೂರುವುದಷ್ಟೇ ಎಂಬರ್ಥ ಮಾಡುವುದಿಲ್ಲವಾದರೆ ಗಾಂಧೀಜಿಯವರ ಈ ಭಯಕ್ಕೆ ಏನರ್ಥವಿದೆ?

ಸೊಲ್ಲಾಪುರದಲ್ಲಿ ಜನತೆಯ ದಂಗೆ :
"ತ್ರಿವರ್ಣ ರಾಜ್ಯ"

ಸೊಲ್ಲಾಪುರದ ಐದು ಹತ್ತಿಗಿರಣಿಗಳಲ್ಲಿ ದುಡಿಯುತ್ತಿದ್ದ ಮೂವತ್ತು ಸಾವಿರ ಕಾರ್ಮಿಕರಲ್ಲಿ ಅತೃಪ್ತಿ ಹರಡಿತ್ತು. ಅವರಲ್ಲಿ ಹಲವರು ಕಡು ಬಡತನದಿಂದ ನರಳುತ್ತಿದ್ದರು. ಟ್ರೇಡ್ ಯೂನಿಯನ್ ಚಳುವಳಿ ಇನ್ನೂ ಆರಂಭಾವಸ್ಥೆಯಲ್ಲೇ ಇತ್ತು. ಆದರೂ ಕಾರ್ಮಿಕರಲ್ಲಿ ರಾಜಕೀಯ ಪ್ರಜ್ಞೆ ಬಹಳವಿತ್ತು.

ಸೊಲ್ಲಾಪುರದ ಚಾರಿತ್ರಿಕ ಹೋರಾಟ ಆರಂಭವಾದದ್ದು 1930ರ ಮೇ 6ರಂದು. ಎರಡು ದಿನಗಳ ಹಿಂದೆ ಗಾಂಧೀಜಿಯ ಬಂಧನವನ್ನು ವಿರೋಧಿಸಿ ಅಂದು ಮುಷ್ಕರ ಹಾಗೂ ಹರತಾಳ ಆಚರಿಸಲಾಯಿತು. ಮರುದಿನ ಕಾಂಗ್ರೆಸ್ ಪಕ್ಷದ ಕರೆಯ ಮೇಲೂ ಹರತಾಳ ನಡೆಯಿತು. ಇದರಲ್ಲೂ ಕಾಂಗ್ರೆಸ್‌ನವರು ಬೇಡವೆಂದರೂ ಕಾರ್ಮಿಕರು ಭಾಗವಹಿಸಿದರು. ಗಿರಣಿಯ ಗೇಟಿನೆದುರು ಕಾರ್ಮಿಕರ ಮೇಲೆ ಪೋಲೀಸರ ಅಮಾನುಷ ಹಲ್ಲೆಯ ವಿರುದ್ಧವಾಗಿ ಭಾರೀ ಮೆರವಣಿಗೆ ಹೊರಟಿತು.

ಭಾಗದಲ್ಲಿದ್ದ ಹೆಂಡದಂಗಡಿಗಳನ್ನು ಪುಡಿಪುಡಿ ಮಾಡಿ ಹೆಂಡವನ್ನು ರಸ್ತೆಯ ಮೇಲೆ ಸುರಿಯಲಾಯಿತು. ಮೆರವಣಿಗೆ ಬಹಳಷ್ಟು ಜನ ಯುವಕರೂ ಸೇರಿಕೊಂಡರು. ಯುವಕರು, ಕಾರ್ಮಿಕರು ತಾಳೇಮರ (ಹೆಂಡ ತಯಾರಿಸಲು ಉಪಯೋಗಿಸುವ ಮರ)ಗಳನ್ನು ಕಡಿದು ಹಾಕಲಾರಂಭಿಸಿದರು.

ಮಾರುದಿನವೂ ಹರತಾಳ ಮುಂದುವರಿಯಿತು. ಪೋಲೀಸರು ಹತ್ತಿರ ಬರದಂತೆ ತಡೆಗಳನ್ನು ಹಾಕಿಟ್ಟು ತಾಳೇಮರ ಕಡಿಯುವ ಕಾರ್ಯಕ್ರಮ ಮುಂದುವರಿಯಿತು. ಹತ್ತು ಸಾವಿರದಷ್ಟಿದ್ದ ಜನರು ಪೋಲೀಸರನ್ನು ಸುತ್ತುವರಿಯಬಹುದೆಂಬ ಭಯದಿಂದ ಜಿಲ್ಲಾ ಮ್ಯಾಜಿಸ್ಟ್ರೇಟ್ ಗುಂಡುಹಾರಿಸಲು ಆಜ್ಞೆ ಇತ್ತ. ಹಲವರು ಸತ್ತರು. ಆದರೆ ಜನಪ್ರವಾಹ ನಿಲ್ಲಲಿಲ್ಲ. ಹೆದರಿ ಮ್ಯಾಜಿಸ್ಟ್ರೇಟ್ ಕಂಬಿಕಿತ್ತ. ಜನ ಹತ್ತಿರದ ಪೋಲೀಸ್ ಸ್ಟೇಷನ್‌ಗೆ ನುಗ್ಗಿದರು. ಪೋಲೀಸರೂ ಪಲಾಯನ ಮಾಡಿದರು. ನಂತರ ಜನ ಜಿಲ್ಲಾ ನ್ಯಾಯಾಲಯದ ಕಟ್ಟಡ ನುಗ್ಗಿ ಸಾಮ್ರಾಜ್ಯಶಾಹಿಯ ಈ ಸಂಕೇತವನ್ನೂ ಪುಡಿಪುಡಿಮಾಡಿದರು. ಜಿಲ್ಲಾ ಕಲೆಕ್ಟರ್ ಆಫೀಸಿನ ಸಮೀಪ ಮತ್ತೆ ಗುಂಡು ಹಾರಾಟ ನಡೆಯಿತು. ಮತ್ತೆ ಹಲವರು ಜೀವತೆತ್ತರು. ಆದರೂ ಜನ ಹೆದರಲಿಲ್ಲ. ಭಯಭೀತರಾದ ಮ್ಯಾಜಿಸ್ಟ್ರೇಟ್, ಡಿ. ಎಸ್. ಪಿ. ಹಾಗೂ ಯುರೋಪಿಯನ್ ಪರಿವಾರಗಳು ಪಟ್ಟಣ ಬಿಟ್ಟೋಡಿದರು.

ಮೇ 10ರಿಂದ 12ರ ವರೆಗೆ ಸೊಲ್ಲಾಪುರದಲ್ಲಿ ಸರಕಾರವೆಂಬುದೇ ಇರಲಿಲ್ಲ. ಯುರೋಪಿಯನ್ ಬಂಗಲೆಗಳು ಖಾಲಿ; ಪೋಲೀಸರ ಸುಳಿವಿಲ್ಲ; ಜಿಲ್ಲಾ ಕೋರ್ಟು ಸುಟ್ಟು ಕರಕಾಗಿತ್ತು. ಆಗಾಗ ಮಿಲಿಟರಿ ವಾಹನಗಳು ಬಂದು ಗುಂಡುಹಾರಿಸಿ ಹೋಗುತ್ತಿದ್ದವಷ್ಟೆ. ಈ ದಿನಗಳಲ್ಲಿ ಒಂದು ರೀತಿಯ ಜನರ 'ಸಮಾಂತರ ಆಡಳಿತ' ಸ್ಥಾಪಿಸುವ ಪ್ರಯತ್ನವೂ ನಡೆಯಿತು. ಕೆಲವು ಪತ್ರಿಕೆಗಳು "ನಗರದಲ್ಲಿ ತ್ರಿವರ್ಣ ರಾಜ್ಯ" ಎಂದೂ ಹೇಳಿದವು.

ಮೇ 12ರ ರಾತ್ರಿ ಮುಂಬೈಯಿಂದ ಎರಡು ಬಟಾಲಿಯನ್ ಬ್ರಿಟಿಷ್ ಸೈನಿಕ ಅಧಿಕಾರಿಗಳ ಪಡೆ ಸೊಲ್ಲಾಪುರದ ಮೇಲೆರಗಿತು. ಲಷ್ಕರಿ ಶಾಸನ ಜಾರಿಯಾಯಿತು. ಕಾರ್ಮಿಕರು ಹಾಗೂ ಇತರರನ್ನು ಸಿಕ್ಕಸಿಕ್ಕಲ್ಲಿ ಬಂಧಿಸಿ ಭಾರೀ ಶಿಕ್ಷೆ ವಿಧಿಸಲಾಯಿತು. ಭಯದ ವಾತಾವರಣ ಕಲ್ಪಿಸಲಾಯಿತು. ನಾಲ್ವರ ಮೇಲೆ ಕೊಲೆಯ ಸುಳ್ಳು ಆಪಾದನೆ ಹೊರಿಸಿ ಮರಣ ದಂಡನೆಗೀಡುಮಾಡಲಾಯಿತು.

ಲಷ್ಕರೀ ಶಾಸನ ಹಾಗೂ ಮರಣ ದಂಡನೆ ವಾಪಸ್ಸು ಪಡೆಯಬೇಕೆಂದು ಎಲ್ಲೆಡೆಗಳಲ್ಲೂ ಪ್ರತಿಭಟನಾ ಸಭೆಗಳು ನಡೆದವು. ಮುಂಬೈ ಕೌನ್ಸಿಲ್, ಕೇಂದ್ರ ಕೌನ್ಸಿಲ್ ಹಾಗೂ ಬ್ರಿಟಿಷ್ ಪಾರ್ಲಿಮೆಂಟಿನಲ್ಲೂ ಈ ಪ್ರಸ್ತಾಪ ಬಂತು. ಬ್ರಿಟಿಷ್ ಸರಕಾರ ಮರಣ ದಂಡನೆಯನ್ನು ಹಿಂತೆಗೆದುಕೊಳ್ಳಲು ಒಪ್ಪಲಿಲ್ಲ. ಮಾತ್ರವಲ್ಲ ಆ ನಾಲ್ವರನ್ನು ಸಾರ್ವಜನಿಕವಾಗಿ ಗಲ್ಲಿಗೇರಿಸುವ ಯೋಜನೆಯಿತ್ತು. ಆದರೆ ಜನರ ಪ್ರತಿಭಟನೆಗೆ ಹೆದರಿ ಯೆರವಡಾ ಜೈಲಿನಲ್ಲಿ 1931ರ ಜನವರಿ 12 ರಂದು ಗಲ್ಲಿಗೇರಿಸಲಾಯಿತು. ಲಷ್ಕರೀ ಶಾಸನವನ್ನು 1930ರ ಜೂನ್ 30 ರಂದು ಹಿಂತೆಗೆದುಕೊಳ್ಳಲಾಯಿತು.

ಜನಸಾಮಾನ್ಯರ ಹಾಗೂ ಕಾರ್ಮಿಕರ ಈ ಧೀರ ಹೋರಾಟದ ಬಗ್ಗೆಯೂ ಕಾಂಗ್ರೆಸ್‌ನ ಹಾಗೂ ಗಾಂಧೀಜಿಯ ನಿಲುವು ಮೇಲಿನ ಎರಡು ಘಟನೆಗಳಿಗಿಂತ ಭಿನ್ನವಾಗಿರಲಿಲ್ಲ. ಕಾಂಗ್ರೆಸ್‌ನ ಕಾರ್ಯಕಾರೀ ಸಮಿತಿ ಇದನ್ನು "ಜನಜಂಗುಳಿಯ ಹಿಂಸಾಚಾರ" ಎಂದು ಖಂಡಿಸಿತು. ಗಾಂಧೀಜಿಯ ಪ್ರತಿಕ್ರಿಯೆ 'ಡೈಲಿ ಹೆರಾಲ್ಡ್' ಪತ್ರಿಕೆಯಲ್ಲಿ ಹೀಗೆ ಪ್ರಕಟವಾಯಿತು.

"...ಅವರು (ಗಾಂಧೀಜಿ) ಇಬ್ಬರು ಪೋಲೀಸರನ್ನು ಕೊಂದರೆನ್ನಲಾದ ಹಿಂಸಾಚಾರದ ಬಗ್ಗೆ ತೀವ್ರ ಭೀತಿ ವ್ಯಕ್ತಪಡಿಸಿದರು. ಆದರೆ ನಾಗರಿಕ ಅಸಹಕಾರ ಸತ್ಯಾಗ್ರಹಿಗಳು ಈ ಹಿಂಸಾಚಾರ ನಡೆಸಿಲ್ಲ ಎಂಬ ಬಗ್ಗೆ ಅವರಿಗೆ ಖಾತ್ರಿಯಿತ್ತು. ಅವರಿಗೆ ಎಲ್ಲವನ್ನೂ, ಹಿಂಸೆಯನ್ನೂ ಕೂಡಾ ಏನೊಂದೂ ಪ್ರತಿಭಟನೆಯಿಲ್ಲದೆ ಸಹಿಸಬೇಕೆಂದು ಆಜ್ಞೆಮಾಡಲಾಗಿದೆ."

ಜನಸಾಮಾನ್ಯರ ಸಾಮ್ರಾಜ್ಯಶಾಹಿ ವಿರೋಧಿ ಭಾವನೆ, ದೇಶಪ್ರೇಮ ಹಾಗೂ ಧೀರ ಹೋರಾಟದ ಬಗ್ಗೆ ಕಾಂಗ್ರೆಸ್ ಹಾಗೂ ಅದರ ನಾಯಕರ ಭಾವನೆಯೇನಿದ್ದರೂ ಕಾರ್ಮಿಕರು ಹಾಗೂ ಜನಸಾಮಾನ್ಯರು ತಾವೇ ಮುಂದಾಗಿ ಹೋರಾಟಕ್ಕೆ ನಿಂತಾಗ ಹೇಗೆ ವೀರಾವೇಶದಿಂದ ಹೋರಾಡುತ್ತಾರೆ ಎಂಬುದನ್ನು ಸೊಲ್ಲಾಪುರದಲ್ಲಿ ತೋರಿಸಿಕೊಟ್ಟರು.

[ಸಂಗ್ರಹ]

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ರೈತಸಂಘದ ಪ್ರತಿಭಟನೆ

ರಾಯಚೂರು ಜಿಲ್ಲೆಯಲ್ಲಿ ಮಳೆಯಿಲ್ಲದೇ ಜನತೆ ಕಂಗೆಟ್ಟಿದೆ. ಕೆಲವು ಸ್ಥಳಗಳಲ್ಲಿ ಮಳೆಯಾಗಿದ್ದರೂ ತಡವಾಗಿದ್ದರಿಂದ ಕೃಷಿ ಕಾರ್ಯಗಳಿಗೆ ತೊಂದರೆಯಾಗಿದೆ.

30-7-81ರಂದು ತಾಲ್ಲೂಕು ರೈತ ಸಂಘದ ವತಿಯಿಂದ ರೈತ-ಕೂಲಿಕಾರರ ಮೆರವಣಿಗೆ ಹೊರಡಿಸಿ ಕೆಳಕಂಡ ಬೇಡಿಕೆಗಳಿಗಾಗಿ ಒತ್ತಾಯಿಸಲಾಯಿತು. 1. ಕಾಮಗಿರಿಯನ್ನು ಪ್ರಾರಂಭಿಸಿ ಕೃಷಿಕಾರ್ಮಿಕರಿಗೆ ಕೂಲಿಯನ್ನು ಒದಗಿಸಬೇಕು. 2. ಕೃಷಿಕಾರ್ಮಿಕರಿಗೆ ಸರಕಾರಿ ಭೂಮಿಯನ್ನು ಒದಗಿಸಬೇಕು. 3. ಹಳ್ಳಿಯ ಬಡವರಿಗೆ ಬ್ಯಾಂಕಿನಿಂದ ಸಾಲದ ವ್ಯವಸ್ಥೆ ಮಾಡಬೇಕು...ಇತ್ಯಾದಿ. ಈ ಬೇಡಿಕೆಗಳನ್ನೊಳಗೊಂಡ ಮನವಿಪತ್ರವನ್ನು ತಹಸೀಲ್ದಾರರಿಗೆ ಸಲ್ಲಿಸಲಾಯಿತು.

ನಂತರ ರೈತಸಂಘದ ಕಚೇರಿಯಲ್ಲಿ ನಡೆದ ರೈತಕಾರ್ಮಿಕರ ಸಭೆಯನ್ನುದ್ದೇಶಿಸಿ ಕಾಂ. ಚಂದ್ರಶೇಖರ ಬಾಳೆಯವರು ಮಾತನಾಡುತ್ತಾ ರಾಜ್ಯದ ವಿವಿಧೆಡೆ ನಡೆದ ರೈತಹೋರಾಟಗಳ ಬಗ್ಗೆ ವಿವರಿಸಿದರು. ಸಂಘಟನೆಯನ್ನು ಬಲಪಡಿಸಿ ಬೇಡಿಕೆಗಳಿಗಾಗಿ ಹೋರಾಡಲು ಕರೆ ನೀಡಿದರು.

ಎಸ್. ಎಫ್. ಐ. ತಾಲೂಕು ಸಮಿತಿ ಸಭೆ

1-8-81ರಂದು ಎಸ್.ಎಫ್.ಐ. ಪುತ್ತೂರು ತಾಲೂಕು ಸಮಿತಿಯ ಸಭೆಯು ಕಾಂ. ಪಿ. ಸಿ. ಜೋಯರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಕಾಂ. ಬಿ. ರಾಮಕೃಷ್ಣ ಉಪಸ್ಥಿತರಿದ್ದರು. ಸಹ ಕಾರ್ಯದರ್ಶಿ ಎಸ್. ಕೇಶವರು ಸ್ವಾಗತಿಸಿದರು. ○

ಸಿ.ಐ.ಟಿ.ಯು. ರಾಜ್ಯಸಮಿತಿಯ ಪ್ರಧಾನಕಾರ್ಯದರ್ಶಿ ಕಾಂ. ನಂಜುಂಡಪ್ಪನವರು ಮಾತನಾಡುತ್ತಾ ದೇಶದ ರಾಜಕೀಯ ಪರಿಸ್ಥಿತಿ ಕುರಿತು ತಿಳಿಸಿದರು. ○

ವಿದ್ಯಾರ್ಥಿ ನಾಯಕರ ಮೇಲಿನ ಪೋಲೀಸ್ ದಾಳಿಯ ಖಂಡನೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯರಾದ ಕಾಂ. ಎನ್. ಎಲ್. ಉಪಾಧ್ಯಾಯರವರು ಪತ್ರಿಕಾ ಹೇಳಿಕೆಯೊಂದರಲ್ಲಿ ಹೊಸಪೇಟೆ ಪೋಲೀಸರು ಕಾಂ. ಆರಾಧ್ಯ ಮತ್ತಿತರರ ಮೇಲೆ ನಡೆಸಿದ ಹಲ್ಲೆಯನ್ನು ಉಗ್ರವಾಗಿ ಖಂಡಿಸಿದ್ದಾರೆ. ಸಂಬಂಧಿಸಿದ ಪೋಲೀಸ್ ಅಧಿಕಾರಿಯನ್ನು ತಕ್ಷಣ ವಜಾಮಾಡುವಂತೆ ಅವರು ಸರಕಾರವನ್ನು ಒತ್ತಾಯಿಸಿದ್ದಾರೆ.

ಎಸ್. ಎಫ್. ಐ. ರಾಜ್ಯಸಮಿತಿಯ ಉಪಾಧ್ಯಕ್ಷರಾದ ಕಾಂ. ರುದ್ರಪ್ಪ ಕಾಯಿಯವರು ಮುಖ್ಯಮಂತ್ರಿ ಹಾಗೂ ಶಿಕ್ಷಣಮಂತ್ರಿಗಳಿಗೆ ತಂತ್ರಿಯೊಂದನ್ನು ಕಳಿಸಿ ಹೊಸಪೇಟೆಯಲ್ಲಿ ವಿದ್ಯಾರ್ಥಿ ನಾಯಕರ ಮೇಲಿನ ದಾಳಿಯನ್ನು ನಿಲ್ಲಿಸುವಂತೆ, ತಕ್ಷಣ ಡಿ.ವೈ.ಎಸ್. ಪಿ. ಕೃಷ್ಣಮೂರ್ತಿಯನ್ನು ವಜಾಮಾಡಬೇಕೆಂದೂ, ಈ ಪ್ರಕರಣ ಕುರಿತು ತನಿಖೆ ನಡೆಸಬೇಕೆಂದೂ ಅವರು ಸರಕಾರವನ್ನು ಒತ್ತಾಯಿಸಿದ್ದಾರೆ.

ರಾಯಚೂರಿನ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯವರು ಪೋಲೀಸರು ನಡೆಸಿದ ಈ ದೌರ್ಜನ್ಯವನ್ನು ಉಗ್ರವಾಗಿ ಖಂಡಿಸಿದ್ದಾರೆ. ಚಿಂತಾಮಣಿ ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ.ನ ಸಮಿತಿಯವರು ಹೇಳಿಕೆಯೊಂದನ್ನು ಹೊರಡಿಸಿ ಈ ದಬ್ಬಾಳಿಕೆಯನ್ನು ಖಂಡಿಸಿದ್ದಲ್ಲದೆ ಪೋಲೀಸ್ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಲು ಮತ್ತು ಗಾಯಗೊಂಡ ಕಾಂ. ಆರಾಧ್ಯ ಮತ್ತು ಮೆಂಕೋಬರಿಗೆ ಪರಿಹಾರ ನೀಡಲು ಒತ್ತಾಯಿಸಿವೆ.

○

ಮತಾಂತರ : ದಲಿತರಿಗೆ ಮೋಸ

10-8-81ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೆಟ್ ಸಭೆಸೇರಿ ದಲಿತರನ್ನು ಮುಸ್ಲಿಂ ಧರ್ಮಕ್ಕೆ ಮತಾಂತರಗೊಳಿಸುವುದಕ್ಕಾಗಿ 12 ಲಕ್ಷ ರೂ. ಸಹಾಯವನ್ನು ಶಾಹಿ ಇಮಾಂರಿಂದ ದಲಿತ ರಕ್ಷಣಾ ಸಮಿತಿಯ ಹೆಸರಿನ ಸಂಸ್ಥೆಯೊಂದು ಕೇಳಿರುವುದರ ವಿರುದ್ಧ ರಾಜ್ಯದ ದಲಿತರಿಗೆ ಎಚ್ಚರಿಕೆ ನೀಡಿದೆ. ಇಸ್ಲಾಂ ಧರ್ಮಕ್ಕೆ ಆಗಲಿ, ಕ್ರೈಸ್ತ ಧರ್ಮಕ್ಕೆ ಆಗಲಿ ನಡೆಯುವ ಇಂಥ ಮತಾಂತರಗಳ ಹಿಂದೆ ಸಾಮ್ರಾಜ್ಯವಾದಿಗಳ ಹಸ್ತವಿರುವುದೆಂದು ಸೆಕ್ರೆಟಾರಿಯೆಟ್ ಎಚ್ಚರ ನೀಡಿದೆ. ವಿದೇಶಿ ಏಜಂಟರು, ಸ್ಥಾಪಿತ ಹಿತಾಸಕ್ತಿಗಳು ತೊಡಗಿರುವ ಈ ಕೆಲಸದಿಂದ ದೇಶದ ಮತೀಯ ಶಾಂತಿಯನ್ನು ಕೆಡಿಸುವುದೇ ಉದ್ದೇಶವಾಗಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಅಭಿಪ್ರಾಯಪಟ್ಟಿದೆ.

ಪಕ್ಷದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರವರು ಹೊರಡಿಸಿರುವ ಹೇಳಿಕೆಯಲ್ಲಿ "ದಲಿತರ ವಿಮೋಚನೆ ಈ ಸಾಮೂಹಿಕ ಮತಾಂತರದಿಂದ ಆಗಲು ಸಾಧ್ಯವಿಲ್ಲ. ಬದಲಾಗಿ ಆರ್ಥಿಕ ಹಾಗೂ ಸಾಮಾಜಿಕ ಸ್ವಾತಂತ್ರ್ಯಕ್ಕೆ ಹೋರಾಡುವುದರಿಂದ ಶೋಷಣೆಯನ್ನು ಸಂಪೂರ್ಣ ತೊಡೆದುಹಾಕುವುದರಿಂದ ಮಾತ್ರ ಸಾಧಿಸಲು ಸಾಧ್ಯವೆಂದು ಹೇಳಿದ್ದಾರೆ.

ಇಂಥ ಶಕ್ತಿಗಳ ಕೈಯಲ್ಲಿ ಸಿಲುಕದಿರುವಂತೆ ಕಾಂ.ಭಟ್‌ರವರು ರಾಜ್ಯದ ಜನತೆಯನ್ನು ವಿನಂತಿಸಿದ್ದಾರೆ.

○

ವೆಂಕಟರಾವ್ ಪಾನಸೆ ನಿಧನ

ಮದರಾಸಿನಲ್ಲಿರುವ ಸೋವಿಯತ್ ವಾರ್ತಾ ಇಲಾಖೆಯ ಕನ್ನಡ ವಿಭಾಗದಲ್ಲಿ ಸಂಪಾದಕರಾಗಿ ಸೇವೆಸಲ್ಲಿಸುತ್ತಿದ್ದ ಕಾಂ. ವೆಂಕಟರಾವ್ ಪಾನಸೆಯವರು ಮದರಾಸಿನಲ್ಲಿ ಆಗಸ್ಟ್ 5 ರಂದು ನಿಧನರಾದರು.

ಕಾಂ. ಪಾನಸೆಯವರು ಸಣ್ಣ ಕತೆಗಾರರಾಗಿದ್ದು ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ಸಕ್ರಿಯ ಪಾತ್ರವಹಿಸಿದ್ದರು. ಕಾಂ. ಪಾನಸೆಯವರ ನಿಧನಕ್ಕೆ ಐಕ್ಯರಂಗ ಸಂತಾಪವನು ವ್ಯಕ್ತಪಡಿಸುತ್ತದೆ.

●

ಬೀಡಿ ಕೆಲಸಗಾರರ ಸಭೆ

ದ. ಕ. ಜಿಲ್ಲೆಯ ಉಳ್ಳಾಲ ಸುಂದರಿಬಾಗ್ ಬೀಡಿ ಮಜೂರರ ಮಹಾಸಭೆಯು ಕಾಂ. ಗಂಗಾಧರ ಶೆಟ್ಟಿ ಉಳ್ಳಾಲ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾಂ. ಯು.ಜಿ. ಮರಪ್ಪನವರು ಬೀಡಿಕಾರ್ಮಿಕರ ಚಟುವಟಿಕೆಯ ಕುರಿತು ಮಾತನಾಡಿದರು. ಕೋಟೆಕಾರ್ ಬೀಡಿ ಲೇಬರ್ ಯೂನಿಯನ್ನಿನ ಅಧ್ಯಕ್ಷ ಕೆ. ನಾರಾಯಣ ಶೆಟ್ಟಿ ಮತ್ತು ಮುಖ್ಯ ಅತಿಥಿ ಯು. ಪಿ. ರಾವ್ ಅವರು ಬೀಡಿಕಾರ್ಮಿಕರ ಸಮಸ್ಯೆಗಳ ಕುರಿತು ಮಾತನಾಡಿದರು.

1981-82ರ ಸಾಲಿಗೆ 15 ಜನರ ಕಾರ್ಯಕಾರಿ ಸಮಿತಿಯ ರಚನೆ ಮಾಡಲಾಯಿತು. ಕಾರ್ಯದರ್ಶಿಯಾಗಿ ಯು. ಭಾಸ್ಕರ ಕುಲಾಲ್ ಮತ್ತು ಉಪಕಾರ್ಯದರ್ಶಿಯಾಗಿ ಬಿ. ನಾಗೇಶ್ ಮತ್ತು ಯು. ರಾವ್ ಇವರನ್ನು ಆಯ್ಕೆಮಾಡಲಾಯಿತು.

●

ಡಿ.ವೈ.ಎಫ್.ಐ. ಸಭೆ

3-8-81ರಂದು ದ.ಕ. ಜಿಲ್ಲೆಯ ಕುಂದಾಪುರ ತಾಲ್ಲೂಕು ಡಿ.ವೈ.ಎಫ್.ಐ.ನ ವಿಸ್ತೃತ ಸಭೆಯು ಕುಂದಾಪುರದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಶಂಕರ ಖಾರ್ವಿ ವಹಿಸಿದ್ದರು.

ಕರ್ನಾಟಕ ರಾಜ್ಯ ಡಿ. ವೈ. ಎಫ್. ಐ. ಸಂಚಾಲಕ ಕಾಂ. ಜಿ. ವಿ. ಶ್ರೀರಾಮರೆಡ್ಡಿಯವರು ರಷ್ಯಾದ ತಮ್ಮ ಅನುಭವವನ್ನು ಸಭೆಯಲ್ಲಿ ವಿವರಿಸಿದರು. ಕಾಂ.ರೆಡ್ಡಿ ಇತ್ತೀಚೆಗೆ ರಷ್ಯಾಕ್ಕೆ ಸೌಹಾರ್ದ ಪ್ರವಾಸ ಕೈಗೊಂಡಿದ್ದರು.

●

ಚಳುವಳಿ ತೀವ್ರಗೊಳಿಸಲು ನಿರ್ಧಾರ

3-8-81ರಂದು ಮಂಗಳೂರಿನಲ್ಲಿ ಸೇರಿದ ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್‌ನ ಕಾರ್ಯಕಾರಿ ಸಮಿತಿಯು ಮೋಟಾರ್ ಕೈಗಾರಿಕೆಯಲ್ಲಿ ದುಡಿಯುವ ಕಾರ್ಮಿಕರ ಕೋರಿಕೆಗಳ ಬಗ್ಗೆ ಮಾಲೀಕರು ಇತ್ಯರ್ಥಕ್ಕೆ ಬರಲು ಮುಂದಾಗದುದನ್ನು ಗಮನಿಸಿ ಮುಂದಿನ ಚಳುವಳಿಗೆ ಬೇಕಾದ ಸಿದ್ಧತೆಯನ್ನು ನಡೆಸಲು ತೀರ್ಮಾನಿಸಲಾಯಿತು. 3-8-81 ರಂದು ಮಂಗಳೂರು ವಿಭಾಗದ ಅಸಿಸ್ಟಂಟ್ ಲೇಬರ್ ಕಮೀಷನರ್‌ರವರು ಕರೆದ ಮಾತುಕತೆಗೆ ಮಾಲೀಕರು ಹಾಜರಾಗದೆ ಇರುವುದನ್ನು ಗಮನಿಸಿ ಜಿಲ್ಲಾಧಿಕಾರಿಯವರು ಈ ಬಗ್ಗೆ ಮಧ್ಯೆ ಪ್ರವೇಶಮಾಡುವಂತೆ ವಿನಂತಿಸಿಕೊಳ್ಳಬೇಕೆಂದು ನಿರ್ಣಯಿಸಲಾಯಿತು.

○

ಕರ್ನಾಟಕ ರಾಜ್ಯದಲ್ಲಿ

-ಎನ್ಕೆ

ಇಬ್ರಾಹಿಂ ರಾಜೀನಾಮೆ

ಇತ್ತೀಚಿನ ವರ್ಷಗಳಲ್ಲಿ ಕನ್ನಡ ನಾಡಿನಲ್ಲಿ ಜನಸಮುದಾಯವನ್ನು ಆಕರ್ಷಿಸಿ, ಸಂಯುಕ್ತ ಚಳುವಳಿಗೆ ನಾಂದಿ ಮಾಡಿ, ಹೋರಾಟದಲ್ಲಿ ಗೆಲುವನ್ನಪ್ಪಿದ ಘಟನೆಗಳು ಎರಡು. 1980ರಲ್ಲಿ ಮಲಪ್ರಭಾ ಆಯುಕಟ್ಟು ಪ್ರದೇಶದ ರೈತರ ಹೋರಾಟ. ಅವರ ಹೋರಾಟಕ್ಕೆ ಬೆಂಬಲ ನೀಡಿ ರಾಜ್ಯಾದ್ಯಂತ ನಡೆದ ಚಳುವಳಿ, ಪೋಲೀಸರ ದಬ್ಬಾಳಿಕೆ, ಗೋಳಿಬಾರು, 52ಕ್ಕೂ ಮೇಲ್ಪಟ್ಟು ಜನರ ಗೋಳಿಗಾಹುತಿ. ಅದರ ಪರಿಣಾಮ ಸ್ವಲ್ಪಮಟ್ಟಿಗೆ ರೈತರಿಗೆ ದೊರೆತ ಸೌಲಭ್ಯಗಳು-ರಿಯಾಯಿತಿಗಳು. 1981ರಲ್ಲಿ ಮಂತ್ರಿ ಇಬ್ರಾಹಿಂ ರಾಜೀನಾಮೆ ಪ್ರಕರಣ. ಎಲ್ಲ ವಿರೋಧಿ ಪಕ್ಷಗಳ ಐಕ್ಯ ಹೋರಾಟ. ಇಂದಿರಾಗಾಂಧಿ, ಗುಂಡೂರಾವ್ ಮೊದಲಾದವರಿಂದ ಇಬ್ರಾಹಿಂ ಸಂರಕ್ಷಣೆ. ವಿಧಾನಸಭೆಯಿಂದ ವಿರೋಧಿ ಪಕ್ಷಗಳ ಉಚ್ಚಾಟನೆ, ವಿಧಾನ ಪರಿಷತ್ತಿನಲ್ಲಿ ವಿರೋಧಿ ಪಕ್ಷದವರಿಂದ ಪಟ್ಟು ಹಿಡಿದು ಹೋರಾಟ. ಗುನ್ನೆ ಸಾಬೀತಾಗುವ ತನಕ ರಾಜೀನಾಮೆ ಕೊಡುವುದಿಲ್ಲೆಂದು ಇಬ್ರಾಹಿಂ ಅವರ ಹಟ. ಆಳುವ ಕಾಂಗ್ರೆಸ್ ಪಕ್ಷದಲ್ಲೇ ಬಿರುಕು. ವಿರೋಧಿ ಚಳುವಳಿ, ಜನರ ಅಭಿಪ್ರಾಯಗಳೆಲ್ಲ ನುಂಗಲಾರದ ತುತ್ತಾದಾಗ, ವಿಧಾನ ಪರಿಷತ್ ಕೊನೆಗೊಳ್ಳುವ ಕೆಲವೇ ನಿಮಿಷ ಮುನ್ನ ಇಬ್ರಾಹಿಂ ಜನರ ಆರ್ಭಟ ತಾಳಲಾರದೆ ತುತ್ತನ್ನು ನುಂಗಬೇಕಾಯಿತು. ರಾಜೀನಾಮೆ ಕೊಡಬೇಕಾಯಿತು. ಇಬ್ರಾಹಿಂ ರಾಜೀನಾಮೆ ವಿರೋಧಿಪಕ್ಷಗಳ ವಿಜಯ, ಹೋರಾಡಿದ ಕನ್ನಡಿಗರ ವಿಜಯ. ಇಬ್ರಾಹಿಂ ಪ್ರಕರಣ ಕನ್ನಡ ರಾಜ್ಯದಲ್ಲಿ ಹೊಸ ದಾಖಲೆ. ಇದಕ್ಕೆ ಜಾತೀಯ ಸ್ವರೂಪ ಕೊಡುವ ಪ್ರಯತ್ನ ಇಬ್ರಾಹಿಂ ಮಾಡುತ್ತಾರೆ. ಜನತೆ ಎಚ್ಚರಿಕೆಯಿಂದಿರುವುದು ಅತ್ಯಗತ್ಯ. ಮಲಪ್ರಭಾ ರೈತರ ಹೋರಾಟದಲ್ಲೂ, ಇಬ್ರಾಹಿಂ ರಾಜೀನಾಮೆ ಪಡೆಯುವಲ್ಲೂ ವಿರೋಧಿ ಪಕ್ಷಗಳು ಜಯಗಳಿಸಿವೆ. ಈ ಹೋರಾಟಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಪ್ರಧಾನಪಾತ್ರ ವಹಿಸಿದೆ. ಎಡ ಮತ್ತು ಪ್ರಜಾಪ್ರಭುತ್ವಶಕ್ತಿಗಳು ಬೆಳೆಯಬೇಕು. ಇಂದಿರಾಗಾಂಧಿಯ ಸರ್ವಾಧಿಕಾರಿ ಶಕ್ತಿ, ಇಂದಿರಾ ಕಾಂಗ್ರೆಸ್ಸಿನ ಜನವಿರೋಧಿ ನೀತಿಗಳ ವಿರುದ್ಧ ಹೋರಾಡಲು ವಿರೋಧಿ ಪಕ್ಷಗಳೆಲ್ಲ ಒಂದಾಗುವುದರ ಅಗತ್ಯವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಒತ್ತಿ ಹೇಳುತ್ತ ಬಂದಿದೆ. ಕರ್ನಾಟಕದಲ್ಲಿ ಈ ಎರಡು ಘಟನೆಗಳ ವಿರುದ್ಧ ನಡೆಸಲ್ಪಟ್ಟ ಚಳುವಳಿ ಹಾಗೂ ಅದಕ್ಕೆ ಸಿಕ್ಕಿರುವ ವಿಜಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನಿಲುವೆಯನ್ನು ಸಮರ್ಥಿಸಿವೆ. ಅಂಥ ಶಕ್ತಿಯನ್ನು ಬಲಪಡಿಸಲು ಮುಂದಾಗೋಣ.

ವಿಜಯನಗರ ಉಕ್ಕು ಕಾರ್ಖಾನೆ

ಚುನಾವಣಾ ಫಲಿತಾಂಶದಂತೆ ಇಂದಿರಾ ಪ್ರಾಬಲ್ಯ ರಾಜ್ಯ ಕರ್ನಾಟಕ. 1969ರಲ್ಲಿ ಕಾಂಗ್ರೆಸ್ ಇಬ್ಭಾಗವಾದ ತರುವಾಯ ಮುಂಬರುವ ಚುನಾವಣೆಯ ಮೇಲೆ ದೃಷ್ಟಿ ಹಾಯಿಸಿದ ಇಂದಿರಾಗಾಂಧಿ, ಎರಡು ಕೋಟಿ ಕನ್ನಡಿಗರ ಕನಸು – ವಿಜಯನಗರ ಉಕ್ಕು ಕಾರ್ಖಾನೆ-ನನಸಾಗಿಸುತ್ತೇನೆಂಬ ಭ್ರಮೆ ಉಂಟುಮಾಡುವ ಉದ್ದೇಶದಿಂದ 1970-71ರಲ್ಲಿ ಅತಿ ವಿಜೃಂಭಣೆಯಿಂದ ವಿಜಯನಗರ ಉಕ್ಕು ಕಾರ್ಖಾನೆಯ ಅಡಿಗಲ್ಲು ಸಮಾರಂಭ ನೆರವೇರಿಸಿದರು. 1972 ಚುನಾವಣೆಯಲ್ಲೂ ಅನಂತರವೂ ಸತತವಾಗಿ ತನಗೆ ಜಯ ದೊರಕಿದಾಗ "ಕನ್ನಡಿಗರು ಮನೆಮಕ್ಕಳು, ಸಂಭಾಳಿಸಬಹುದು" ಎಂದು ತಿಳಿದು, ಉಕ್ಕಿನ ಕಾರ್ಖಾನೆಗಾಗಿ ಹಾಕಿದ ಅಡಿಗಲ್ಲು, ಮಣ್ಣಿನೊಳಗೆ ಸೇರಿದರೂ ಈ ಕಾರ್ಖಾನೆಯ ಕುರಿತು ವಿಚಾರ ಮಾಡಲಿಲ್ಲ ಇಂದಿರಾಗಾಂಧಿ. ಚುನಾವಣೆ ಬಂದಾಗ, ವಿರೋಧಿ ಪಕ್ಷಗಳೂ, ಆ ಭಾಗದಲ್ಲಿ ಚುನಾವಣೆ ಸ್ಪರ್ಧಿಸಲಿಚ್ಛಿಸುವ ವ್ಯಕ್ತಿಗಳು ಬೊಬ್ಬಾಟ ಎಬ್ಬಿಸಿದಾಗ ಕರ್ನಾಟಕದ ಮುಖ್ಯಮಂತ್ರಿಗಳು, ದಿಲ್ಲಿ ಸವಾರಿ ಮಾಡಿ "ಆಗುತ್ತದೆ" "ಮಾಡುತ್ತಾರೆ" ಎಂಬ ಘೋಷಣೆಗಳಿಂದ ಜನರನ್ನು ಸಂತೃಪ್ತಿ ಪಡಿಸುತ್ತಿದ್ದರು.

ಆಗ ಸಾಧಾರಣ ಎರಡುನೂರು ಕೋಟಿ ರೂಪಾಯಿಯಲ್ಲಿ ಇಷ್ಟು ದೊಡ್ಡ, ದೇಶದ ಬೆಳವಣಿಗೆಗೆ ಅತ್ಯಗತ್ಯವಾದ ಉಕ್ಕಿನ ಕಾರ್ಖಾನೆ ಪೂರ್ಣಗೊಳ್ಳುವ ಅವಕಾಶವಿತ್ತು. ಶೇ. 75ಕ್ಕಿಂತಲೂ ಹೆಚ್ಚಿನಂಶ ಕಬ್ಬಿಣವನ್ನೊಳಗೊಂಡ ಅದಿರು. ಆಗ ಹಣದ ಅಭಾವದ ಪ್ರಶ್ನೆ ಇರಲಿಲ್ಲ. ಕಲ್ಲಿದ್ದಲು ತರಿಸಲು ದೂರವೆಂಬ ನೆವ ಒಂದು. ಅದಕ್ಕಿಂತಲೂ ಹೆಚ್ಚಾಗಿ, ರಾಜಕೀಯ ಕಾರಸ್ಥಾನ. ಕನ್ನಡಿಗರೆಲ್ಲ 'ಇಂದಿರಾ ಭಕ್ತರು, ಚಿಂತೆಯಿಲ್ಲ' ಮದ್ರಾಸಿನಲ್ಲಿ ಡಿ. ಎಂ. ಕೆ.–ಅಣ್ಣಾ ಡಿ. ಎಂ. ಕೆ. ಪ್ರಬಲ-ಕಾರಣ ಕೊಯಮುಬತ್ತೂರಿನ ಉಕ್ಕು ಕಾರ್ಖಾನೆಗೂ, ಆಂಧ್ರವೂ ಅಷ್ಟೇ ಮಹತ್ವವಾಗಿರುವುದರಿಂದ ವಿಶಾಖಪಟ್ಟಣಂ ಕಾರ್ಖಾನೆಗೂ ಪ್ರಾಧಾನ್ಯ ಕೊಡುವ ವಿಚಾರ. ಹೀಗಾಗಿ ಯಾವುದೂ ಮುಂದೆ ಸಾಗಲಿಲ್ಲ.

ಈಗ ಮತ್ತೆ ವಿಜಯನಗರ ಯೋಜನೆ ಬೆಳಕಿಗೆ ಬಂದಿದೆ. ಎಲ್ಲರೂ ಹಸಿರು ಬಾವುಟ ತೋರಿಸಿದ್ದಾರಂತೆ. ಎರಡು ನೂರು ಕೋಟಿಗೆ ಆಗ ಬೇಕಾಗಿದ್ದ ಉಕ್ಕಿನ ಕಾರ್ಖಾನೆಗೆ ಈಗಿನ ಖರ್ಚು 3452 ಕೋಟಿ ರೂಪಾಯಿ. ಸರಕಾರದಿಂದ, ಯೋಜನಾ ಆಯೋಗದಿಂದ ಕೊನೆ ಅಪ್ಪಣೆ ಪಡೆದು, ಕೆಲಸ ಪ್ರಾರಂಭವಾಗಲಿಕ್ಕೆ 7 ವರ್ಷವೋ 17 ವರ್ಷವೋ ಕನಸಿನಲ್ಲಿ ನೆನೆಸುವುದೂ ಅಸಾಧ್ಯ. ಈಗಿನ ಅತಿಪ್ರಸರಣ ಇದೇ ರೀತಿ ಮುಂದುವರಿದದ್ದೇ ಆದರೆ ಈಗಿನ ಅಂದಾಜು 3452 ಕೋಟಿಯಿದ್ದುದು ಮುಂದಿನ 7-17ರಲ್ಲಿ ಎಷ್ಟು ಕೋಟಿ ಅಧಿಕವಾಗಬಹುದೆಂಬುದನ್ನು ನೆನೆಸುವುದೇ ಅಸಾಧ್ಯ. ಹಾಗಾದ್ದಲ್ಲಿ ಇಂದಿರಾ ಅಧಿಕಾರ ಇರುವತನಕ ವಿಜಯನಗರ ಉಕ್ಕಿನ ಕಾರ್ಖಾನೆ ಉದಯವಾಗುವ ಲಕ್ಷಣವೇ ಇಲ್ಲೆಂದು ಪರಿಗಣಿಸಿದರೆ ತಪ್ಪೇನಿಲ್ಲ.

ಅಗತ್ಯ ಸೇವಾ ಸುಗ್ರೀವಾಜ್ಞೆ ವಿರೋಧಿಸಿ

ರಾಜ್ಯದಾದ್ಯಂತ ಪ್ರತಿಭಟನೆ

ಬೆಂಗಳೂರು

7-8-1981ರಂದು ಸಿ. ಐ. ಟಿ. ಯು. ರಾಜ್ಯಸಮಿತಿಯು ಕರೆಯ ಮೇರೆಗೆ, ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ಆಶ್ರಯದಲ್ಲಿ ಸಭೆ ಮತ್ತು ಮೆರವಣಿಗೆ ವ್ಯವಸ್ಥೆಗೊಳಿಸಲಾಗಿತ್ತು. ಸಿ. ಐ. ಟಿ. ಯು. ಘಟಕಗಳ ಎಲ್ಲ ಕಾರ್ಮಿಕರು ತಮ್ಮ ತಮ್ಮ ಕಾರ್ಖಾನೆಗಳಿಂದ ಮೆರವಣಿಗೆಯಲ್ಲಿ ಹೊರಟು ಸಂಜೆ 6ಕ್ಕೆ ಚಿಕ್ಕ ಲಾಲ್‌ಬಾಗ್ ತಲುಪಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಸೂರ್ಯನಾರಾಯಣರಾವ್‌ರು ವಹಿಸಿದ್ದರು.

ಕಾಂ. ಪಿ. ಕೆ. ಸುಬ್ರಮಣಿ ಸ್ವಾಗತಿಸಿದ ನಂತರ ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ. ಟಿ. ಎಸ್. ಅನಂತರಾಂ, ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ. ವಿ. ಜೆ. ಕೆ. ನಾಯರ್ ಮತ್ತು ಕಾಂ. ಎನ್. ಎಲ್. ಉಪಾಧ್ಯಾಯರು ಮತ್ತು ಜನತಾಪಕ್ಷದ ಶ್ರೀ ಲಕ್ಷ್ಮೀ ಸಾಗರ ಅವರು ಮಾತನಾಡಿ ಸುಗ್ರೀವಾಜ್ಞೆಯನ್ನು ಜಾರಿಮಾಡಿದುದನ್ನು ಉಗ್ರವಾಗಿ ಖಂಡಿಸಿದರು.

ಸಭೆಯ ಪ್ರಾರಂಭದಲ್ಲಿ ಸಿ. ಪಿ. ಐ. ಮುಖಂಡ ಕಾಂ. ಭೂಪೇಶ್‌ಗುಪ್ತರ ನಿಧನದ ಬಗ್ಗೆ ಮೌನವನ್ನಾಚರಿಸಿ ಶ್ರದ್ಧಾಂಜಲಿಯನ್ನರ್ಪಿಸಿತು.

ಮೈಸೂರು

ಮೈಸೂರು ನಗರ ಕಾರ್ಪೊರೇಷನ್ ಮುಂಭಾಗದಲ್ಲಿ 7-8-81 ರಂದು ಸಿ. ಐ. ಟಿ. ಯು. ನೇತೃತ್ವದಲ್ಲಿ ಸುಗ್ರೀವಾಜ್ಞೆಯನ್ನು ಪ್ರತಿಭಟಿಸಿ ಭಾರಿ ಬಹಿರಂಗ ಸಭೆ ನಡೆಯಿತು.

ಸಭೆಯನ್ನು ಉದ್ದೇಶಿಸಿ ಕಾಂ. ಎಂ. ಎನ್. ಉಗ್ರಪ್ಪ ಮತ್ತು ಕಾಂ. ಸಿ. ಕೆ. ಮೋನ್ ಅವರು ಮಾತನಾಡಿ ಸುಗ್ರೀವಾಜ್ಞೆಯನ್ನು ಸರಕಾರ ಹಿಂತೆಗೆದುಕೊಳ್ಳುವವರೆಗೆ ಹೋರಾಡಲು ಕರೆ ನೀಡಿದರು.

ಹರಿಹರ

ರಾಜ್ಯಸಮಿತಿಯ ಕರೆಯ ಮೇರೆಗೆ ಹರಿಹರದಲ್ಲಿ ಸಿ. ಐ. ಟಿ. ಯು. ಸಂಘಟನೆಗೆ ಸೇರಿದ ಎಲ್ಲ ಕಾರ್ಮಿಕ ಸಂಘಗಳೂ ಸುಗ್ರೀವಾಜ್ಞೆಯನ್ನು ವಿರೋಧಿಸಿ ಮೆರವಣಿಗೆ ಹೊರಡಿಸಿದ್ದವು.

ಮೈಸೂರು ಕಿರ್ಲೋಸ್ಕರ್ ಕೆಲಸಗಾರರ ಸಂಘ, ಬೀಡಿಕೆಲಸಗಾರರ ಸಂಘ, ಪಾಲಿಫೈಬರ್ಸ್, ಕನ್‌ಸ್ಟ್ರಕ್ಷನ್ ಕೆಲಸಗಾರರ ಸಂಘಗಳ ಕಾರ್ಮಿಕರು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಕಾರ್ಮಿಕವಿರೋಧಿ ಧೋರಣೆಯನ್ನು ಅನುಸರಿಸುತ್ತಿರುವ ಕೇಂದ್ರ ಮತ್ತು ರಾಜ್ಯಸರಕಾರಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ತಹಸೀಲ್ದಾರ್‌ರ ಕಚೇರಿಗೆ ತೆರಳಿ ಮನವಿ ಪತ್ರವನ್ನು ಸಲ್ಲಿಸಿದರು.

ಚಿಕ್ಕಬಳ್ಳಾಪುರ

7–8–81ರಂದು ಅಗತ್ಯ ಸೇವಾ ಮಸೂದೆಯ ಸುಗ್ರೀವಾಜ್ಞೆಯನ್ನು ಪ್ರತಿಭಟಿಸಿ ಚಿಕ್ಕಬಳ್ಳಾಪುರದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಗೆ ಮುಂಚೆ ನಡೆದ ಮೆರವಣಿಗೆಯಲ್ಲಿ ರೇಷ್ಮೆಕಾರ್ಮಿಕರು, ಕೃಷಿಕಾರ್ಮಿಕರು, ರೈತರು, ಮಹಿಳೆಯರು ಭಾಗವಹಿಸಿದ್ದರು. ಮೆರವಣಿಗೆಯ ನೇತೃತ್ವವನ್ನು ಕಾಂ. ಎಸ್. ಲಕ್ಷ್ಮಯ್ಯನವರು ವಹಿಸಿದ್ದರು.

ಅಸಿಸ್ಟಂಟ್ ಕಮೀಷನರರಿಗೆ ಮನವಿ ಪತ್ರ ಸಲ್ಲಿಸಿದ ನಂತರ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಕಾಂ. ಲಕ್ಷ್ಮಯ್ಯ ಸುಗ್ರೀವಾಜ್ಞೆಯನ್ನು ಉಗ್ರವಾಗಿ ಖಂಡಿಸಿದರು.

ಸಭೆಯಲ್ಲಿ ಕಾಂ. ಭೂಪೇಶ್‌ಗುಪ್ತರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ಮಂಗಳೂರು

7–8–81ರಂದು ಸಿ.ಐ.ಟಿ.ಯು. ರಾಜ್ಯಸಮಿತಿಯ ಆದೇಶದಂತೆ ಮಂಗಳೂರಿನಲ್ಲಿ ರಾಷ್ಟ್ರಪತಿಯವರ ಸುಗ್ರೀವಾಜ್ಞೆಯನ್ನು ವಿರೋಧಿಸಿ ಪ್ರತಿಭಟನಾ ಸಭೆಗಳು ನಡೆದವು. ಬೋಳಾರದಲ್ಲಿ ಹಂಚಿನ, ಬೀಡಿ, ಕ್ಯಾಶ್ಯೂ ಕಾರ್ಮಿಕರನ್ನುದ್ದೇಶಿಸಿ ಕಾಂ. ಬಿ. ಕೊರಗಪ್ಪರೈ ಮತ್ತು ಕಾಂ. ಮೂಸಬ್ಬ ಮಾತನಾಡಿದರು.

ಮೈದಾನ್ ರೋಡ್‌ನ ಸಭೆಯಲ್ಲಿ ಅಡಿಕೆ, ಬಂದರು, ಮೋಟಾರ್, ರಿಕ್ಷಾ ಕಾರ್ಮಿಕರನ್ನುದ್ದೇಶಿಸಿ ಕಾಂ. ಪಿ. ರಾಮಚಂದ್ರರಾವ್ ಮತ್ತು ಕಾಂ. ಬಿ. ಮಾಧವ ಮಾತನಾಡಿ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳುವಂತೆ ಸರಕಾರವನ್ನು ಒತ್ತಾಯಿಸಿದರು.

ಪದವುನಲ್ಲಿ ಬೀಡಿ ಮತ್ತು ಕ್ಯಾಶ್ಯೂ ಕಾರ್ಮಿಕರನ್ನುದ್ದೇಶಿಸಿ ಕಾಂ. ಕೆ. ಆರ್. ಶ್ರೀಯಾನ್ ಮಾತನಾಡಿ ಸುಗ್ರೀವಾಜ್ಞೆಯನ್ನು ಉಗ್ರವಾಗಿ ಖಂಡಿಸಿದರು.

ಈ ಸಭೆಗಳ ಪ್ರಾರಂಭದ ಮುನ್ನ ಆಗಸ್ಟ್ 5ರಂದು ನಿಧನರಾದ ಕಾಂ. ಭೂಪೇಶ್‌ಗುಪ್ತರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಉಡುಪಿ

ಉಡುಪಿಯಲ್ಲಿ 7-8-81ರಂದು ಬಹಿರಂಗ ಸಭೆಯನ್ನು ಏರ್ಪಡಿಸಿತ್ತು. ಬೀಡಿ, ಎಲ್ಲೈಸಿ, ಟೈಲ್ ಮತ್ತು ಪ್ಲೈವುಡ್ ಕಾರ್ಮಿಕರು ಸಭೆಯಲ್ಲಿ ಪಾಲ್ಗೊಂಡಿದ್ದರು. ಮುಖ್ಯ ಭಾಷಣಕಾರರಾಗಿ ಆಗಮಿಸಿದ ಕಾಂ.ಶಂಕರ್ ಸುಗ್ರೀವಾಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಿದರು.

ಕುಂದಾಪುರ

7-8-81ರಂದು ಕುಂದಾಪುರದಲ್ಲಿ ಸುಗ್ರೀವಾಜ್ಞೆಯನ್ನು ವಿರೋಧಿಸಿ ಪ್ರತಿಭಟನಾ ಸಭೆ ನಡೆಯಿತು. ಮುಖ್ಯ ಭಾಷಣಕಾರರಾಗಿ ಕಾಂ. ಅಬ್ರಹಾಂ ಕರ್ಕಡರು ಆಗಮಿಸಿದ್ದರು. ಸುಗ್ರೀವಾಜ್ಞೆಯ ವಿರುದ್ಧ ಹೋರಾಡಲು ಕಾಂ. ಅಬ್ರಹಾಂ ಕರ್ಕಡರು ಕರೆ ನೀಡಿದರು. ●

ಆಗಸ್ಟ್ ೧೭ರಂದು ಕಪ್ಪುದಿನ ಆಚರಿಸಲು ಕರೆ

ಬೆಲೆ ಏರಿಕೆ ಮತ್ತು ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಜೂನ್ 4, 1981ರಂದು ಬೊಂಬಾಯಿ ನಗರದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳ ಹಾಗು ಕೈಗಾರಿಕಾ ಒಕ್ಕೂಟಗಳ ರಾಷ್ಟ್ರೀಯ ಸಮಾವೇಶವೊಂದು ಜರುಗಿತು. ಈ ಸಮಾವೇಶವು ವ್ಯಾಪಕವಾದ ಚಳುವಳಿಯ ಕಾರ್ಯಕ್ರಮಗಳನ್ನು ತೀರ್ಮಾನ ಮಾಡಿದೆ. ಈ ತೀರ್ಮಾನಗಳನ್ನು ಕರ್ನಾಟಕದಲ್ಲಿ ಜಾರಿಗೊಳಿಸಲು ಬೊಂಬಾಯಿಯಲ್ಲಿ ನಡೆದ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡಂತೆ ರಾಷ್ಟ್ರೀಯ ಚಳುವಳಿ ಸಮಿತಿಯ ರಾಜ್ಯ ಘಟಕವನ್ನು ರಚಿಸಲಾಗಿದೆ. ಕರ್ನಾಟಕ ಘಟಕದಲ್ಲಿ ಸಿ.ಐ.ಟಿ.ಯು. ವಿನಿಂದ ಕಾಂ. ಸಿ. ನಂಜುಂಡಪ್ಪ, ಎಚ್. ಎಂ. ಎಸ್.ನ ಕಾಂ. ಕೆ. ಪುಟ್ಟಯ್ಯ, ಬಿ.ಎಂ.ಎಸ್.ನ ಕಾಂ. ನರಹರಿಘಡ್ಕೆ, ಎ.ಐ.ಟಿ.ಯು.ಸಿ.ಯ ಕಾಂ. ಅನಂತಸುಬ್ಬರಾವ್ ಇದ್ದಾರೆ. 12- -81ರಂದು ಎನ್.ಸಿ.ಸಿ.ಯು ವತಿಯಿಂದ ಪತ್ರಿಕಾ ಸಮ್ಮೇಳನ ನಡೆಯಿತು. ಪತ್ರಿಕಾ ಸಮ್ಮೇಳನದಲ್ಲಿ ಹಾಜರಿದ್ದ ಪ್ರತಿನಿಧಿಗಳು ಆ. 17 ರಂದು ರಾಜ್ಯದಾದ್ಯಂತ ಕಪ್ಪುದಿನ ಆಚರಿಸಲು ತೀರ್ಮಾನಿಸುವದಾಗಿ ತಿಳಿಸಿದರು.

ಜೀವನಾವಶ್ಯಕ ವಸ್ತುಗಳ ಬೆಲೆ ದಿನದಿನಕ್ಕೆ ಮುಗಿಲು ಮುಟ್ಟುತ್ತಿರುವುದರಿಂದ ಇಡೀ ಶ್ರಮಜೀವಿಗಳ ವರ್ಗ ಈ ಬೆಲೆ ಏರಿಕೆಯಿಂದ ತತ್ತರಿಸಿದೆ. ಸರ್ಕಾರವು ಬೆಲೆ ಏರಿಕೆಯನ್ನು ತಡೆಗಟ್ಟುವುದರಲ್ಲಿಸಂಪೂರ್ಣವಾಗಿ ವಿಫಲವಾಗಿದೆ. ಸರ್ಕಾರವೇಪೆಟ್ರೋಲಿಯಂ ಪದಾರ್ಥಗಳು, ಉಕ್ಕು, ಸಿಮೆಂಟ್, ಕಲ್ಲಿದ್ದಲು, ರೈಲ್ವೆ ಮತ್ತು ಬಸ್ಸಿನದರ, ಹಾಲಿನ ಬೆಲೆಇತ್ಯಾದಿಗಳ ಬೆಲೆಯನ್ನು ಏರಿಸಿದೆ. 1970 ರಿಂದ 1977ರವರೆಗೆ ಸಂಘಟಿತ ಕ್ಷೇತ್ರಗಳ ಕಾರ್ಮಿಕರಿಗಾಗಿ ಆಗಿರುವ ಖರ್ಚು ಶೇ. 71ರಿಂದ 66ಕ್ಕೆ ಇಳಿದಿದ್ದರೆ, ಡಿವಿಡೆಂಡ್ ಹಾಗೂ ಲಾಭಾಂಶಗಳು ಶೇ. 16 ರಿಂದ 21ರವರೆಗೆ ಏರಿದೆ. ಕೈಗಾರಿಕೋದ್ಯಮಿಗಳು, ಸಟ್ಟಾ ವ್ಯಾಪಾರಿಗಳು, ಕಳ್ಳಸಾಗಾಣಿಕೆದಾರರು ಮತ್ತು ಈ ವರ್ಗಗಳಿಗೆ ಸೇರಿದ ಜನರು ಅಪಾರ ಹಣವನ್ನು ಸಂಪಾದನೆ ಮಾಡಿ ರಾಷ್ಟ್ರದಲ್ಲಿ ಕಪ್ಪು ಹಣದ ಪರ್ಯಾಯ ವ್ಯವಸ್ಥೆಯನ್ನೇ ಮಾಡಿದ್ದಾರೆ. ಈ ವರ್ಗದ ಜನಕ್ಕೆ ತೆರಿಗೆ ರಿಯಾಯಿತಿಗಳನ್ನು ಸರ್ಕಾರವೇ ಕೊಡುತ್ತಿದೆ. ಆದರೆ ಕಾರ್ಮಿಕವರ್ಗದ ಮೇಲೆ ಸರ್ಕಾರ ಗಧಾ ಪ್ರಹಾರ ಮಾಡಿದೆ. ರೈಲ್ವೆ ಲೋಕೋ ಕೆಲಸಗಾರರ ಮುಷ್ಕರ, ಜೀವವಿಮಾ ನೌಕರರ ಮುಷ್ಕರ ಹಾಗೂ ಬೆಂಗಳೂರು ಆಧಾರಿತ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಮುಷ್ಕರಗಳ ಬಗ್ಗೆ ಸರ್ಕಾರ ತಾಳಿದ ದೋರಣೆ ಬಹಳ ಸ್ಪಷ್ಟವಾಗಿದೆ.

ಈಗ ಕೆಲಸಗಾರರ ಮುಷ್ಕರದ ಮೂಲಭೂತ ಹಕ್ಕನ್ನು ಹತ್ತಿಕ್ಕಲು ಅಗತ್ಯ ಸೇವಾ ಸಂರಕ್ಷಣೆಗಳ ಸುಗ್ರೀವಾಜ್ಞೆಯನ್ನು ಸರ್ಕಾರ ತಂದಿದೆ.

ಅಂಕಿ-ಅಂಶಗಳು :

ಈ ಕೆಳಕಂಡ ಅಂಕಿ ಅಂಶಗಳನ್ನು ಗಮನಿಸಿದರೆ ಸುಗ್ರೀವಾಜ್ಞೆಯು ದುರುದ್ದೇಶಪೂರಿತವೆಂದು ಸ್ಪಷ್ಟವಾಗಿ ಸಾಬೀತಾಗುತ್ತದೆ.

	ದಿವಸಗಳ ನಷ್ಟ	ಮುಷ್ಕರಗಳು	'ಹಿಂಸಾತ್ಮಕ ಘಟನೆ'ಗಳು
1978	2.15 ಕೋಟಿ	2117	840
1979	4.40 ಕೋಟಿ	1336	682
1980	1.30 ಕೋಟಿ	899	542

ರಾಷ್ಟ್ರೀಯ ಭದ್ರತಾ ಶಾಸನ ಮತ್ತು ಈ ಸುಗ್ರೀವಾಜ್ಞೆಗಳು ಕಾರ್ಮಿಕ ವರ್ಗದ ಮೇಲೆ ಗುಲಾಮಗಿರಿಯನ್ನು ಹೊರಿಸುವ ಕಾನೂನುಗಳಾಗುವುದರಲ್ಲಿ ಸಂದೇಹವಿಲ್ಲ. ತುರ್ತು ಪರಿಸ್ಥಿತಿಯ ಔಪಚಾರಿಕ ಘೋಷಣೆ ಇಲ್ಲದೆ ಮೂಲಭೂತ ಹಕ್ಕುಗಳನ್ನು ತುಳಿಯುವ ಕರಾಳ ಕಾನೂನುಗಳಿವು.

ಇಷ್ಟೇ ಅಲ್ಲದೆ ರಾಷ್ಟ್ರೀಯ ಹಿತಾಸಕ್ತಿಗಳನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೂ ಮತ್ತು ವಿಶ್ವಬ್ಯಾಂಕಿಗೂ ಒತ್ತೆ ಇಡುವ ತೀವ್ರವಾದ ಪ್ರಯತ್ನಗಳು ನಡೆಯುತ್ತಿವೆ. ನಮ್ಮ ದೇಶದ ಕಾರ್ಮಿಕ ಮಂತ್ರಿಗಳು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಕೆಲವು ತೀರ್ಮಾನಗಳಿಂದ ರಿಯಾಯಿತಿಯನ್ನು ಕೂಡಾ ಕೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಈಗಿನ ಸರ್ಕಾರ ಅಸ್ತಿತ್ವಕ್ಕೆ ಬಂದಾರಭ್ಯ ಪೋಲೀಸು ಕಾನೂನಿನ 35 ವಿಧಿ ಜಾರಿಯಲ್ಲಿಲ್ಲದ ದಿವಸವಿಲ್ಲ. ಶಾಂತಿಯುತವಾಗಿ ಸಭೆ ಸೇರುವುದು, ಮೆರವಣಿಗೆ ಮಾಡುವುದು ಮುಂತಾದ ಕಾರ್ಮಿಕರ ಮೂಲಭೂತ ಹಕ್ಕುಗಳ ಮೇಲೆ ತೀವ್ರವಾದ ಧಾಳಿಯಾಗುತ್ತಿದೆ. ಆಡಳಿತವರ್ಗ ಸರ್ಕಾರ, ಪೋಲೀಸರುಗಳು ಸೇರಿ ಕಾರ್ಮಿಕರ ಹಕ್ಕುಗಳನ್ನು ದಮನ ಮಾಡುವ ಅಪಾಯಕಾರಿ ಪ್ರವೃತ್ತಿಗಳು ಬೆಳೆಯುತ್ತಿವೆ.

ನ್ಯಾಯಬೆಲೆಗಾಗಿ ಹೋರಾಟ ನಡೆಸಿದ ರೈತರನ್ನು ಮತ್ತು ವೇತನ ಹೆಚ್ಚಳಕ್ಕೆ ಹೋರಾಟ ನಡೆಸಿದ ಕೃಷಿ ಕಾರ್ಮಿಕರ ಮೇಲೆ ಪೋಲೀಸರ ಗುಂಡು, ಲಾಠಿಗಳ ದಾಳಿ ನಡೆದಿದೆ. ಪತ್ರಿಕಾ ಸ್ವಾತಂತ್ರ್ಯ ಮತ್ತು ನ್ಯಾಯಾಂಗದ ಸ್ವಾಯತ್ತತೆಯ ಮೇಲೆ ದಾಳಿ ತಪ್ಪಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡಿ ಅಧ್ಯಕ್ಷೀಯ ಮಾದರಿಯ ಸರ್ಕಾರವನ್ನು ತರುವ ಪಿತೂರಿ ನಡೆಯುತ್ತಿದೆ. ಮೇಲೆ ಹೇಳಿರುವ ವಿಷಯಗಳ ಬಗ್ಗೆ ವ್ಯಾಪಕವಾದ ಹೋರಾಟ ನಡೆಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ :

ಆಗಸ್ಟ್ ೧೭,೧೮ಗಳನ್ನು ಕರಾಳ ದಿನವನ್ನಾಗಿ ಆಚರಿಸುವುದು

ಕಾರ್ಖಾನೆ ಮತ್ತು ಕಛೇರಿಗಳ ಮುಂದೆ ಪ್ರದರ್ಶನ ನಡೆಸುವುದು, ಕಪ್ಪು ಪಟ್ಟಿಗಳನ್ನು ಧರಿಸುವುದು, ಅಗತ್ಯ ಸೇವಾ ಸಂರಕ್ಷಣಾ ಸುಗ್ರೀವಾಜ್ಞೆ ವಿರುದ್ಧ ಪ್ರತಿಭಟಿಸಲು ಮೈಸೂರು ಬ್ಯಾಂಕ್ ಚೌಕದಿಂದ ಮೆರವಣಿಗೆಯೊಂದನ್ನು ಸಂಜೆ 5 ಘಂಟೆಗೆ ಏರ್ಪಡಿಸಿದ್ದು ಈ ಸಲುವಾಗಿ ರಾಜ್ಯಪಾಲರಿಗೆ ಮನವಿಯನ್ನು ಸಲ್ಲಿಸಲಾಗುವುದು. ●

'ರಿನ್' ಬಂಡಾಯ-ನೌಕಾಸೈನಿಕರ ಮುಷ್ಕರ

-ಕೇವಿ

'ರಿನ್' ಅಥವಾ R.I.N. ಅಂದರೆ ರಾಯಲ್ ಇಂಡಿಯನ್ ನೇವಿ. ಇದು ಬ್ರಿಟಿಷರ ಅಧೀನದಲ್ಲಿದ್ದ ಭಾರತೀಯ ನೌಕಾಪಡೆ. 1946ರ ಫೆಬ್ರುವರಿಯಲ್ಲಿ ಈ ನೌಕಾಸೇನೆಗೆ ಸೇರಿದ ಸಾವಿರಾರು ಸೈನಿಕರು ನಡೆಸಿದ 5 ದಿನಗಳ ಮುಷ್ಕರ ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದ ಬಹಳ ಮಹತ್ವಪೂರ್ಣವಾದ ಮತ್ತು ಅಷ್ಟೇ ನಿರ್ಲಕ್ಷಿಸಲ್ಪಟ್ಟ ಒಂದು ಅಧ್ಯಾಯ. ಇಂತಹ ಹಲವು ಹೋರಾಟಗಳ ಫಲವಾಗಿ ದೇಶವನ್ನು ಆಳುವ ಅವಕಾಶಪಡೆದ ಸ್ವತಂತ್ರ ಭಾರತದ ಆಡಳಿತಗಾರರು "ನಮ್ಮದು ಒಂದು ವಿಶಿಷ್ಟ ರಕ್ತರಹಿತ ಕ್ರಾಂತಿ" ಎಂದು ಬುರುಡೆ ಹಾರಿಸುತ್ತಾ ಜನರನ್ನು ನಂಬಿಸಲು ಪ್ರಯತ್ನಿಸಿದ್ದಷ್ಟೇ ಈ ದಿವ್ಯ ನಿರ್ಲಕ್ಷ್ಯಕ್ಕೆ ಕಾರಣವಲ್ಲ ಎಂದರೆ ಸ್ವಾತಂತ್ರ್ಯದ ಆರಂಭದ ವರ್ಷಗಳಲ್ಲಿ ಬಹಳ ಜನ ನಂಬುತ್ತಿರಲಿಲ್ಲ. ಆದರೆ ಈಗ ಮೂರು ದಶಕಗಳ ಅವರ ಆಡಳಿತದ ನಂತರ ಈ ಮುಷ್ಕರದ ವಿವರ ತಿಳಿದಿರುವವರಿಗೆಲ್ಲ ಇದು ಸ್ಪಷ್ಟವಾಗುತ್ತದೆ.

ಎರಡನೇ ಮಹಾಯುದ್ಧ ಅದೇ ತಾನೇ ಮುಗಿದಿತ್ತು. ದೇಶದ ಎಲ್ಲೆಲ್ಲೂ ಬ್ರಿಟಿಷ್ ಆಡಳಿತವನ್ನು ಸಾಧ್ಯವಾದಷ್ಟು ಬೇಗನೇ ಕೊನೆಗಾಣಿಸಬೇಕೆಂಬ ಉತ್ಕಟೇಚ್ಛೆ ಕಂಡುಬರುತ್ತಿತ್ತು. ಪ್ರತಿಯೊಂದು ಜನವಿಭಾಗವೂ ಬ್ರಿಟಿಷರ ವಿರುದ್ಧ ಒಂದಲ್ಲ ಒಂದು ಹೋರಾಟದಲ್ಲಿ ಭಾಗಿಯಾಗಿತ್ತು. ಆಜಾದ್ ಹಿಂದು ಸೇನೆಯ ಸೈನಿಕರ ಬಿಡುಗಡೆಗೆ ದೇಶಾದ್ಯಂತ ಭಾರಿ ಮತಪ್ರದರ್ಶನ ನಡೆಯುತ್ತಿತ್ತು. 2ನೇ ಮಹಾಯುದ್ಧದಲ್ಲಿ ಬರ್ಮ, ಇಟಲಿ, ಗ್ರೀಸ್, ಇಂಡೋಚೀನ, ಮಲಯ, ಇಂಡೋನೇಷ್ಯಾ ಇತ್ಯಾದಿ ಹಲವು ಕಡೆ ಫ್ಯಾಸಿಸಂ ವಿರುದ್ಧ ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿ ಆ ಎಲ್ಲಾ ನಾಡಿಗರ ಆದರಾಭಿಮಾನ ಗಳಿಸಿದ ಭಾರತೀಯ ಸೈನಿಕರು ಆ ದೇಶಗಳ ಜನರ ವಿಮೋಚನಾ ಹೋರಾಟವನ್ನು ಕಣ್ಣಾರೆ ಕಂಡಿದ್ದರು. ಇರಾನಿನಲ್ಲಿ ರಷ್ಯಾದ ಕೆಂಪುಸೇನೆಯೊಡನೆ ಅವರ ಭೇಟಿ ಎಂದೂ ನಿರೀಕ್ಷಿಸಿರದ ಅನುಭವ ಕೊಟ್ಟಿತ್ತು. ಭಾರತದಲ್ಲಿ ಬ್ರಿಟಿಷರ ಗುಲಾಮರಾಗಿ ಅವರಿಂದ ಬಯ್ಗಳನ್ನು ಕೇಳುತ್ತಾ ಅವರು ನಾಯಿಗಳಿಗೆ ಎಸೆದಂತೆ ಕೊಡುತ್ತಿದ್ದ ತಿನ್ನಲಸಾಧ್ಯವಾದ ಆಹಾರ ತಿಂದು ಕೊಂಡಿರುವ ಶೋಚನೀಯ ಬದುಕು ನಡೆಸುವುದು ಅವರಿಗೀಗ ಅಸಾಧ್ಯವಾಗಿತ್ತು. ಬೇರೆ ದೇಶಗಳ ವಿಮೋಚನೆಗಾಗಿ ಹೋರಾಡಿದವರು ಸ್ವತಃ ಇತರರ ತೊತ್ತುಗಳಾಗಿ ಜೀವಿಸುವುದೇ?

H.M.I.S. ತಲ್‌ವಾರ್

ಜನಸಾಮಾನ್ಯರು ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿದ್ದ ರಾಜಕೀಯ ಹೋರಾಟಗಳ ಪ್ರಭಾವವೂ ಬ್ರಿಟಿಷರ ಅಧೀನದಲ್ಲಿದ್ದ ಮೂರು ಭಾರತೀಯ ಸೇನಾಪಡೆಗಳ ಸೈನಿಕರ ಮೇಲೆ ಬೀಳಲಾರಂಭಿಸಿತ್ತು. ಎಲ್ಲಾ ಕಡೆ ತಮ್ಮ ಸ್ಥಿತಿಯ ಬಗ್ಗೆ ತೀರಾ ಜಿಗುಪ್ಸೆಯ ವಾತಾವರಣ ಹರಡಿತ್ತು. ಬ್ರಿಟಿಷ್ ಭಾರತೀಯ ನೌಕಾಪಡೆ 'ರಿನ್'ನ ಸಮುದ್ರತಟದ ಘಟಕಗಳಲ್ಲಿ ಒಂದಾದ 'H.M.I.S. ತಲ್‌ವಾರ್'ನಲ್ಲೂ ಇದೇ ಸ್ಥಿತಿ ಇತ್ತು. 'ತಲ್‌ವಾರ್'ನ ಗೋಡೆಗಳ ಮೇಲೆಲ್ಲಾ 'ಕ್ವಿಟ್ ಇಂಡಿಯಾ', 'ಜೈ ಹಿಂದ್' ಇತ್ಯಾದಿ ಘೋಷಣೆಗಳು ಕಾಣಬರುತ್ತಿದ್ದವು. ಫೆಬ್ರವರಿ 2ರಂದು ಈ ಘಟಕದ ಪ್ರಮುಖ ಟೆಲಿಗ್ರಾಫಿಸ್ಟ್ ಬಿ. ಸಿ. ದತ್ತ ಎಂಬವರನ್ನು ರಾಜಕೀಯ ಘೋಷಣೆ ಬರೆದ 'ಅಪರಾಧಕ್ಕಾಗಿ' ಬಂಧಿಸಲಾಯಿತು. ಸಿಟ್ಟಿಗೆದ್ದ ಕೆಲವು ಸೈನಿಕರು ಆ ಘಟಕದ ಕಮಾಂಡರ್‌ನ ಕಾರಿನ ಮೇಲೆ ಕ್ವಿಟ್ ಇಂಡಿಯಾ ಎಂದು ಬರೆದು ಅದರ ಟಯರ್‌ಗಳನ್ನು 'ಟೀಸ್' ಮಾಡಿದರು. ಫೆಬ್ರವರಿ 8ರಂದು ಈ ನೌಕಾಘಟಕದ ಕೇಂದ್ರೀಯ ಸಂಪರ್ಕ ಕಛೇರಿಯ ಸೈನಿಕರಿಗೆ ಬೆಳಿಗ್ಗೆ 9-15ಕ್ಕೆ ದೈಹಿಕ ಕವಾಯತ್ (ಪರೇಡ್) ಇತ್ತು. ಸೈನಿಕರೆಲ್ಲ ತಮ್ಮ ಬ್ಯಾರಾಕುಗಳಲ್ಲಿ ಅದಕ್ಕೆ ತಯಾರು ನಡೆಸುತ್ತಿದ್ದಾಗ ಕಮಾಂಡರ್ ಹಠಾತ್ತನೇ ಅಲ್ಲಿಗೆ ನುಗ್ಗಿ "Get up sons of coolies, you son's of Indian bitches" ಎಂದು ಅವಾಚ್ಯವಾಗಿ ಒದರಿದ. ಅವನ ಬಾಯಿಂದ ಬಯ್ಗುಳಗಳ ಸುರಿಮಳೆಯೇ ಆಯಿತು. ಎಲ್ಲಾ ಸೈನಿಕರಿಗೂ ಇದು ಬಹಳ ಅತಿಯಾಯಿತೆನ್ನಿಸಿತು. ಇದರ ವಿರುದ್ಧ ಕೆಲವರು ದೂರಿತ್ತರೂ ಏನೂ ಕ್ರಮ ಕೈಗೊಳ್ಳಲಿಲ್ಲ. ಫೆ. 16ರಂದು ಹಾಗೆ ದೂರಿತ್ತವರನ್ನು ಕಮಾಂಡರ್ ಬೆದರಿಸಿದ. ಮರುದಿನ ಸೈನಿಕರಿಗೆ ಕೊಟ್ಟಿದ್ದ ಆಹಾರ ತಿನ್ನಲು ಅಸಾಧ್ಯವಾಗಿತ್ತು. ಆ ದಿನದ ಡ್ಯೂಟಿ ಆಫೀಸರಿಗೆ ಈ ಬಗ್ಗೆ ದೂರು ಸಲ್ಲಿಸಿದಾಗ ಆತ "ಭಿಕ್ಷುಕರಿಗೆ ಆರಿಸುವ ಹಕ್ಕಿಲ್ಲ" ಎಂದು ನಿರ್ಲಕ್ಷ್ಯದಿಂದ ಗುರುಗುಟ್ಟಿದ. ಸೈನಿಕರ ಸಹನೆಯ ಕಟ್ಟೆಯೊಡೆಯಿತು. ಇವೆಲ್ಲದರ ವಿರುದ್ಧ ಏನಾದರೂ ಮಾಡಬೇಕು. ಆದರೆ ಏನು ಮಾಡುವುದು? ಎಲ್ಲರೂ ಆಹಾರ ಸ್ವೀಕರಿಸಲು ನಿರಾಕರಿಸಿ ಉಪವಾಸ ಮುಷ್ಕರ ನಡೆಸಿದರು. ಮರುದಿನವೂ ಅದೇ ಗೋಳು. ಈ ದಿನವೂ ಯಾರೂ ಆಹಾರ ಸ್ವೀಕರಿಸಲಿಲ್ಲ. ಪರೇಡ್ ಮತ್ತಿತರ ಮೇಲಧಿಕಾರಿಗಳ ಆಜ್ಞೆಗಳನ್ನು ಬಹುಶಃ ಜೀವನದಲ್ಲಿ ಮೊದಲ ಬಾರಿಗೆ ಎಲ್ಲರೂ ನಿರ್ಲಕ್ಷಿಸಿದರು. ಘಟಕದ ಇತರ ವಿಭಾಗಗಳವರೂ ವಿಷಯ ತಿಳಿದಾಗ ಪರೇಡ್ ಇತ್ಯಾದಿಗಳನ್ನು ಬಹಿಷ್ಕರಿಸಿ ಹೊರಬಂದರು. ಇಡಿಯ 'ತಲ್‌ವಾರ್' ಸಂಪೂರ್ಣ ಮುಷ್ಕರ ಆಚರಿಸುತ್ತಿತ್ತು. ನೌಕಾಧಿಕಾರಿಗಳು ದಂಗಾದರು. ಸಂಧಾನದ ಪ್ರಯತ್ನ ನಡೆಯಿತು. ಸೈನಿಕರು ಮಾತುಕತೆ ನಡೆಸಲು ತಮಗೆ ಕಾಂಗ್ರೆಸ್, ಮುಸ್ಲಿಂಲೀಗ್ ಅಥವಾ ಕಮ್ಯುನಿಸ್ಟ್ ಪಕ್ಷದ ಯಾವುದಾದರೂ ರಾಷ್ಟ್ರನಾಯಕರ ಮಧ್ಯಸ್ಥಿಕೆ ಬೇಕೆಂದರು. 'ರಿನ್'ನ ಮುಂಬೈ ಘಟಕಗಳ ಮುಖ್ಯ ಸೇನಾಧಿಕಾರಿ ಇದಕ್ಕೆ ಹೇಗೆತಾನೇ ಒಪ್ಪಿಯಾನು? ಕೊನೆಗೆ ಉಪಾಯವಿಲ್ಲದೆ ಸೈನಿಕರ ಪ್ರತಿನಿಧಿಗಳನ್ನು ಆಮೇಲೆ ಶಿಕ್ಷಿಸುವುದಿಲ್ಲ ಎಂಬ ಭರವಸೆ ಪಡೆದಮೇಲೆ ಸಂಧಾನಕ್ಕೆ ಒಪ್ಪಿದರು. 'ತಲ್‌ವಾರ್'ನ ಮುಷ್ಕರದ ಸುದ್ದಿ ನೌಕಾ ಸಂಪರ್ಕ ವ್ಯವಸ್ಥೆಯ ಮೂಲಕ ತಟದಲ್ಲಿದ್ದ ಎಲ್ಲಾ ಘಟಕಗಳಿಗೂ, ಸಾಗರದಲ್ಲಿದ್ದ ಎಲ್ಲಾ ಯುದ್ಧಹಡಗುಗಳಿಗೂ ಕೂಡಲೇ ತಲುಪಿತು. ವಿದೇಶೀ ಬಂದರುಗಳಲ್ಲಿದ್ದ ನೌಕಾಸೈನಿಕರಿಗೂ ಈ ಸುದ್ದಿ ತಲುಪಿತು. ಎಲ್ಲೆಡೆಯೂ ಉದ್ರಿಕ್ತ ಭಾವನೆಹರಡಿತು. ಏಕೆಂದರೆ ಎಲ್ಲಾ ಕಡೆ ಸೈನಿಕರಗೋಳು ಒಂದೇ ಆಗಿತ್ತು. ಎಲ್ಲರೂ ಇದರ ವಿರುದ್ಧ ಏನಾದರೂ ಮಾಡಬೇಕೆಂದು ಯೋಚಿಸುತ್ತಿದ್ದರು.

ಮರುದಿನ, ಅಂದರೆ ಫೆ. 19ರ ಬೆಳಿಗ್ಗೆ ಮುಂಬೈಯ ಸುತ್ತಮುತ್ತಲ ಸಮುದ್ರತಟದ 11 ನೌಕಾಘಟಕಗಳು ಹಾಗೂ ಸುಮಾರು 60 ಯುದ್ಧನೌಕೆಗಳ 20,000 ಸೈನಿಕರು ಮುಷ್ಕರ ಆರಂಭಿಸಿದರು. ಎಲ್ಲಾ ಕಡೆ ಮೊದಲ ಬಾರಿಗೆ ಮೇಲಧಿಕಾರಿಗಳ ಅರ್ಥಹೀನ 'ಶಿಸ್ತ'ನ್ನು ಉಲ್ಲಂಘಿಸಿ ಅವರನ್ನು ಧಿಕ್ಕರಿಸಲಾಯ್ತು. ಬ್ರಿಟಿಷರ ಲಾಂಛನವಿರುವ ಬಿಳಿಯ ನೌಕಾಧ್ವಜವನ್ನು ಕೆಳಗೆಳೆದು ಹರಿದು ಹಾಕಿ ಅದರ ಬದಲು ಕಾಂಗ್ರೆಸ್, ಮುಸ್ಲಿಂಲೀಗ್ ಹಾಗೂ ಕೆಂಪು ಬಾವುಟಗಳನ್ನು ಹಾರಿಸಲಾಯಿತು. ಎಲ್ಲಾ ಘಟಕಗಳಿಂದ ಸೈನಿಕರ ಮೆರವಣಿಗೆ ರಸ್ತೆಗಳಲ್ಲಿ ಕವಾಯತು ಮಾಡುತ್ತಾ 'ತಲ್‌ವಾರ್' ಕಡೆಗೆ ಹೊರಡಲಾರಂಭಿಸಿತು. 'ಇಂಕ್ವಿಲಾಬ್ ಜಿಂದಾಬಾದ್', 'ಹಿಂದೂ ಮುಸ್ಲಿಂ ಒಂದಾಗಬೇಕು', 'ಜೈ ಹಿಂದ್' ಇತ್ಯಾದಿ ಜನತೆಯ ಘೋಷಣೆಗಳನ್ನು ಸೈನಿಕರ ಬಾಯಿಂದ ಕೇಳಲು ಆಶ್ಚರ್ಯದಿಂದ, ಉತ್ಸುಕತೆಯಿಂದ ಮುಂಬೈಯ ನಾಗರಿಕರು, ಹೆಂಗಸರು, ಮಕ್ಕಳು ದಾರಿಯುದ್ದಕ್ಕೂ ನೆರೆಯುತ್ತಿದ್ದರು; ಸೈನಿಕರಿಗೆ ಬೆಂಬಲ ಸೂಚಿಸುತ್ತಿದ್ದರು. 'ತಲ್‌ವಾರ್'ನಲ್ಲಿ ಸಭೆ ನಡೆದು 45 ಪ್ರತಿನಿಧಿಗಳ 'ನೌಕಾ ಕೇಂದ್ರೀಯ ಮುಷ್ಕರ ಸಮಿತಿ' (NCSC) ರಚಿತವಾಯಿತು. ಅವರ ಬೇಡಿಕೆಗಳಲ್ಲಿ ತಮ್ಮ ಗೋಳನ್ನು ಪರಿಹರಿಸುವ ಬೇಡಿಕೆಗಳೊಂದಿಗೆ ಅದಕ್ಕಿಂತಲೂ ಮುಖ್ಯವಾಗಿ 'ಆಝಾದ್ ಹಿಂದ್ ಸೇನೆ'ಯ ಸೈನಿಕರನ್ನು ಬಂಧನದಿಂದ ಬಿಡುಗಡೆ ಮಾಡಬೇಕು, ಇಂಡೋನೇಷ್ಯಾದಿಂದ ಭಾರತೀಯ ಸೇನೆಗಳನ್ನು ವಾಪಸ್ಸು ಕರೆಸಿಕೊಳ್ಳಬೇಕು ಎಂಬ ರಾಜಕೀಯ ಬೇಡಿಕೆಗಳಿದ್ದವೆಂಬುದು ಗಮನಾರ್ಹ.

ಬ್ರಿಟಿಷ್ ದಾಳಿಯ ಆರಂಭ

ಫೆಬ್ರುವರಿ 19ರಂದು ಮುಷ್ಕರದ ಸುದ್ದಿ ಕರಾಚಿ, ಕಲ್ಕತ್ತಾ ಹಾಗೂ ಇತರ ಭಾಗಗಳಿಗೂ ಹರಡಿತು. ಅಲ್ಲಿಯೂ ಫೆ. 20ರಿಂದ ಮುಷ್ಕರ ಆರಂಭವಾಯಿತು. ಕಲ್ಕತ್ತೆಯಲ್ಲಿ 'ರಿನ್'ನಮಹಿಳಾ ವಿಭಾಗವೂ ಸಕ್ರಿಯವಾಗಿ ಭಾಗವಹಿಸಿತು. ಮುಂಬೈಯಲ್ಲಿ 'ಕೇಂದ್ರ ಮುಷ್ಕರ ಸಮಿತಿ'ಯ ಸಭೆ ನಡೆದು ಶ್ರೀ ಎಂ. ಎಸ್. ಖಾನ್ ಅಧ್ಯಕ್ಷರಾಗಿ ಆಯ್ಕೆಯಾದರು. ಸಂಧಾನ ಸಮಿತಿ ಚುನಾಯಿಸಲ್ಪಟ್ಟಿತ್ತು. ಮುಷ್ಕರದಿಂದ ಗಲಿಬಿಲಿಗೊಂಡ 'ರಿನ್'ನ ಪ್ರಧಾನ ಸೇನಾಧಿಕಾರಿ ವೈಸ್-ಅಡ್ಮಿರಲ್ ಗೋಡ್‌ಫ್ರೇ ದಿಲ್ಲಿಯಿಂದ ಮುಂಬೈಗೆ ಬಂದ. ಮುಂಬೈಯಲ್ಲಿ ಎಲ್ಲಾ ನೌಕಾಸೈನಿಕರೂ ಮಧ್ಯಾಹ್ನ 3-30ರೊಳಗೆ ತಮ್ಮ ಘಟಕಗಳು ಹಾಗೂ ನೌಕೆಗಳಿಗೆ ವಾಪಾಸಾಗಬೇಕೆಂದೂ ಇಲ್ಲವಾದರೆ ಬಂಧಿಸಲಾಗುವುದೆಂದೂ ಬೆದರಿಕೆ ಹಾಕಿದ. ಈ ಬೆದರಿಕೆಗೆ ಮಣಿಯಲು ಯಾರೂ ಸಿದ್ಧರಿರಲಿಲ್ಲ. ಆದರೆ ಕೇಂದ್ರ ಮುಷ್ಕರ ಸಮಿತಿ ಶಾಂತಿ ಕಾಪಾಡುವ ಇಚ್ಛೆಯಿಂದ ಗೋಡ್‌ಫ್ರೇಯ ಆಜ್ಞೆ ಪಾಲಿಸುವಂತೆ ಸೈನಿಕರಿಗೆ ಹೇಳಿತು. ಹಲವರು ಮನಸ್ಸಿಲ್ಲದಿದ್ದರೂ ತಮ್ಮ ಪ್ರತಿನಿಧಿಗಳ ಸಮಿತಿಯ ಆಜ್ಞೆ ಪಾಲಿಸಿದರು. 3-30ಕ್ಕೆ ಸರಿಯಾಗಿ ಎಲ್ಲಾ ನೌಕಾಘಟಕಗಳನ್ನೂ ಮಿಲಿಟರಿ ಗಾರ್ಡುಗಳು ಸುತ್ತುವರಿಯಲಾರಂಭಿಸಿದರು. ಘಟಕಗಳು ಹಾಗೂ ಹಡಗುಗಳ ಒಳಗಡೆ ನೌಕಾಸೈನಿಕರೂ ಸಸ್ತ್ರಾಸ್ತ್ರ ಸಂಗ್ರಹವಿದ್ದಲ್ಲೆಲ್ಲಾ ಅವನ್ನು ಜೋಡಿಸಿ ಸಜ್ಜಾಗಲಾರಂಭಿಸಿದರು.

ಅತ್ತ ಸಂಧಾನ ಮಾತುಕತೆಗಳು ಆರಂಭವಾದವು. ಯಾವ ಒಪ್ಪಂದಕ್ಕೂ ಬರದೆ ಮುಗಿಯಿತು ಕೂಡಾ. ನೌಕಾ ಘಟಕಗಳ ಸುತ್ತಲಿಂದ ಮಿಲಿಟರಿ ಗಾರ್ಡುಗಳನ್ನು ತೆಗೆಯಲು ಸೇನಾಧಿಕಾರಿ ನಿರಾಕರಿಸಿದ. ಮುಷ್ಕರ ಸಮಿತಿ ಇದನ್ನು ಬಲವಾಗಿ ಪ್ರತಿಭಟಿಸಿ ಮರುದಿನ ಬೆಳಿಗ್ಗೆ 7-30ರೊಳಗೆ ಮಿಲಿಟರಿ ಕಾವಲನ್ನು ತಮ್ಮ ಘಟಕಗಳಿಂದ ತೆಗೆಯದಿದ್ದರೆ ಒಳಗೇ ಕೂತು ಉಪವಾಸ ಮುಷ್ಕರ ಆರಂಭಿಸುವಂತೆ ಎಲ್ಲಾ ಘಟಕಗಳು ಹಾಗೂ ನೌಕೆಗಳಿಗೆ ಸೂಚನೆ ಕಳಿಸಿತು.

ಫೆಬ್ರುವರಿ 21ರಂದು ಬ್ರಿಟಿಷರು ತಮ್ಮ ದಾಳಿ ಆರಂಭಿಸಿಯೇ ಬಿಟ್ಟರು. 'ಕ್ಯಾಸಲ್ ಬ್ಯಾರಾಕ್'ಎಂಬ ಘಟಕದ ಒಳನುಗ್ಗಲು ಮಿಲಿಟರಿ ಕಾವಲಿನವರು ಪ್ರಯತ್ನಿಸುತ್ತಿದ್ದಂತೆಯೇ ಒಳಗಡೆ ಮುಷ್ಕರನಿರತ ನೌಕಾ-ಸೈನಿಕರು ಶಸ್ತ್ರಾಗಾರಗಳ ಬೀಗ ಮುರಿದು ಕೈಗೆಸಿಕ್ಕ ಆಯುಧ ಹಿಡಿದು ತಯಾರಾಗಿ ನಿಂತರು. ಮಿಲಿಟರಿ ಗಾರ್ಡ್ ಹಿಂಜರಿಯಿತು. ಈ ಅವಕಾಶವನ್ನೇ ಉಪಯೋಗಿಸಿ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಲೆಹಾಕಿ ಅದನ್ನು ಸರಿಯಾಗಿ ವಿತರಣೆ ಮಾಡುವ, ರಕ್ಷಣಾವ್ಯವಸ್ಥೆ ಏರ್ಪಡಿಸುವ ಕೆಲಸವನ್ನು ತ್ವರಿತವಾಗಿ ಮುಗಿಸಲಾಯಿತು. ಬ್ರಿಟಿಷ್ ಮಿಲಿಟರಿಯ ಮತ್ತಷ್ಟು ತುಕಡಿಗಳು ಮುಂಬೈಯ ಕೋಟೆ ಪ್ರದೇಶದ ಸುತ್ತಮುತ್ತ ಜಮಾಯಿಸಲಾರಂಭಿಸಿದವು. ಮತ್ತೆ 'ಕ್ಯಾಸಲ್ ಬ್ಯಾರಾಕ್'ನಲ್ಲಿದ್ದ ಮುಷ್ಕರಕಾರರು ಹಾಗೂ ಹೊರಗಿದ್ದ ಬ್ರಿಟಿಷ್ ಸೈನಿಕರ ನಡುವೆ ಗುಂಡಿನ ಹಾರಾಟ ನಡೆಯಿತು. ತಾವು ಒಂದು ದೊಡ್ಡ ಶತ್ರುವಿನೊಂದಿಗೆ ಅಸಮ ಹೋರಾಟ ನಡೆಸುತ್ತಿದ್ದೇವೆ ಎಂದು ಗೊತ್ತಿದ್ದರೂ ಮುಷ್ಕರಕಾರರು ಜಗ್ಗಲಿಲ್ಲ. ಎರಡೂ ಕಡೆ ಗುಂಡಿನ ಹಾರಾಟಕ್ಕೆ ಹಲವರು ಬಲಿಯಾದರು. ಸುದ್ದಿ ಉಳಿದ ಘಟಕಗಳಿಗೂ, ನೌಕೆಗಳಿಗೂ ತಲುಪುತ್ತಿದ್ದಂತೆಯೇ ಸಾಗರದಲ್ಲಿ ಲಂಗರು ಹಾಕಿದ್ದ ಆರೇಳು 'ರಿನ್' ಯುದ್ಧಹಡಗುಗಳು ಯುದ್ಧಕ್ಕೆ ಸನ್ನದ್ಧರಾಗಿರಲು ಸೂಚನೆ ಕೇಂದ್ರಸಮಿತಿಯಿಂದ ಹೋಯಿತು. ಎಲ್ಲಾ ಹಡಗುಗಳೂ ತಮ್ಮ ತೋಪುಗಳನ್ನು ಮುಂಬೈ ಕಡೆ ಮುಖಮಾಡಿ ಯುದ್ಧಕ್ಕೆ ಸಜ್ಜಾಗಿ ನಿಂತವು. ಮತ್ತಷ್ಟು ಗುಂಡುಹಾರಾಟ ನಡೆಯಿತು. ನಂತರ ಕೇಂದ್ರ ಮುಷ್ಕರ ಸಮಿತಿಯ ಅಧ್ಯಕ್ಷರ ಸೂಚನೆಯ ಮೇರೆಗೆ ಯುದ್ಧವಿರಾಮ ಘೋಷಿಸಲಾಯ್ತು. 'ರಿನ್'ನ ಪ್ರಧಾನ ಸೇನಾಧಿಕಾರಿ "ಶರಣಾಗತರಾಗಿ ಇಲ್ಲವಾದರೆ ಸರಕಾರದ ಅಧೀನವಿರುವ ಅಗಾಧ ಬಲವನ್ನು ಪ್ರಯೋಗಿಸಲಾಗುವುದು. ಇದರಲ್ಲಿ ನೌಕಾಪಡೆಯಿಡೀ ನಾಶವಾದರೂ ಪರವಾಗಿಲ್ಲ" ಎಂದು ತಲೆಕೆಟ್ಟವನಂತೆ ಬೆದರಿಕೆಯ ಪ್ರಸಾರ ಭಾಷಣ ಮಾಡಿದ. ಕೇಂದ್ರ ಮುಷ್ಕರ ಸಮಿತಿ ಜನತೆಯ ಹಾಗೂ ರಾಷ್ಟ್ರನಾಯಕರ ಬೆಂಬಲ ಕೋರಿ ಹಾಗೂ ಮರುದಿನ ಅಂದರೆ ಫೆ. 22ರಂದು ಮುಂಬೈಯಲ್ಲಿ ಸಾಮೂಹಿಕ ಹರತಾಳ ಆಚರಿಸುವಂತೆ ಕೇಳಿಕೊಂಡಿತು. ಕರಾಚಿಯಲ್ಲೂ ಆ ದಿನ "ಎಚ್.ಎಂ.ಐ.ಎಸ್. ಹಿಂದೂಸ್ತಾನ್" ಹಡಗಿನ ಮೇಲೆ ಬ್ರಿಟಿಷರ ದಾಳಿಯನ್ನೂ ಹಿಮ್ಮೆಟ್ಟಿಸಲಾಯಿತು.

ಸಂಪೂರ್ಣ ಹರತಾಳ

ಮುಷ್ಕರಕ್ಕಿಳಿದ ನೌಕಾಸೈನಿಕರು ಆರಂಭದಿಂದಲೂ ತಮ್ಮ ಹೋರಾಟ ಬ್ರಿಟಿಷ್ ಜನಾಂಗಭೇದ ನೀತಿಯ ವಿರುದ್ಧವಾದ್ದರಿಂದ ಅದಕ್ಕೆ ಜನತೆಯ ಬೆಂಬಲ ಹಾಗೂ ರಾಷ್ಟ್ರನಾಯಕರ ಮಾರ್ಗದರ್ಶನ ಬಯಸಿತ್ತು. ಇದರಲ್ಲಿ ಜನತೆಯ ಬೆಂಬಲಕ್ಕೇನೂ ಕೊರತೆಯಿರಲಿಲ್ಲ. ಕಾರ್ಮಿಕರು, ಹೆಂಗಸರು, ಮಕ್ಕಳು ಉತ್ಸಾಹದಿಂದ ನೌಕಾಸೈನಿಕರಿಗೆ ಆಹಾರ-ತಿಂಡಿಗಳನ್ನು ತಮ್ಮ ಜೀವದ ಹಂಗುದೊರೆದು ಪೂರೈಸುತ್ತಿದ್ದರು. ಮುಂಬೈ ವಿದ್ಯಾರ್ಥಿ ಸಂಘವೂ ನೌಕಾಸೈನಿಕರಿಗೆ ಬೆಂಬಲವಾಗಿ ದುಡಿಯುತ್ತಿತ್ತು. ರಾಜಕೀಯ

ಪಕ್ಷಗಳಲ್ಲಿ ಕಮ್ಯೂನಿಸ್ಟ್ ಪಕ್ಷ ಬ್ರಿಟಿಷ್ ಸೇನಾಧಿಕಾರಿಯು "ಶರಣಾಗತರಾಗಿರಿ ಇಲ್ಲವೆ ನಾಶವಾಗಿರಿ" ಎಂಬ ಬೆದರಿಕೆಯನ್ನು ಯಾವ ಸ್ವಾಭಿಮಾನೀ ಭಾರತೀಯನೂ ಒಪ್ಪಲು ಸಾಧ್ಯವಿಲ್ಲ ಎಂದು ಹೇಳಿ ಮುಷ್ಕರಕಾರರ ವಿರುದ್ಧ ಬ್ರಿಟಿಷರ ದೌರ್ಜನ್ಯವನ್ನು ಪ್ರತಿಭಟಿಸಿ ಫೆ. 22ರಂದು ಮುಂಬೈಯಲ್ಲಿ ಸಂಪೂರ್ಣ ಹರತಾಳ ಆಚರಿಸಬೇಕೆಂದು ಕರೆಕೊಟ್ಟು ಅದಕ್ಕೆ ಪೂರಕವಾಗಿ ಮುಂಬೈಯಾದ್ಯಂತ ಪ್ರಚಾರ ನಡೆಸಿತು. ಕರಾಚಿ ಹಾಗೂ ಇತರೆಡೆಗಳಲ್ಲೂ ಕಮ್ಯೂನಿಸ್ಟ್ ಪಕ್ಷ ಸಾರ್ವಜನಿಕ ಸಭೆಗಳನ್ನೂ, ಹರತಾಳಗಳನ್ನೂ ಸಂಘಟಿಸಿತು. ಕರಾಚಿಯಲ್ಲಿ ಮೂವರು ಕಮ್ಯೂನಿಸ್ಟ್ ನಾಯಕರ ಬಂಧನವೂ ಆಯ್ತು.

ಕಾಂಗ್ರೆಸ್ ಪಕ್ಷದ ನಿಲುವು ಮಾತ್ರ ತೀರಾ ಭಿನ್ನವಾಗಿತ್ತು. ಮುಷ್ಕರಕಾರರ ಸಂಕಷ್ಟಗಳ ಬಗ್ಗೆ ಅವರಿಗೆ ಸಂಪೂರ್ಣ ಸಹಾನುಭೂತಿಯಿತ್ತಂತೆ. ಆದರೆ ಸೈನಿಕರು ಮತ್ತು ಬ್ರಿಟಿಷ್ ಸರಕಾರದ ನಡುವೆ 'ಸಾಮರಸ್ಯ' ಕೆಟ್ಟ ಬಗ್ಗೆ ಅವರಿಗೆ ಬಹಳ ಬೇಸರವಾಗಿತ್ತಂತೆ! "ಸರ್ದಾರ ಪಟೇಲರು ಕಾಂಗ್ರೆಸ್ ಪಕ್ಷದ ಪರವಾಗಿ ಹೊರಡಿಸಿದ ಹೇಳಿಕೆಯಲ್ಲಿ ಮುಷ್ಕರಕಾರರ ಕೇಂದ್ರ ಸಮಿತಿ ಹಾಗೂ ಕಮ್ಯೂನಿಸ್ಟ್ ಪಕ್ಷ ಕರೆಕೊಟ್ಟಂತೆ ಫೆ. 22ರಂದು ಹರತಾಳ ಆಚರಿಸಬೇಡಿ ಎಂದು ಮುಂಬೈ ನಾಗರಿಕರಿಗೆ ಕರೆಕೊಟ್ಟರು". ಆದರೆ "ಶರಣಾಗತರಾಗಿ ಇಲ್ಲವೆ ನಾಶವಾಗಿರಿ" ಎಂಬ ಬೆದರಿಕೆಗೆ ಯಾವ ಮುಂಬೈ ನಾಗರಿಕನೂ ಮಣಿಯಲು ಸಿದ್ಧನಿರಲಿಲ್ಲ. ಫೆ 22ರಂದು ಮುಂಬೈಯಲ್ಲಿ ಯಶಸ್ವೀ ಸಂಪೂರ್ಣ ಹರತಾಳ. ಮೂರು ಲಕ್ಷ ಗಿರಣಿ ಕಾರ್ಮಿಕರು, ಬಂದರು ಕೆಲಸಗಾರರು ಕೆಲಸ ನಿಲ್ಲಿಸಿ ಮೆರವಣಿಗೆ ತೆಗೆದರು. ಹರತಾಳ ಮಧ್ಯಾಹ್ನದವರೆಗೆ ಶಾಂತಿಯುತವಾಗಿತ್ತು. ಆದರೆ ಬ್ರಿಟಿಷ್ ಪೋಲೀಸ್ ಹಾಗೂ ಮಿಲಿಟರಿ ಬೇಕೆಂದೇ ಹುಚ್ಚಾಪಟ್ಟೆ ವರ್ತಿಸಿ, ಗೋಲೀಬಾರು ಮಾಡಿ ಸುಮಾರು 300 ಜನರನ್ನು ಬಲಿತೆಗೆದುಕೊಂಡಿತು. 100 ರಷ್ಟು ಜನ ಕಾರ್ಮಿಕ ವಸತಿ ಪ್ರದೇಶಗಳಲ್ಲೇ ಪೋಲೀಸ್ ಗುಂಡುಗಳಿಗೆ ಬಲಿಯಾದರು.

ಸಾಮಾನ್ಯ ಜನತೆ ತಮ್ಮ ಪರವಾಗಿ ಬ್ರಿಟಿಷ್ ದಮನದ ವಿರುದ್ಧ ಮುಂಬೈಯ ಬೀದಿಗಳಲ್ಲಿ ತಮ್ಮ ಜೀವನವನ್ನೇ ಪಣವಾಗಿಟ್ಟು ಕಾದಾಡುತ್ತಿರುವುದನ್ನು ಕಣ್ಣಾರೆಕಂಡ ಹಲವು ಮುಷ್ಕರನಿರತ ಸೈನಿಕರು ತಮ್ಮ ಹೋರಾಟವನ್ನು ಕೊನೆತನಕ ಮುಂದುವರೆಸಲು ನಿರ್ಧರಿಸಿದರು. ಆದರೆ ಅವರ ಪ್ರತಿನಿಧಿಗಳ ಸಮಿತಿಯ ಯೋಚನೆ ಬೇರೆಯೇ ಆಗಿತ್ತು. ಗೋಡ್‌ಫ್ರೇ ತನ್ನ ಬೆದರಿಕೆಯನ್ನು ಪುನರುಚ್ಚರಿಸಿದ. ಮಧ್ಯಾಹ್ನ ಮುಂಬೈ ನಾಗರಿಕರನ್ನು ಹಾಗೂ ಮುಷ್ಕರಕಾರರನ್ನು ಬೆದರಿಸಲು ಬ್ರಿಟಿಷ್ ವಿಮಾನಪಡೆಯ ವಿಮಾನಗಳು ಮುಂಬೈ ಮೇಲೆ ಹಾರಾಟ ನಡೆಸಿದವು. ದಿನವಿಡೀ ಕೇಂದ್ರ ಮುಷ್ಕರ ಸಮಿತಿ ರಾಜಕೀಯ ಮುಂದಾಳುಗಳೊಡನೆ ಸಮಾಲೋಚಿಸಿ ಕೊನೆಗೆ "ಶಸ್ತ್ರಗಳನ್ನು ಕೆಳಗಿಟ್ಟು ಶರಣಾಗತರಾಗಿ. ನಿಮ್ಮ ಸಂಕಷ್ಟಗಳ ಪರಿಹಾರಕ್ಕೆ ಕಾಂಗ್ರೆಸ್ ತನಗೆ ಸಾಧ್ಯವಿದ್ದದ್ದನ್ನೆಲ್ಲಾ ಮಾಡುತ್ತದೆ" ಎಂಬ ಸರ್ದಾರ ಪಟೇಲರ ಸಲಹೆ ಸಮಿತಿಯ ಮುಂದೆ ಬಂದಿತು. ಬಹಳ ಜನ ಇದಕ್ಕೆ ಸಿದ್ಧರಿರಲಿಲ್ಲ. ರಾತ್ರಿಯಿಡೀ ಚರ್ಚೆ ನಡೆದು ಫೆಬ್ರುವರಿ 23ರ ಬೆಳಿಗ್ಗೆ ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್ ನಾಯಕರ ಸಲಹೆಯ ಮೇಲೆ ಕೊನೆಗೆ ಶರಣಾಗತಿಗೆ ಒಪ್ಪಲಾಯಿತು. "ಸರ್ದಾರ್ ಪಟೇಲರ ಮಧ್ಯಪ್ರವೇಶ ಹಾಗೂ ಸಲಹೆಯ ಮೇರೆಗೆ ಭಾರತೀಯ ಜನತೆಯ ಕೈಗಳಿಗೆ ನಾವು ಶರಣಾಗುತ್ತಿದ್ದೇವೆ. ಸರ್ದಾರ್ ಪಟೇಲರು ಜವಾಬ್ದಾರಿ ವಹಿಸಿಕೊಂಡಿದ್ದಾರೆ. ನಮ್ಮ ಸಂಗಾತಿಗಳನ್ನು ಮುಷ್ಕರದಲ್ಲಿ ಪಾತ್ರ ವಹಿಸಿದ್ದಕ್ಕಾಗಿ ಶಿಕ್ಷಿಸಲಾಗುವುದಿಲ್ಲವೆಂಬ ಭರವಸೆ ಕೊಟ್ಟಿದ್ದಾರೆ" ಎಂದು ನಿರ್ಣಯದಲ್ಲಿ ಹೇಳಲಾಗಿತ್ತು. ಫೆಬ್ರುವರಿ 23ರ ಬೆಳಿಗ್ಗೆ ಎಂಟುಗಂಟೆಗೆ 3-4 ದಿನಗಳಿಂದ 'ರಿನ್'ನ ಎಲ್ಲಾ ಘಟಕಗಳಲ್ಲಿ ಹೆಮ್ಮೆಯಿಂದ ಹಾರಾಡುತ್ತಿದ್ದ ಕಾಂಗ್ರೆಸ್, ಲೀಗ್ ಹಾಗೂ ಕೆಂಬಾವುಟಗಳು ಇಳಿದು ಕಪ್ಪು ಬಾವುಟ ಹಾರಲಾರಂಭಿಸಿತು. ಹಿಂದಿನ ದಿನ ಕರಾಚಿಯಲ್ಲೂ 'ಎಚ್.ಎಂ.ಐ.ಎಸ್. ಹಿಂದೂಸ್ತಾನ್' 30 ನಿಮಿಷಗಳ ಧೀರ ಹೋರಾಟದ ನಂತರ ಸರಿಯಾದ ಯುದ್ಧ ಸಾಮಗ್ರಿಗಳ ಅಭಾವದಿಂದಾಗಿ ಶರಣಾಗಿತ್ತು.

ಕೇಂದ್ರ ಮುಷ್ಕರ ಸಮಿತಿ ತನ್ನ ಕೊನೆಯ ಸಂದೇಶದಲ್ಲಿ ಕಾಂಗ್ರೆಸ್ ಹಾಗೂ ಲೀಗಿನ ಬೆಂಬಲದ ಭರವಸೆಯಿಂದ ಮುಷ್ಕರ ವಾಪಸ್ಸು ಪಡೆಯಲಾಗಿದೆ ಹಾಗೂ ಒಬ್ಬನೇ ಒಬ್ಬ ಮುಷ್ಕರಕಾರನಿಗಾದರೂ ಏನಾದರು ಶಿಕ್ಷೆಯಾದರೆ ಕೂಡಲೇ ಮತ್ತೆ ಮುಷ್ಕರ ಮಾಡುವುದಕ್ಕೆ ಹಿಂಜರಿಯುವುದಿಲ್ಲ ಎಂದು ಹೇಳಿತ್ತು. ಜನತೆಗೆ ಅವರ ಬೆಂಬಲಕ್ಕಾಗಿ ಧನ್ಯವಾದ ಸಲ್ಲಿಸುತ್ತಾ ಹರತಾಳದಲ್ಲಿ ಪ್ರಾಣಾರ್ಪಣೆಮಾಡಿದ ಜನರಿಗೆ ಶ್ರದ್ಧಾಂಜಲಿ ಅರ್ಪಿಸಿತು. ಆ ಸಂದೇಶದಲ್ಲಿನ ಕೊನೆಯ ಮಾತುಗಳು ಹೀಗಿದ್ದವು-"ನಮ್ಮ ದೇಶದ ಜೀವನದಲ್ಲಿ ನಮ್ಮ ಮುಷ್ಕರ ಒಂದು ಚಾರಿತ್ರಿಕ ಘಟನೆ. ಯಾಕೆಂದರೆ ಮೊತ್ತಮೊದಲಬಾರಿಗೆ ಸೇನಾಪಡೆಗಳಲ್ಲಿನ ಮತ್ತು ರಸ್ತೆಗಳಲ್ಲಿನ ಜನರ ರಕ್ತ ಒಟ್ಟಿಗೇ ಒಂದೇ ಉದ್ದೇಶಕ್ಕಾಗಿ ಹರಿಯಿತು. ಸೇನಾಪಡೆಗಳಲ್ಲಿರುವ ನಾವು ಇದನ್ನು ಎಂದೆಂದೂ ಮರೆಯೆವು. ನೀವು, ನಮ್ಮ ಸೋದರ ಮತ್ತು ಸೋದರಿಯರು ಕೂಡಾ ಮರೆಯಲಾರಿರಿ ಎಂಬುದೂ ನಮಗೆಗೊತ್ತಿದೆ."

ಆದರೆ ಎಷ್ಟು ಜನರಿಗೆ ಇದರ ನೆನಪಿದೆ? ನಮ್ಮ ದೇಶವನ್ನಾಳುತ್ತಿರುವ ಮುಂದಾಳುಗಳಿಗೆ, ನಮಗೆ ಕೃತಜ್ಞತೆಯ ಭಾವನೆಯಿದ್ದಿದ್ದರೆ ಫೆಬ್ರುವರಿ 18ನ್ನು 'ಸೇನಾ ಪಡೆಗಳ ದಿನ' ಎಂದು ಆಚರಿಸಬೇಕಾಗಿತ್ತು. ಯಾಕೆಂದರೆ ಈ ಹೋರಾಟದಲ್ಲಿ ಒಂದೊಂದು ನೌಕಾಘಟಕಕ್ಕೂ, ಒಂದೊಂದು ಯುದ್ಧ ನೌಕೆಗೂ ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ತನ್ನದೇ ಆದ ವಿಶಿಷ್ಟ ವೀರಗಾಥೆಯಿದೆ. ನೌಕಾಪಡೆ ಮಾತ್ರವಲ್ಲ ಭಾರತೀಯ ವಾಯುಪಡೆ ಹಾಗೂ ಭೂಸೇನೆಯ ಸೈನಿಕರೂ ಅಲ್ಲಲ್ಲಿ 'ರಿನ್' ಸೈನಿಕರಿಗೆ ಬೆಂಬಲವಾಗಿ ನಿಂತು ಬ್ರಿಟಿಷರನ್ನು ದಿಗಿಲುಗೊಳಿಸಿದ್ದರು. ಆದರೆ ಕಾಂಗ್ರೆಸ್ ನಾಯಕರಿಗೆ ಇವೆಲ್ಲಾ ಅಷ್ಟು ಮಹತ್ವದ ವಿಷಯಗಳೆಂದು ಅನಿಸಲೇ ಇಲ್ಲ. ಶರಣಾಗತಿಯಾದ ಮೇಲೆ ಯಾವುದೇ ಮುಷ್ಕರಕಾರನಿಗೆ ಶಿಕ್ಷೆಯಾಗದಂತೆ ನೋಡಿಕೊಳ್ಳುವ ಭರವಸೆ ಕಾಂಗ್ರೆಸ್ ಹಾಗೂ ಲೀಗ್ ನಾಯಕರು ಕೊಟ್ಟಿದ್ದರೂ ಅದನ್ನು ಬಹಳಬೇಗನೇ ಮರೆತುಬಿಟ್ಟರು. ಶರಣಾಗತಿಯ ನಂತರ ಮುಷ್ಕರದ ನಾಯಕರೆಂದು ಒಟ್ಟು 900 ಜನರನ್ನು ಬಂಧಿಸಲಾಯ್ತು. ಮುಂಬೈಯಲ್ಲಿ ಬಂಧಿತರಾದವರಿಗೆ ಜೈಲಿನಲ್ಲಿ ಮತ್ತೆ ಅದೇ ತಿನ್ನಲಯೋಗ್ಯವಾದ ಆಹಾರ, ಹೀನ ಮಾತುಗಳು. ಪರಿಸ್ಥಿತಿ ಮತ್ತೆ ಜೈಲಿನೊಳಗೆ ಮುಷ್ಕರ ಹೂಡುವವರೆಗೆ ಹೋಯಿತು. ಕೊನೆಗೆ "ತಪ್ಪೊಪ್ಪಿಗೆ" ಕೊಟ್ಟ ಕೆಲವರನ್ನು ಬಿಟ್ಟು ಉಳಿದೆಲ್ಲರನ್ನೂ ನೌಕಾಪಡೆಯಿಂದ ತೆಗೆದು ಹಾಕಲಾಯಿತು. ಅನಂತರವೂ ಒಟ್ಟು 5000 ಸೈನಿಕರನ್ನು ಮನೆಗೆ ಕಳಿಸಲಾಯ್ತು. ಕಾಂಗ್ರೆಸ್ ಹಾಗೂ ಲೀಗ್ ನಾಯಕರು ತುಟಿಪಿಟಿಕ್ಕೆನ್ನಲಿಲ್ಲ. ಮುಂದೆ ಸರಕಾರದಿಂದ ನೇಮಿಸಲ್ಪಟ್ಟ ಒಂದು ಆಯೋಗವೂ 'ರಿನ್' ಸೈನಿಕರ ಮುಷ್ಕರಕ್ಕೆ ಅವರ ಸಂಕಷ್ಟಗಳು ಪರಿಹಾರವಾಗದಿದ್ದುದೇ ಮೂಲಕಾರಣ ಎಂದು ಹೇಳಿತು. ಆದರೆ ಈ ವರದಿಯನ್ನು ಪ್ರಕಟಿಸಿದಾಗ ತಾತ್ಕಾಲಿಕ ಸರ್ಕಾರದಲ್ಲಿ ಪಾಲುಗೊಂಡಿದ್ದ ಕಾಂಗ್ರೆಸ್ ಹಾಗೂ ಲೀಗ್ ನಾಯಕರು ಮುಷ್ಕರದ ಪರಿಣಾಮವಾಗಿ ಕೆಲಸ ಕಳೆದುಕೊಂಡ ಸೈನಿಕರಿಗೆ ಮತ್ತೆ ಕೆಲಸ ಕೊಡುವುದರ ಬಗ್ಗೆ ಅಥವಾ ಬೇರೆ ಜೀವನೋಪಾಯ ಕಲ್ಪಿಸುವುದರ ಬಗ್ಗೆ ಏನೂ ಹೇಳಲಿಲ್ಲ. ಮುಂದೆಯೂ ಏನೂ ಮಾಡಲಿಲ್ಲ. ಸೈನಿಕರ ನಿಜವಾದ ತೊಂದರೆಗಳನ್ನು ಪರಿಹರಿಸಲು ಕೂಡ ಏನೂ ಮಾಡಲಿಲ್ಲ. ನಮ್ಮ ಸೈನಿಕರ, ನಮ್ಮ ಜನತೆಯ ಅಗಾಧ ದೇಶಪ್ರೇಮದ ಬಗ್ಗೆ ನಾವು ಹೆಮ್ಮೆಪಡುವುದರೊಂದಿಗೇ ಈ ಕೃತಘ್ನ ಪುಢಾರಿಗಳ ಬಗ್ಗೆ ನಾಚಿಕೆಯಿಂದ ತಲೆತಗ್ಗಿಸುವಂತಾಗಿದೆ.

ಫೆಬ್ರುವರಿ 18ರಂದು 'ತಲ್‌ವಾರ್'ನಲ್ಲಿ ಮುಷ್ಕರ ಆರಂಭವಾಗಿತ್ತು. 19ಕ್ಕೆ ಬ್ರಿಟನ್ನಿನ ಪಾರ್ಲಿಮೆಂಟಿನಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಬಗ್ಗೆ ವಿಚಾರ ಮಾಡಲು 'ಕೇಬಿನೆಟ್ ಕಮಿಷನ್' ಕಳಿಸಲಾಗುವುದೆಂದು ಘೋಷಿಸಲಾಯ್ತು. ಕಾಂಗ್ರೆಸ್ ಹಾಗೂ ಲೀಗ್ ನಾಯಕರು ನೌಕಾಪಡೆಯ ಸೈನಿಕರ ಮುಷ್ಕರದ ಬಗ್ಗೆ ತಳೆದ ಧೋರಣೆಗೆ ಇದೇ ಕಾರಣ. ತಮ್ಮ ಕೈಗೆ ರಾಜಕೀಯ ಅಧಿಕಾರ ಹಸ್ತಾಂತರವಾಗುವ ಸಾಧ್ಯತೆಗಳಿರುವಾಗ ಬ್ರಿಟಿಷರೊಡನೆ ರಾಜಿಮಾಡಿಕೊಳ್ಳಲು ಅವರು ತಯಾರಿದ್ದರೇ ವಿನಹ ಜನಸಾಮಾನ್ಯರ ಚಳವಳಿಗಳ ಮೂಲಕ ಬ್ರಿಟಿಷರನ್ನು ಬೇರು ಸಹಿತ ಭಾರತದಿಂದ ಹೊರಗೆಸೆಯುವುದು ಅವರಿಗೆ ಬೇಕಿರಲಿಲ್ಲ. ಆದ್ದರಿಂದಲೇ ಜನಸಾಮಾನ್ಯರ ಹೋರಾಟಗಳು ಕ್ರಾಂತಿಕಾರೀ ರೂಪ ತಳೆಯದಂತೆ ಕಾಂಗ್ರೆಸ್ ಹಾಗೂ ಲೀಗ್ ನಾಯಕರು ಜಾಗರೂಕರಾಗಿರುತ್ತಿದ್ದರು. 'ರಿನ್'ನ ಸೈನಿಕ ಮುಷ್ಕರಕಾರರಿಗೆ ಸರ್ದಾರ್ ಪಟೇಲ್ ಹಾಗೂ ಜಿನ್ನಾರವರ 'ಸಲಹೆ'ಯ ಹಿನ್ನೆಲೆ ಇದೇ ಆಗಿತ್ತು. 'ಸಲಹೆ' ಕೊಡದಿರುತ್ತಿದ್ದರೆ ಬಹುಶಃ ರಿನ್ ಬಂಡಾಯ ಬೇರೆಯದೇ ಆದ ರೂಪ ಪಡೆಯುತ್ತಿತ್ತು. 1947ರಲ್ಲಿ ರಾಜಕೀಯ ಅಧಿಕಾರ ಹಸ್ತಾಂತರದಿಂದ ದೊರೆತ ಸ್ವಾತಂತ್ರ್ಯ ಗಟ್ಟಿಸ್ವರೂಪದ್ದಾಗಿರುತ್ತಿತ್ತು. ಸ್ವಾತಂತ್ರ್ಯದ ನಂತರವೂ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪಳೆಯುಳಿಕೆಗಳು ಮುಂದುವರಿಯಲು ಸಾಧ್ಯವಿರುತ್ತಿರಲಿಲ್ಲ.

(ಸಂಗ್ರಹ)

[ನಮ್ಮ ಮುಷ್ಕರ ನಮ್ಮ ದೇಶದ ಜೀವನದಲ್ಲಿ ಒಂದು ಚಾರಿತ್ರಿಕ ಘಟನೆ. ಯಾಕೆಂದರೆ ಮೊತ್ತಮೊದಲ ಬಾರಿಗೆ ಸೇನಾಪಡೆಗಳಲ್ಲಿನ ಹಾಗೂ ರಸ್ತೆಗಳಲ್ಲಿನ ಜನರ ರಕ್ತ ಒಂದೇ ಉದ್ದೇಶಕ್ಕಾಗಿ ಒಟ್ಟಿಗೇ ಹರಿಯಿತು.

ಸೇನಾಪಡೆಗಳಲ್ಲಿರುವ ನಾವು ಇದನ್ನು ಎಂದೆಂದೂ ಮರೆಯೆವು. ನೀವು, ನಮ್ಮ ಸೋದರರು ಮತ್ತು ಸೋದರಿಯರು, ಕೂಡಾ ಇದನ್ನು ಮರೆಯಲಾರಿರಿ ಎಂದು ನಮಗೆ ತಿಳಿದಿದೆ.]

–ರಿನ್‌ನ ಕೇಂದ್ರ ಮುಷ್ಕರ ಸಮಿತಿಯ ಕೊನೆಯ ಹೇಳಿಕೆ.

ರೈತಸಂಘದ ಸಭೆ

ದ.ಕ. ಜಿಲ್ಲಾ ಕುಂದಾಪುರ ತಾಲೂಕು ಕೋಣಿಗ್ರಾಮದ ರೈತ ಸಂಘದ ವಿಸ್ತೃತ ಸಭೆಯು 3–8–81 ರಂದು ಸಂಘದ ಅಧ್ಯಕ್ಷ ಕಾಂ. ಕೆ. ಆನಂದ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಜಿಲ್ಲಾ ರೈತ ಸಂಘದ ಅಧ್ಯಕ್ಷ ಅಬ್ರಹಾಂ ಕರ್ಕಡರು ಆಗಮಿಸಿದ್ದರು.

ರೈತಸಂಘದ ಕಾರ್ಯದರ್ಶಿ ಕಾಂ. ಕೆ. ಅನಂತಪೂಜಾರಿಯವರು ಚಟುವಟಿಕೆಯ ವರದಿಯನ್ನಿತ್ತರು. ಕಾಂ. ಅಬ್ರಹಾಂ ಕರ್ಕಡರು ಮಾತನಾಡುತ್ತಾ, ರೈತಸಂಘಟನೆ ಶಕ್ತಿಯುತವಾಗಿ ಬೆಳೆಸುವುದರೊಂದಿಗೆ ಕೃಷಿ ಕೂಲಿಕಾರರ ಸಂಘಟನೆಯನ್ನು ಬಲಗೊಳಿಸಲು ಕರೆ ಇತ್ತರು.

27-8-81, 28-8-81ರಂದು ಕೋಟೇಶ್ವರದಲ್ಲಿ ನಡೆಯಲಿರುವ ತಾಲೂಕು ಮಟ್ಟದ ರೈತಶಿಭಿರಕ್ಕೆ 10 ಮಂದಿ ಶಿಭಿರಾರ್ಥಿಗಳನ್ನು ಕಳಿಸಲು ತೀರ್ಮಾನಿಸಲಾಯಿತು.

●

ಬೇಕಾಗಿದ್ದಾರೆ:

ಹಿಂದೂಸ್ತಾನದಲ್ಲಿ ಕ್ರಾಂತಿ ಪ್ರಚೋದಿಸಲು ಧೀರಯೋಧರು

ವೇತನ	:	ಸಾವು
ಪಾರಿತೋಷಕ	:	ಹುತಾತ್ಮ ಪಟ್ಟ
ಪಿಂಚಣಿ	:	ಸ್ವಾತಂತ್ರ್ಯ
ಯುದ್ಧಭೂಮಿ	:	ಹಿಂದೂಸ್ತಾನ

1913ರಲ್ಲಿ ಅಮೇರಿಕದ ಸಾನ್‌ಫ್ರಾನ್ಸಿಸ್ಕೊ ನಗರದಿಂದ ಭಾರತೀಯ ಕ್ರಾಂತಿಕಾರರು ಪ್ರಕಟಿಸಿದ 'ಘದರ್' (ಬಂಡಾಯ, ಕ್ರಾಂತಿ) ಪತ್ರಿಕೆಯ ಪ್ರಥಮ ಸಂಚಿಕೆಯಲ್ಲಿತ್ತು ಈ ಮೇಲಿನ ಪ್ರಕಟಣೆ.

'ಘದರ್' ಪತ್ರಿಕೆ ಗುರುಮುಖಿ, ಉರ್ದು, ಹಿಂದಿ, ಬಂಗಾಳಿ, ಮರಾಠಿ ಮತ್ತು ಬೇರೆ ಕೆಲವು ಭಾರತೀಯ ಭಾಷೆಗಳಲ್ಲೂ ಪ್ರಕಟವಾಗುತ್ತಿತ್ತು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154

EDITOR : M. K. BHAT